ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 42 | ಅಕ್ಟೋಬರ್ 11–17, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಬೆಳಗಾವಿ ದುರಂತ ಸಾವುಗಳಿಗೆ ಯಾರು ಹೊಣೆ?





ಹೊಸ ಶಿಕ್ಷಣ ನೀತಿ: ಅಂಗನವಾಡಿಗಳ ಪಾಲಿನ ನೇಣುಗಂಬ



ಲಖೀಮ್ ಪುರ್ ಖೇರಿ ಅತ್ಯಂತ ಹೊಲಸು ಹತ್ಯೆ



ಜಾತಿ ಗಣತಿ: ಬಿಜೆಪಿಯ ನಿಜ ಮುಖ



ಫೇಸ್ ಬುಕ್ ಭೀಕರ ಮುಖದ ಗುಟ್ಟು ರಟ್ಟು

ಅಜಯ್ ಮಿಶ್ರರನ್ನು ಮಂತ್ರಿ ಸ್ಥಾನದಿಂದ ವಜಾ ಮಾಡಿ

– ಸಿಪಿಐ(ಎಂ) ಪೊಲಿಟ್‌ಬ್ಯುರೊ

ಅಕ್ಟೋಬರ್ 3 ರಂದು ಲಖೀಂಪುರ್ ಖೇರಿಯಲ್ಲಿ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ರೈತರನ್ನು ತರಿದು ಹಾಕುವ ಬರ್ಬರ ಅತ್ಯಾಚಾರದಲ್ಲಿ ನೇರ ಹೊಣೆಯಿರುವ ಗೃಹ ವ್ಯವಹಾರಗಳ ರಾಜ್ಯಮಂತ್ರಿ ಅಜಯ್ ಮಿಶ್ರ ತೇನಿಯವರನ್ನು ವಜಾ ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ. ಕಾನೂನು ವ್ಯವಸ್ಥೆಯನ್ನು ರಕ್ಷಿಸುವ ಆದೇಶವಿರುವ ಒಂದು ಅತ್ಯಂತ ಸೂಕ್ಷ್ಮ ಮಂತ್ರಾಲಯದಲ್ಲಿ ಒಬ್ಬ ಮಂತ್ರಿಯಾಗಿರುವ ಈತನೇ ಸಪ್ಟಂಬರ್ 25ರಂದು ಎಲ್ಲ ನೀತಿ-ನಿಯಮಗಳನ್ನು ಉಲ್ಲಂಘಿಸಿ ಒಂದು ಅತ್ಯಂತ ಉದ್ರೇಕಕಾರೀ ಭಾಷಣವನ್ನು ಮಾಡಿದರು, ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟಿಸುತ್ತಿರುವ ರೈತರನ್ನು ಬೆದರಿಸುವ, ಅವರ ವಿರುದ್ಧ ಹಿಂಸಾಚಾರವನ್ನು ಪ್ರಚೋದಿಸುವ ಭಾಷಣವದು.

ಈ ಹತ್ಯೆಗಳ ನಂತರವೂ, ಆತನ ಮಗ ಇದರಲ್ಲಿ ಇದ್ದರೂ, ಆತ ಈ ಅತ್ಯಾಚಾರವನ್ನು ಸಮರ್ಥಿಸಿಕೊಂಡಿದ್ದಾರೆ, ರೈತರನ್ನು ದೂಷಿಸಿದ್ದಾರೆ. ಬೆಂಗಾವಲು ವಾಹನಗಳು ಸೈರನ್ ಬಾರಿಸುತ್ತ ರೈತರ ಮೇಲೆ ನುಗ್ಗಿ ಸಾಯಿಸಿರುವ ಸ್ಪಷ್ಟ ವೀಡಿಯೋ ಸಾಕ್ಷ್ಯವಿದೆ. ಗಾಯಗೊಂಡವರು ಮತ್ತು ಕೊಲ್ಲಲ್ಪಟ್ಟವರು "ಹೊರಗಿನವರು", ಎಂದು ಆಪಾದಿಸುವ ವರೆಗೂ ಈ ಮಂತ್ರಿ ಹೋಗಿದ್ದಾರೆ. ಇದರಲ್ಲಿ "ಖಾಲಿಸ್ತಾನಿ' ಮಂದಿ ಶಾಮೀಲಾಗಿದ್ದಾರೆ ಎಂದು ತನ್ನನ್ನು ಮತ್ತು ತನ್ನ ಸಂಬಂಧಿಕರನ್ನು ರಕ್ಷಿಸಿಕೊಳ್ಳಲು ಅವರು ಹೇಳಿಕೊಂಡಿದ್ದಾರೆ.

ಆತ ಗೃಹ ರಾಜ್ಯಮಂತ್ರಿಯಾಗಿ ಇರುವಾಗ ಒಂದು ನಿಷ್ಪಕ್ಷ ತನಿಖೆ ಸಾಧ್ಯವಿಲ್ಲ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಆದಿತ್ಯನಾಥ ಸರಕಾರ ಪ್ರಜಾಪ್ರಭುತ್ವಕ್ಕೆ ಬೀಗ ಹಾಕಿರುವುದು, ದುಃಖಿತಪ್ತ ಕುಟುಂಬದವರನ್ನು ಭೇಟಿಯಾಗಲು ಹೊರಟಿರುವ ಪ್ರತಿಪಕ್ಷಗಳ ಮುಖಂಡರನ್ನು ಬಂಧಿಸಿರುವುದು ಅತ್ಯಂತ ಖಂಡನಾರ್ಹ ಎಂದಿದೆ, ಅವರನ್ನು ಬಿಡುಗಡೆ ಮಾಡಬೇಕು ಮತ್ತು ಗಾಯಗೊಂಡವರ ಕುಟುಂಬಗಳನ್ನು ಭೇಟಿಯಾಗಲು ಮುಕ್ತ ಓಡಾಟಕ್ಕೆ ಅವಕಾಶವಿರಬೇಕು ಎಂದು ಆಗ್ರಹಿಸಿದೆ.

ಉತ್ತರಪ್ರದೇಶದಲ್ಲಿ 4 ರೈತ ಪ್ರತಿಭಟನಾಕಾರರ ಸಾವು-ಕೇಂದ್ರಮಂತ್ರಿಯ ತಕ್ಷಣ ವಜಾ ಮತ್ತು ನ್ಯಾಯಾಂಗ ತನಿಖೆಗೆ ಕಿಸಾನ್ ಮೋರ್ಚಾ ಆಗ್ರಹ

ಉತ್ತರಪ್ರದೇಶದ ಲಖಿಂಪುರ ಖೇರಿ ಎಂಬಲ್ಲಿ ಅಕ್ಟೋಬರ್ 3 ರಂದು ಕೇಂದ್ರ ಗೃಹ ರಾಜ್ಯಮಂತ್ರಿ ಅಜಯ್ ಮಿಶ್ರ ತೇನಿ ಮತ್ತು ಉತ್ತರಪ್ರದೇಶದ ಉಪಮುಖ್ಯಮಂತ್ರಿಗಳ ಭೇಟಿಯ ಸಂದರ್ಭದಲ್ಲಿ ಶಾಂತಿಯುತ ಪ್ರತಿಭಟನೆಯಲ್ಲಿ ಭಾಗವಹಿಸಲು ಬಂದಿದ್ದ ರೈತರ ಮೇಲೆ ಬಿಜೆಪಿ ಮಂದಿಯ ಹಲ್ಲೆಯಲ್ಲಿ ನಾಲ್ಕು ರೈತರ ಸಾವು ಉಂಟಾಗಿದ್ದು, ಈ ಪ್ರದೇಶದ ಕಿಸಾನ್ ಮೋರ್ಚಾ ಮುಖಂಡ ತೇಜಿಂದರ್ ಸಿಂಗ್‌ವಿರ್ಕ್ ಸೇರಿದಂತೆ 12ರಿಂದ 15 ರೈತರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ.

ಈ ಕುರಿತು ಇಂಟರ್ನೆಟ್ ಮೂಲಕ ತುರ್ತು ಪತ್ರಿಕಾಗೋಷ್ಠಿ ನಡೆಸಿದ ಸಂಯುಕ್ತ ಕಿಸಾನ್ ಮೋರ್ಚಾದ ಸಮನ್ವಯ ಸಮಿತಿಯ ಮುಖಂಡರು ನೀಡಿರುವ ಮಾಹಿತಿ ಪ್ರಕಾರ ಈ ನಾಲ್ಕು ರೈತರ ಹೆಸರುಗಳು ಹೀಗಿವೆ: ಲವ್‌ಪ್ರೀತ್ ಸಿಂಗ್(20 ವರ್ಷ), ದಲ್ಜೀತ್ ಸಿಂಗ್(35). ನಚತ್ತರ್ ಸಿಂಗ್(60) ಮತ್ತು ಗುರ್ವಿಂದರ್‌ಸಿಂಗ್(19).

ಈ ಪ್ರದೇಶದ ಸಂಸದ್ ಸದಸ್ಯನಾಗಿರುವ ಈ ಕೇಂದ್ರಮಂತ್ರಿ ಇತ್ತೀಚೆಗೆ ಹೋರಾಟನಿರತ ರೈತರ ಬಗ್ಗೆ ಬಹಳ ಕೆಟ್ಟದಾಗಿ ಟಿಪ್ಪಣಿ ಮಾಡಿದ್ದು ಈ ಕುರಿತ ವೀಡಿಯೋ ಸಾರ್ವಜನಿಕವಾಗಿ ಲಭ್ಯವಿದೆ. ಈ ಭಾಗದ ರೈತರಲ್ಲಿ ಇದು ಆಕ್ರೋಶ ಉಂಟು ಮಾಡಿತ್ತು. ಆದ್ದರಿಂದಲೇ ಸುತ್ತಮುತ್ತಲ ಪ್ರದೇಶಗಳಿಂದ ರೈತರು ಈ ಪ್ರತಿಭಟನೆಯಲ್ಲಿ ಭಾಗವಹಿಸಲು ಬಂದಿದ್ದರು ಎಂದು ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡರು ಹೇಳಿದ್ದಾರೆ.

ಈ ಹೀನ ಕೃತ್ಯ ನಡೆಯುತ್ತಿದ್ದ ಸಂದರ್ಭದಲ್ಲೇ ಹರ್ಯಾಣದ ಮುಖ್ಯಮಂತ್ರಿ ಕೂಡ ಬಿಜೆಪಿ ಕಾರ್ಯಕರ್ತರಿಗೆ ಕೈಯಲ್ಲಿ ಲಾಟಿ ಹಿಡಿದು ಪ್ರತಿಭಟನಾಕಾರರಿಗೆ ತಕ್ಕ ಶಾಸ್ತಿ ಮಾಡಿ, ಅದಕ್ಕಾಗಿ ನೀವು ಜೈಲಿಗೆ ಹೋದರೂ, ಮುಖಂಡರುಗಳಾಗಿ ಜೈಲಿನಿಂದ ಹೊರಗೆ ಬರುತ್ತೀರಿ ಎಂದು ಹೇಳಿರುವುದಾಗಿಯೂ ವರದಿಯಾಗಿದೆ.

ಅಂದರೆ ಹತಾಶ ಬಿಜೆಪಿ ಮುಖಂಡರು ಈಗ ಜನರನ್ನು ಉದ್ರೇಕಿಸುವ ಕೆಲಸಕ್ಕೆ ಕೈಹಾಕಿದ್ದಾರೆ ಎಂದಿರುವ ಸಂಯುಕ್ತ ಕಿಸಾನ್‌ಮೋರ್ಚಾದ ಸಮನ್ವಯ ಸಮಿತಿ 1. ಈ ಜಘನ್ಯ ಘಟನೆಗೆ ಕಾರಣರಾದ ಕೇಂದ್ರ ಗೃಹ ವ್ಯವಹಾರಗಳ ರಾಜ್ಯಮಂತ್ರಿ ಅಜಯ್ ಮಿಶ್ರ ತೇನಿಯವರನ್ನು ಕೂಡಲೇ ಕೇಂದ್ರ ಸಂಪುಟದಿಂದ ವಜಾ ಮಾಡಬೇಕು; 2. ಆಶಿಷ್ ಮಿಶ್ರ ಮತ್ತಿತರರ ಮೇಲೆ ತಕ್ಷಣವೇ ಕೊಲೆ ಕೇಸುಗಳನ್ನು ಹಾಕಬೇಕು; 3.ಹಾಲಿ ಸುಪ್ರಿಂ ಕೋರ್ಟ್ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆ ನಡೆಸಬೇಕು; 4. ಹರ್ಯಾಣದ ಮುಖ್ಯಮಂತ್ರಿ ಕ್ಷಮೆ ಕೋರಬೇಕು ಮತ್ತು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದೆ.

ಈ ಆಗ್ರಹಗಳ ಮೇಲೆ ಅಕ್ಟೋಬರ್ 4 ರಂದು ದೇಶಾದ್ಯಂತ ಡಿ.ಸಿ. ಕಚೇರಿಗಳ ಮುಂದೆ ಮತಪ್ರದರ್ಶನ ನಡೆಸಲು ಸಂಯುಕ್ತ ಕಿಸಾನ್ ಮೋರ್ಚಾ ತನ್ನೆಲ್ಲ ಘಟಕಗಳಿಗೆ ಕರೆ ನೀಡಿದೆ.

ಬಿಜೆಪಿ-ಆರೆಸ್ಸೆಸ್ ಮಂದಿ ಕಳೆದ ಹತ್ತುತಿಂಗಳಿಂದ ಶಾಂತಿಯುತವಾಗಿ ನಡೆದುಕೊಂಡು ಬಂದಿರುವ ರೈತರ ಹೋರಾಟವನ್ನು ಹೇಗಾದರೂ ಮಾಡಿ ಒಡೆಯಲು ವಿವಿಧ ಹೊಲಸು ತಂತ್ರಗಳನ್ನು ಅನುಸರಿಸುತ್ತಿರುವುದು ಸ್ಪಷ್ಟವಾಗುತ್ತಿದೆ. ಆದರೂ ರೈತರು ಇದರಿಂದ ಉದ್ವೇಗಕ್ಕೆ ಒಳಗಾಗದೆ ಹೋರಾಟವನ್ನು ಶಾಂತಿಯುತವಾಗಿ, ಅಹಿಂಸಾತ್ಮಕವಾಗಿಯೇ ಮುಂದುವರೆಸುತ್ತಾರೆ ಎಂದು ಸಂಯುಕ್ತ ಕಿಸಾನ್ ಮೋರ್ಚಾದ ಸಮನ್ವಯ ಸಮಿತಿಯ ಮುಖಂಡರು ಹೇಳಿದ್ದಾರೆ.

"ಯಾವ ಸಂದೇಶ ಕೊಡುತ್ತಿದ್ದೀರಿ?" -ಉ.ಪ್ರ. ಸರಕಾರಕ್ಕೆ ಸುಪ್ರಿಂ ಕೋರ್ಟ್

ಲಖಿಂಪುರ ಖೇರಿಯ ಘಟನೆಗೆ ಸಂಬಂಧಿಸಿದಂತೆ ವಿಚಾರಣೆ ನಡೆಸುತ್ತಿರುವ ಸುಪ್ರಿಂಕೋರ್ಟ್ ಉತ್ತರ ಪ್ರದೇಶ ಸರ್ಕಾರ ತೆಗೆದುಕೊಂಡಿರುವ ಕ್ರಮ ತೃಪ್ತಿದಾಯಕವಾಗಿಲ್ಲ ಎಂದು ಹೇಳಿರುವುದಾಗಿ ವರದಿಯಾಗಿದೆ.

ಅಕ್ಟೋಬರ್ 7 ರಂದು ಉತ್ತರಪ್ರದೇಶದ ಇಬ್ಬರು ವಕೀಲರ ಪತ್ರವನ್ನು ಆಧರಿಸಿ ಈ ಪ್ರಕರಣದ ವಿಚಾರಣೆಯನ್ನು ಆರಂಭಿಸಿದ ಸುಪ್ರಿಂ ಕೋರ್ಟ್ ಅಕ್ಟೋಬರ್ 8 ರಂದು ಘಟನೆಯ ಸಂಪೂರ್ಣ ವರದಿ ಸಲ್ಲಿಸುವಂತೆ ತಿಳಿಸಿತ್ತು, ಅದರಲ್ಲಿ ಆರೋಪಿಗಳ ಬಗ್ಗೆ ಉಲ್ಲೇಖವಿರಬೇಕು ಎಂದೂ ತಿಳಿಸಿತ್ತು.

ಆದರೆ ಅಕ್ಟೋಬರ್ 8ರಂದು ವಿಚಾರಣೆ ಆರಂಭವಾಗುವ ವೇಳೆಗೂ ಯಾರನ್ನೂ ಬಂಧಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ "ನೀವು ಯಾವ ಸಂದೇಶವನ್ನು ಕೊಡುತ್ತಿದ್ದೀರಿ. ಸಾಮಾನ್ಯ ಸಂದರ್ಭಗಳಲ್ಲೂ ಪೋಲೀಸ್ ತಕ್ಷಣವೇ ಹೋಗಿ ಆರೋಪಿಯನ್ನು ಹಿಡಿಯುವುದಿಲ್ಲವೇ? ನಾವು ಒಂದು ಜವಾಬ್ದಾರಿಯುತ ಸರಕಾರ, ವ್ಯವಸ್ಥೆ ಮತ್ತು ಪೋಲೀಸ್‌ನ್ನು ನಿರೀಕ್ಷಿಸುತ್ತೇವೆ" ಎಂದು ಸುಪ್ರಿಂ ಕೋರ್ಟ್ ಉತ್ತರಪ್ರದೇಶ ಸರಕಾರಕ್ಕೆ ಹೇಳಿರುವುದಾಗಿ ವರದಿಯಾಗಿದೆ.

ಆಸಿಷ್ ಮಿಶ್ರ(ಕೇಂದ್ರ ಮಂತ್ರಿಯ ಮಗ)ಗೆ ಸಮನ್ಸ್ ಕಳಿಸಲಾಗಿದೆ ಎಂದುದಕ್ಕೆ "ನೀವು ಎಲ್ಲರನ್ನೂ ಒಂದೇ ರೀತಿಯಲ್ಲಿ ಕಾಣುತ್ತೀರಾ? ನೋಟೀಸ್ ಕೊಟ್ಟು ಅವರು ಬರುವ ವರೆಗೆ ಕಾಯುತ್ತೀರಾ?" ಎಂದು ನ್ಯಾಯಪೀಠ ಉತ್ತರಪ್ರದೇಶ ಸರಕಾರದ ಪರ ವಾದಿಸಲು ನಿಂತಿರುವ ಹಿರಿಯ ವಕೀಲ ಹರೀಶ್ ಸಾಳ್ವೆಯವರನ್ನು ಕೇಳಿತು ಸಾಳ್ವೆಯವರು ಸರಕಾರದ ಕ್ರಮಗಳು ತೃಪ್ತಿದಾಯಕವಾಗಿಲ್ಲ, ಅದನ್ನು ಸರಿಪಡಿಸಲಾಗುವುದು ಎಂದರು.

ತನಿಖೆ ನಡೆಸಲು ರಚಿಸಿರುವ ವಿಶೇಷ ತನಿಖಾತಂಡ (ಎಸ್‌ಐಟಿ)ದಲ್ಲಿ ಸ್ಥಳೀಯ ಅಧಿಕಾರಿಗಳೇ ಇದ್ದಾರೆ, ಜನಗಳಲ್ಲಿ ವಿಶ್ವಾಸ ಮೂಡುವಂತಹ ಕ್ರಮ ಕೈಗೊಳ್ಳಿ ಎಂದೂ ನ್ಯಾಯಾಲಯ ಟಿಪ್ಪಣಿ ಮಾಡಿತು.

ರೈತರು ಕಾನೂನಿನ ಸಮರದಲ್ಲಿ ತೊಡಗಿಲ್ಲ, ಸಂವಿಧಾನಿಕ ಹಕ್ಕು ಕೇಳುತ್ತಿದ್ದಾರೆ

-ಸುಪ್ರಿಂ ಕೋರ್ಟಿನ ಟಿಪ್ಪಣಿಗೆ ಸಂಯುಕ್ತ ಕಿಸಾನ್ ಮೋರ್ಚಾ ಪ್ರತಿಕ್ರಿಯೆ

"ನ್ಯಾಯಾಲಯದ ಬಳಿ ಬಂದ ಮೇಲೆ, ಕಾನೂನು ತನ್ನ ದಾರಿಯಲ್ಲಿ ಸಾಗಲು ಬಿಡಬೇಕು.. ಬದಲಿಗೆ ನೀವು ಪ್ರತಿಭಟನೆ ಮುಂದುವರೆಸುತ್ತಿದ್ದೀರಿ, ರಾಷ್ಟ್ರೀಯ ಹೆದ್ದಾರಿಗಳನ್ನು ಅಡ್ಡಗಟ್ಟಿದ್ದೀರಿ..ನೀವು ನಮ್ಮಲ್ಲಿ ವಿಶ್ವಾಸವಿಡಬೇಕು" ಎಂದು ಸುಪ್ರಿಂ ಕೋರ್ಟಿನ ಪೀಠವೊಂದು ಅಕ್ಟೋಬರ್ 1ರಂದು ಟಿಪ್ಪಣಿ ಮಾಡಿರುವುದಾಗಿ ವರದಿಯಾಗಿದೆ.

ಇದಕ್ಕೆ ಪ್ರತಿಕಿಯಿಸುತ್ತ ಸಂಯುಕ್ತ ಕಿಸಾನ್ ಮೋರ್ಚಾ(ಎಸ್.ಕೆ.ಎಂ.) ತನಗೆ ಸೇರಿದ ಯಾವ ಸಂಘಟನೆಯೂ ಯಾವುದೇ ನ್ಯಾಯಾಲಯದ ಬಳಿ ಹೋಗಿಲ್ಲ, ಅಥವ ಯಾರಿಗೂ ಆ ಕೆಲಸವನ್ನು ವಹಿಸಿಲ್ಲ ಎಂದು ಸ್ಪಷ್ಟಪಡಿಸಿದೆ. ಸುಪ್ರಿಂ ಕೋರ್ಟಿನಲ್ಲಿ ಈ ಕುರಿತು ಅರ್ಜಿ ಹಾಕಿದವರು ಎಸ್.ಕೆ.ಎಂ.. ಗೆ ಸೇರಿದವರಲ್ಲ. ಆದ್ದರಿಂದ ಕೇಂದ್ರ ಸರಕಾರ ಕೃಷಿ ಸುಗ್ರೀವಾಜ್ಞೆಗಳನ್ನು ಹೊರಡಿಸಿದ ನಂತರ ಒಂದು ವರ್ಷದಿಂದ ಹೋರಾಡುತ್ತಿರುವ ರೈತರನ್ನು ಪ್ರತಿನಿಧಿಸುವ ಯಾವುದೇ ನ್ಯಾಯಬದ್ಧ ಹಕ್ಕನ್ನು ಅವರು ಹೊಂದಿಲ್ಲ. ಸುಪ್ರಿಂ ಕೋರ್ಟ್ ಸೂಚಿಸಿರುವಂತೆ ರೈತರು ಹೋರಾಟದಲ್ಲಿರುವಾಗ ಕೋರ್ಟಿನ ಬಳಿ ಹೋಗುವ ಉದ್ದೇಶವೇನೂ ಇಲ್ಲ ಎಂದು ಅದು ಹೇಳಿದೆ.

ಕೃಷಿ ಕಾಯ್ದೆಗಳ ಪರಾಮರ್ಶೆ ನಡೆಸಲೆಂದು ಸುಪ್ರಿಂ ಕೋರ್ಟ್ ನೇಮಿಸಿದ ಆಯೋಗವನ್ನು ಎಸ್.ಕೆ.ಎಂ. ಬಹಿಷ್ಕರಿಸಿದೆ ಎಂಬುದನ್ನೂ ನೆನಪಿಸಿಕೊಳ್ಳಬೇಕು. ಆ ಆಯೋಗದ ವರದಿ ಏನಾಯ್ತು ಎಂದು ಯಾರಿಗೂ ತಿಳಿದಿಲ್ಲ ಎಂದೂ ಎಸ್.ಕೆ.ಎಂ. ಹೇಳಿದೆ.

"ನಮಗೆ ತಿಳಿದಂತೆ, ಸರಕಾರವಾಗಲೀ, ಎಸ್. ಕೆ.ಎಂ. ಆಗಲೀ ಈ ಪ್ರಶ್ನೆಯ ಮೇಲೆ ನ್ಯಾಯಾಲಯದ ಬಳಿಗೆ ಹೋಗಿಲ್ಲ. ರೈತರು ತೊಡಗಿರುವುದು ಒಂದು ಕಾನೂನು ಸಮರದಲ್ಲಿ ಅಲ್ಲ, ಇದು ಅವರ ಜೀವನ ಮತ್ತು ಜೀವನೋಪಾಯದ ಪ್ರಶ್ನೆ. ಜಂತರ್ ಮಂತರ್ ಸೇರಿದಂತೆ ರಾಜಧಾನಿಯ ವಿವಿಧ ಭಾಗಗಳಲ್ಲಿ ವಿವಿಧ ಸಂಘಟನೆಗಳಿಂದ ಕಳೆದ ಒಂದು ವರ್ಷದಿಂದ ಪ್ರತಿಭಟನೆಗಳು ನಡೆಯುತ್ತಲೇ ಇರುವಾಗ, ಪ್ರತಿಭಟನೆಯ ಮೂಲಕ ತಮ್ಮ ಅಸ್ತಿತ್ವ ಮತ್ತು ಜೀವನೋಪಾಯದ ಬಗ್ಗೆ ಸರಕಾರಕ್ಕೆ ಮನವಿ ಮಾಡಿಕೊಳ್ಳುತ್ತಿರುವ ರೈತರಿಂದ ಮಾತ್ರ ಇದ್ದಕ್ಕಿದ್ದಂತೆ ಮಂಜೂರಾತಿಯ ಮೊಹರು ಅಥವ ಪ್ರತಿಭಟನೆಗೆ ಪರವಾನಿಗೆ ಪಡೆದಿದ್ದೀರಾ ಎಂದು ಕೇಳುವುದು ಅಸಾಮಾನ್ಯ ಮತ್ತು ವಿಚಿತ್ರ ಸಂಗತಿ" ಎಂದು ಎಸ್. ಕೆ.ಎಂ. ಈ ಕುರಿತು ಅಕ್ಟೋಬರ್ 2ರಂದು ನೀಡಿರುವ ಹೇಳಿಕೆಯಲ್ಲಿ ಅಭಿಪ್ರಾಯ ಪಟ್ಟಿದೆ.

ಭಾರತದ ಸಂವಿಧಾನ ನಮ್ಮ ನಾಡಿನ ಅತ್ಯುನ್ನತ ಕಾನೂನು. ಸಂವಿಧಾನ ನಾಗರಿಕರಿಗೆ ಜೀವನ ಮತ್ತು ಜೀವನೋಪಾಯದ ಹಕ್ಕು ನೀಡಿದೆ. ಅದು ಸಂಘಟಿಸುವ, ಸಾಮೂಹಿಕ ಚೌಕಾಸಿಯ ಮತ್ತು ಶಾಂತಿಯುತವಾಗಿ ಪ್ರತಿಭಟಿಸುವ ಹಕ್ಕನ್ನೂ ನೀಡಿದೆ.

ದೇಶದ ರೈತರು ಬಿಜೆಪಿ ನೇತೃತ್ವದ ಒಕ್ಕೂಟ ಸರಕಾರ, ಸಂಸತ್ ಸದಸ್ಯರ ಮತದಾನದ ಹಕ್ಕನ್ನು ವಂಚಿಸಿ ತಂದಿರುವ ಮೂರು ಕೃಷಿ ಕಾಯ್ದೆಗಳು ತಮ್ಮ ಜೀವನಕ್ಕೆ ಮತ್ತು ಜೀವನೋಪಾಯದ ಹಕ್ಕಿಗೆ ಬೆದರಿಕೆಯೊಡ್ಡಿದೆ ಎಂದು ಕಳೆದ ಒಂದು ವರ್ಷದಿಂದ ಬೀದಿಗೆ ಇಳಿಯಬೇಕಾಗಿ ಬಂದಿದೆ.

ಈ ಪ್ರಶ್ನೆಯನ್ನು ಪ್ರಜಾಸತ್ತಾತ್ಮಕವಾಗಿ ಬಗೆಹರಿಸುವಲ್ಲಿ ವಿಫಲವಾಗಿರುವುದು ಪ್ರಧಾನ ಮಂತ್ರಿಗಳ ನೇತೃತ್ವದ ಭಾರತ ಸರಕಾರ. ಅದು ರಾಷ್ಟ್ರೀಯ ಹೆದ್ದಾರಿಗಳನ್ನು ಅಗೆದು ಹಾಕುವಂತಹ ಕಾನೂನುಬಾಹಿರವಾದ ಕ್ರಮಗಳಿಗೂ ಇಳಿದಿದೆ ಮತ್ತು ರೈತರ ಮೇಲೆ ರಾಷ್ಟ್ರ-ವಿರೋಧಿಗಳು ಎಂಬ ಆರೋಪವನ್ನು ಹೊರಿಸಿದೆ. ವಾಸ್ತವವಾಗಿ ಸರಕಾರವೇ ದೇಶಕ್ಕೆ ಅನ್ನ ಉಣಿಸುವ ಜನಗಳ ವಿಷಯದಲ್ಲಿ ವಿಫಲಗೊಂಡಿದೆ. ದೇಶಕ್ಕೆ ಅನ್ನ ಒದಗಿಸುವವರು ವಿನಾಶ ಮತ್ತು ಹಸಿವಿನತ್ತ ಸಾಗುವಂತೆ ಬಲವಂತ ಮಾಡಿರುವುದು ಈ ಸರಕಾರವೇ. ಆದ್ದರಿಂದ ದೇಶ ಮತ್ತು ಸಂವಿಧಾನದ ವಿಷಯದಲ್ಲಿ ವಿಫಲಗೊಂಡಿರುವುದು ಸರಕಾರವೇ ಎಂದು ಎಸ್.ಕೆ.ಎಂ. ಹೇಳಿದೆ.

ಜನವರಿ 22ರಿಂದೀಚೆಗೆ ಸರಕಾರ ರೈತ ಸಂಘಟನೆಗಳೊಂದಿಗೆ ಯಾವುದೇ ಮಾತುಕತೆಗೆ ಒಂದಾದರೂ ಹೆಜ್ಜೆಯನ್ನು ಮುಂದಿಟ್ಟಿಲ್ಲ. ಅತ್ಯುನ್ನತ ತ್ಯಾಗ ಮಾಡಿ ರೈತರು ಹೋರಾಟವನ್ನು ಮುಂದುವರೆಸುತ್ತಿದ್ದಾರೆ. 605ಕ್ಕೂ ಹೆಚ್ಚು ರೈತರು ಈ ಹೋರಾಟದಲ್ಲಿ ಪ್ರಾಣ ಕಳಕೊಂಡಿದ್ದಾರೆ. ಈ ಹೋರಾಟ ಆರಂಭವಾದಂದಿನಿಂದ ಪ್ರತಿದಿನ ಇಬ್ಬರು ರೈತರು ಹುತಾತ್ಮರಾಗುತ್ತಿದ್ದಾರೆ ಎಂದಿರುವ ಎಸ್. ಕೆ.ಎಂ. ನಮ್ಮಂತಹ ಒಂದು ಪ್ರಜಾಪ್ರಭುತ್ವದಲ್ಲಿ, ನಡೆಯುತ್ತಿರುವ ಒಂದು ಹೋರಾಟವು ಎತ್ತಿರುವ ಪ್ರಶ್ನೆಗಳಿಗೆ ಒಂದು ಇತ್ಯರ್ಥದತ್ತ ಸಾಗಲು ಇರುವ ಏಕೈಕ ದಾರಿಯೆಂದರೆ ಮತ್ತೆ ಸಂವಾದವನ್ನು ಆರಂಭಿಸುವುದು ಎಂದಿದೆ.

ಇದು ಸದಾ ಎಸ್.ಕೆ.ಎಂ.ನ ಆಗ್ರಹವಾಗಿದೆ. ಬೇರೆ ಯಾರದ್ದೋ ಚಲನೆಯ ಸ್ವಾತಂತ್ರ್ಯದ ಮೇಲೆ ದುಷ್ಪರಿಣಾಮ ಬೀರುವ ಮೊದಲು ಇದರ ಮೊದಲ ಹೊಡೆತವನ್ನು ಎದುರಿಸಿದವರು ರೈತರೇ. ತಮ್ಮ ದೂರುಗಳನ್ನು ಮತ್ತು ದುಸ್ಥಿತಿಯನ್ನು ಸರಕಾರಕ್ಕೆ ತಿಳಿಸಲು ಸಂಸತ್ತಿನತ್ತ ಹೊರಟಾಗ, ರೈತರ ಚಲನೆಯ ಸ್ವಾತಂತ್ರ್ಯವನ್ನು ಕಡಿತಗೊಳಿಸಿದ್ದರಿಂದಾಗಿ ಅವರೀಗ ಗಡಿಗಳಲ್ಲಿದ್ದಾರೆ. ಈ ಇಕ್ಕಟ್ಟನ್ನು ಸೃಷ್ಟಿಸಿರುವುದು ಮತ್ತು ಅದನ್ನು ಶಾಶ್ವತಗೊಳಿಸಿರುವುದು ಸರಕಾರವೇ. ಈ ಪ್ರತಿಭಟನೆಗೆ ಸ್ಪಂದಿಸುವುದು ಮತ್ತು ಈ ಇಕ್ಕಟ್ಟು ಬಗೆಹರಿಯುವ ಖಾತ್ರಿ ಒದಗಿಸಬೇಕಾದ್ದು ಈ ಸರಕಾರವೇ. ರೈತರು ಒಂದು ವರ್ಷಕ್ಕಿಂತಲೂ ಹೆಚ್ಚು ಸಮಯದಿಂದ ಕಾಯುತ್ತಿದ್ದಾರೆ ಎಂದು ಎಸ್.ಕೆ.ಎಂ. ನೆನಪಿಸಿದೆ.

ಸಂಪಾದಕೀಯ

ಬೆಳಗಾವಿ ದುರಂತ ಸಾವುಗಳಿಗೆ ಯಾರು ಹೊಣೆ?

ಕಳೆದ ಕೆಲವು ದಿನಗಳಿಂದ ರಾಜ್ಯದ ವಿವಿಧೆಡೆ ಭಾರೀ ಪ್ರಮಾಣದಲ್ಲಿ ಮಳೆ ಸುರಿಯುತ್ತಿದ್ದು ಜನಜೀವನ ಅಸ್ತವ್ಯಸ್ತಗೊಂಡಿದೆ. ಬೆಳೆದು ನಿಂತ ಪೈರು ನೀರು ಪಾಲಾಗಿದೆ. ನದಿಗಳಲ್ಲಿ ಭೀಕರ ಪ್ರವಾಹ ಉಂಟಾಗಿದೆ. ಜನ ಜಾನುವಾರುಗಳು ನೀರಿನಲ್ಲಿ ಕೊಚ್ಚಿಕೊಂಡು ಹೋಗಿವೆ. ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಮರಗಳು, ವಿದ್ಯುತ್ ಕಂಬಗಳು ಧರೆಗಿಳಿದಿವೆ. ರಸ್ತೆಗಳು, ಸೇತುವೆಗಳು ಮುಳುಗಿವೆ.

ಬೆಳಗಾವಿ ಜಿಲ್ಲೆಯಲ್ಲಿ ಬಡಾಲ ಅಂಕಲಗಿ ಗ್ರಾಮದಲ್ಲಿ ಮನೆಯೊಂದರ ಗೋಡೆ ಕುಸಿದು ಇಬ್ಬರು ಬಾಲಕಿಯರು ಸೇರಿದಂತೆ 7 ಮಂದಿ ಮೃತಪಟ್ಟಿದ್ದಾರೆ. ಅವಶೇಷಗಳ ಕೆಳಗೆ ಸಿಲುಕಿದ್ದವರ ಪೈಕಿ ಐವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಇಬ್ಬರು ಆಸ್ಪತ್ರೆಗೆ ಸಾಗಿಸುವ ಮಾರ್ಗದಲ್ಲಿ ಅಸುನೀಗಿದ್ದಾರೆ. ಭಾರೀ ಮಳೆ ಸುರಿಯುತ್ತಿರುವುದನ್ನು ಆತಂಕದಿಂದ ನೋಡುತ್ತಾ ನಿಂತಾಗ ಮನೆಯ ಗೋಡೆಯೊಂದು ದಿಢೀರನೆ ಅವರ ಮೇಲೆ ಕುಸಿದು ಬಿದ್ದಿದೆ. ಆ ಕುಟುಂಬದ ಒಬ್ಬ ಬಾಲಕಿ ಸೇರಿ ಆರು ಮಂದಿ ಮತ್ತು ಪಕ್ಕದ ಮನೆಯ ಎಂಟು ವರ್ಷದ ಬಾಲಕಿ ಸೇರಿ ಏಳು ಮಂದಿ ಮರಣಹೊಂದಿದ್ದಾರೆ. ಹೊರಗೆ ಹೋಗಿದ್ದ ಮನೆಯ ಯಜಮಾನ ಮತ್ತು ಮಗ ಬದುಕುಳಿದಿದ್ದಾರೆ. ಇಂತಹ ಅಮಾಯಕರ ಸಾವುಗಳಿಗೆ ಯಾರು ಹೊಣೆ?

"ಹುಟ್ಟಿದವರು ಒಮ್ಮೆ ಸಾಯಲೇ ಬೇಕು" ಎಂದು ನಾವು ಸಮಾಧಾನಪಟ್ಟುಕೊಳ್ಳುತ್ತೇವೆ. ಆದರೆ ನಾವು ಅನಾಥ ಶವಗಳಾಗಿ ಮಣ್ಣಲ್ಲಿ ಮುಚ್ಚಿಹೋಗುವ, ನೀರಲ್ಲಿ ಕೊಚ್ಚಿಹೋಗುವುದು ಯಾವ ತಪ್ಪಿಗೆ ಶಿಕ್ಷೆ? ನರೇಂದ್ರ ಮೋದಿರವರು ಹೊಣೆಗಾರರಾಗಿರಲಿಕ್ಕಿಲ್ಲ, ಯಾಕೆಂದರೆ ಅವರು ನಮ್ಮಿಂದ ದೂರ, ಬಹುದೂರ ಇದ್ದಾರೆ. ಬಸವರಾಜ ಬೊಮ್ಮಾಯಿರವರು ಹೊಣೆಗಾರರಲ್ಲ, ಏಕೆಂದರೆ ಅವರು ಕುರ್ಚಿ ಹೊಣೆಗಾರಿಕೆಗೆ ತೀರಾ ಹೊಸಬರು. ಇನ್ನು ಅಧಿಕಾರಿ ವರ್ಗದವರು. ಅವರು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಕಲೆಯನ್ನು ಕರಗತಗೊಳಿಸಿಕೊಂಡವರು, ಬಡ್ತಿ ಪಡೆದು ಬಂದವರು.

ನಮ್ಮ ಸಂವಿಧಾನ ನಮಗೆ ಬದುಕುವ ಹಕ್ಕನ್ನು ನೀಡಿದರೆ. ನನ್ನ ಜೀವ ತೆಗೆಯಲು ಯಾರಾದರೂ ಪ್ರಯತ್ನಪಟ್ಟರೆ ನಾನು ನ್ಯಾಯಾಲಯದ ಮೊರೆ ಹೋಗಬಹುದು. ನಾನು ಕುಟುಂಬ ಸಮೇತನಾಗಿ ವಾಸಮಾಡುತ್ತಿರುವ ಶಿಥಿಲಗೊಂಡ ಮನೆ ಕುಸಿದುಬಿದ್ದು ನಾವು ಜೀವಕಳೆದುಕೊಳ್ಳುವ ಅಪಾಯವಿದ್ದಾಗ ನಾನು ನ್ಯಾಯಾಲಯದ ಮೊರೆ ಹೋಗಬಹುದೆ? ಒಂದು ಸುರಕ್ಷಿತ ವಾಸಸ್ಥಳ ಸಂವಿಧಾನ ನೀಡಿರುವ ಬದುಕುವ ಹಕ್ಕಿನ ಭಾಗವಲ್ಲವೇ?

'ಪ್ರಜೆಗಳೇ ಪ್ರಭುಗಳು' ಎಂದು ಪ್ರತಿಪಾದಿಸುವ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಾಸಕ್ಕೆ ಸುರಕ್ಷಿತ ಮನೆಗಳಿಲ್ಲದ ಅಸಂಖ್ಯಾತ ಕುಟುಂಬಗಳಿವೆ. ಸರ್ಕಾರಿ ಜಾಗದಲ್ಲಿ ಮನೆಗಳನ್ನು ಕಟ್ಟಿಸಿಕೊಂಡು ವಾಸಿಸುತ್ತಿರುವ ಎಷ್ಟೋ ಕುಟುಂಬಗಳಿವೆ. ಸರ್ಕಾರ ಶ್ರೀಮಂತರಿಗೆ ದೊಡ್ಡ ಬಂಗ್ಲೆಗಳನ್ನು ಕಟ್ಟಿಕೊಳ್ಳಲು ಭೂಮಿಯನ್ನು ಒದಗಿಸುತ್ತದೆ. ಆದರೆ ಸ್ವಂತ ಮನೆಗಳಿಲ್ಲದ ಬಡವರಿಗೆ ತಲೆಯ ಮೇಲಿನ ಸೂರಿಗಾಗಿ ಸಣ್ಣ ನಿವೇಶನಗಳನ್ನು ನೀಡಲು ಮುಂದಾಗುತ್ತಿಲ್ಲ. ಸರ್ಕಾರಿ ಜಾಗದಲ್ಲಿ ಕಟ್ಟಿಕೊಂಡಿರುವ ಸಣ್ಣ ಸಣ್ಣ ಮನೆಗಳನ್ನು ಮತ್ತು ಬಳಸಿಕೊಂಡ ನಿವೇಶನಗಳನ್ನು ಸಕ್ರಮಗೊಳಿಸಲು ಸಲ್ಲಿಸಿದ ಮನವಿಗಳೆಲ್ಲ ಕಸದ ಬುಟ್ಟಿ ಸೇರುತ್ತವೆ.

ಬೆಳಗಾವಿ, ವಿಜಯಪುರದಂತಹ ಜಿಲ್ಲೆಗಳಲ್ಲಿ ಬಡವರು ಮಣ್ಣಿನ ಮನೆಗಳಲ್ಲಿ ವಾಸ ಇರುತ್ತಾರೆ. ನಿರಂತರ ಮಳೆಯಿಂದ ಅಂತಹ ಮನೆಗಳು ಬೇಗನೆ ಶಿಥಿಲಗೊಂಡು ಕುಸಿದು ಬೀಳುವ ಅಪಾಯದಲ್ಲಿರುತ್ತವೆ. ಆದರೆ ಅಂತಹ ಮನೆಗಳನ್ನು ದುರಸ್ತಿ ಮಾಡಲು, ಸುರಕ್ಷಿತ ಮನೆಗಳನ್ನು ಕಟ್ಟಿಸಿ ಕೊಡಲು ಸರ್ಕಾರ ಬಜೆಟ್ ಅನುದಾನ ಒದಗಿಸುವುದಿಲ್ಲ. ಇತ್ತೀಚೆಗೆ ಕೆಲವೆಡೆ ಧಾರಕಾರ ಮಳೆ ಸುರಿದು ಮನೆಗಳು ಕುಸಿದು ಬೀಳುವುದು ವ್ಯಾಪಕವಾಗಿದೆ. ಶಿಥಿಲಾವಸ್ಥೆಗೆ ಬಂದಿರುವ ಮನೆಗಳನ್ನು ದುರಸ್ತಿ ಮಾಡಿಸಿ ಕೊಡುವುದು ಸರ್ಕಾರದ ಆದ್ಯತೆ ಯಾಕಾಗಬಾರದು? ಪ್ರವಾಹಕ್ಕೆ ಸಿಕ್ಕಿ ಮನೆಗಳನ್ನು ಕಳೆದುಕೊಂಡ ಅದೆಷ್ಟೋ ಕುಟುಂಬಗಳಿಗೆ ಇದುವರೆಗೂ ಪುನರ್ವಸತಿ ಕಲ್ಪಿಸದೆ ತಗಡಿನ ಶೆಡ್ಡುಗಳಲ್ಲಿ ಅವರನ್ನು ಗೋಳಾಡಿಸಲಾಗುತ್ತಿದೆ.

ಬೆಳಗಾವಿಯ 7 ಜನ ಅಮಾಯಕರ ಸಾವನ್ನು ತಪ್ಪಿಸಲು ಸಾಧ್ಯವಿತ್ತು. ಅದು ಅವರ ಹಕ್ಕೂ ಆಗಿತ್ತು.

ದಲಿತ ಮಹಿಳೆ ಮೇಲಿನ ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆ ವಿಧಿಸಲು ಮತ್ತು ಸಂತ್ರಸ್ತ ಕುಟುಂಬಕ್ಕೆ ಪರಿಹಾರ ನೀಡಲು ಸಿಪಿಐ(ಎಂ) ಒತ್ತಾಯ

ಯಾದಗಿರಿ ಜಿಲ್ಲೆ ಸುರಪರ ತಾಲೂಕಿನ ಚೌಡೇಶ್ವರಿ ಹಾಳ ಗ್ರಾಮದಲ್ಲಿ 3–10–2021 ರಂದು ಅಳ್ಳಿ ಗ್ರಾಮದ ಗಂಗಪ್ಪ, ಬಸಪ್ಪ ಮತ್ತು ಇತರರು ಸೇರಿ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಯತ್ನ ಮಾಡಿ, ಆಕೆ ಪ್ರತಿಭಟಿಸಿದಾಗ ಆಕೆಯ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಲೆಗೈದಿರುವ ಅಮಾನವೀಯ ಘಟನೆ ನಡೆದಿದೆ. ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಈ ಪೈಶಾಚಿಕ ಕೃತ್ಯವನ್ನು ತೀವ್ರವಾಗಿ ಖಂಡಿಸಿದೆ.

ಯಾದಗಿರಿ ಜಿಲ್ಲೆಯಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳು ತೀವ್ರಗೊಳ್ಳುತ್ತಿರುವುದಕ್ಕೆ ಸಂಬಂಧಿಸಿ ಸಿಪಿಐ(ಎಂ) ತೀವ್ರ ಆತಂಕವನ್ನು ವ್ಯಕ್ತಪಡಿಸುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಪೊಲೀಸರು ನಿಷ್ಪಕ್ಷಪಾತವಾಗಿ ತಮ್ಮ ಪ್ರಾಥಮಿಕ ಹೇಳಿಕೆಗೆ ಬದ್ಧವಾಗಿ ಅತ್ಯಾಚಾರಿಗಳು ತಪ್ಪಿಸಿಕೊಳ್ಳದಂತೆ ಕ್ರಮ ವಹಿಸಬೇಕು ಮತ್ತು ಸಂತ್ರಸ್ಥ ಕುಟುಂಬಕ್ಕೆ ಸರ್ಕಾರ 25 ಲಕ್ಷ ರೂ ಪರಿಹಾರ ನೀಡಬೇಕಾಗಿ ಸಿಪಿಐ(ಎಂ) ರಾಜ್ಯ ಸಮಿತಿ ಆಗ್ರಹಿಸಿದೆ.

ಬೆಳಗಾವಿ ಮುಸ್ಲಿಂ ಯುವಕನ ಕೊಲೆ: ಕೊಲೆಗಡುಕರಿಗೆ ತೀವ್ರ ಶಿಕ್ಷೆ ವಿಧಿಸಲು ಸಿಪಿಐ(ಎಂ) ಒತ್ತಾಯ

ಪರಸ್ಪರ ಪ್ರೀತಿಸಿದ ಹುಡುಗಿ–ಹುಡುಗನನ್ನು ಹಿಂದೂ–ಮುಸ್ಲಿಂ ಎಂಬ ಕಾರಣಕ್ಕೆ, ಮುಸ್ಲಿಂ ಹುಡುಗನನ್ನು ಬೆಳಗಾವಿಯಲ್ಲಿ ಕೊಲೆಗೈದು ದೇಹವನ್ನು ವಿರೂಪಗೊಳಿಸಿ ಅಟ್ಟಹಾಸಗೈದಿರುವ ಶ್ರೀರಾಮಸೇನೆಯವರೆಂದು ಹೇಳಲಾದ ಕೊಲೆಗಡುಕರನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕೆಂದು ಮತ್ತು ತನ್ನ ಏಕೈಕ ಆಸರೆಯಾಗಿದ್ದ ಮಗನನ್ನು ಕಳೆದುಕೊಂಡ ತಾಯಿಗೆ ಪರಿಹಾರವನ್ನು ನೀಡಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಈ ಕ್ರೂರ ಘಟನೆಯ ಹಿಂದೆ ಶ್ರೀರಾಮಸೇನೆ ಸಂಘಟನೆಯ ಸ್ಥಳೀಯ ಮುಖಂಡರು ಇರುವರೆಂದು ಹೇಳಲಾಗಿದೆ. ಕೋಮು ನೆಲೆಯಲ್ಲಿ ಸಮಾಜವನ್ನು ವಿಭಜಿಸುವ ಉದ್ದೇಶದ ಇಂತಹ ಸಂಘಟನೆಗಳು ಮತ ಧರ್ಮಗಳನ್ನು ಮುಂದು ಮಾಡಿ ಕೊಲೆಗಳನ್ನು ಮಾಡುವ ಅಪಾಯಕಾರಿ ಪ್ರವೃತ್ತಿ ರಾಜ್ಯದಲ್ಲಿ ಹೆಚ್ಚಾಗುತ್ತಿದೆ. ಬಹಿರಂಗವಾಗಿ ಅನ್ಯಧರ್ಮೀಯರ ಬಗ್ಗೆ ದ್ವೇಷದ ಮತ್ತು ವಿಷಕಾರಿ ಹೇಳಿಕೆಗಳನ್ನು ನೀಡುವುದು ಮತ್ತು ಬೆದರಿಕೆಗಳನ್ನು ಒಡ್ಡುವುದು ಹೆಚ್ಚಾಗುತ್ತಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಇಂತಹ ಶಕ್ತಿಗಳಿಗೆ ಮತ್ತಷ್ಟು ಪುಷ್ಟಿ ಸಿಕ್ಕಿದಂತಾಗಿದೆ. ಕರ್ನಾಟಕ ರಾಜ್ಯದಲ್ಲಿ ಸಾಮಾಜಿಕ ಹಂದರವನ್ನು ದುರ್ಬಲಗೊಳಿಸುವ ಇಂತಹ ಕೋಮುವಾದಿ ಮತ್ತು ಮತಾಂಧ ಶಕ್ತಿಗಳಿಗೆ ಕಡಿವಾಣ ಹಾಕುವುದು ಸರ್ಕಾರದ ಜವಾಬ್ದಾರಿಯಾಗಿದೆ. ಆದ್ದರಿಂದ ರಾಜ್ಯದ ಬಿಜೆಪಿ ಸರ್ಕಾರ, ಬಜರಂಗದಳ ಮತ್ತು ಶ್ರೀರಾಮಸೇನೆಯಂತಹ ಕೋಮುವಾದಿ ಸಂಘಟನೆಗಳ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಬೆಳಗಾವಿಯ ಮುಸ್ಲಿಂ ಹುಡುಗನ ಕೊಲೆ ಪ್ರಕರಣವನ್ನು ನಿಷ್ಪಕ್ಷವಾಗಿ ತನಿಖೆ ನಡೆಸಬೇಕು ಮತ್ತು ಸಂತ್ರಸ್ತ ಕುಟುಂಬಕ್ಕೆ ಪರಿಹಾರ ಒದಗಿಸಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಕೋಮುದ್ವೇಷ ರಾಜಕಾರಣದಿಂದ ಅತ್ಯಾಚಾರ–ಕೊಲೆ: ಜನವಾದಿ ಮಹಿಳಾ ಸಂಘಟನೆ ಆಕ್ರೋಶ



ಬೆಳಗಾವಿಯಲ್ಲಿ ಹಿಂದೂ ಯುವತಿಯನ್ನು ಮುಸ್ಲಿಂ ಯುವಕ ಪ್ರೀತಿಸಿದನೆಂಬ ಕಾರಣಕ್ಕೆ ಶ್ರೀರಾಮಸೇನೆ ಕಾರ್ಯಕರ್ತರು ಅನ್ಯಕೋಮಿನ ಯುವಕನನ್ನು ಕೊಲೆ ಮಾಡಿದ್ದಾರೆ. ಅಲ್ಲದೆ, ಯಾದಗಿರಿಯಲ್ಲಿ ಯುವತಿಯ ಮೇಲೆ ಅತ್ಯಾಚಾರಕ್ಕೆ ಪ್ರಯತ್ನಿಸಿ ಆಕೆಯನ್ನು ಪೆಟ್ರೋಲ್ ಸುರಿದು ಕೊಲೆ ಮಾಡಿರುವ ಅಮಾನವೀಯ ಘಟನೆಯನ್ನು ಖಂಡಿಸಿ ಜನವಾದಿ ಮಹಿಳಾ ಸಂಘಟನೆ ಪ್ರತಿಭಟನೆ ನಡೆಸಿದರು.

ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೇರಿದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯೂಎ)ಯ ಕಾರ್ಯಕರ್ತರು ತಪ್ಪಿತಸ್ಥರ ಮೇಲೆ ಕಠಿಣ ಕಾನೂನು ಜಾರಿಗೊಳಿಸಿ ಗಂಭೀರ ಶಿಕ್ಷೆಗೆ ಗುರಿಪಡಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಗೌರಮ್ಮ 'ರಾಜ್ಯದಲ್ಲಿ ನಡೆದಿರುವ ಮರ್ಯಾದೆಯ ಹೆಸರಿನ ಹತ್ಯೆಗಳ ನಿಷ್ಪಕ್ಷಪಾತ ತನಿಖೆ ನಡೆಸಬೇಕು. ಅಂತಹ ಹತ್ಯೆಯನ್ನು ನಿಷೇಧಿಸುವಂತಹ ಕಾನೂನು ಜಾರಿತೆ ತಂದು ತಪ್ಪಿತಸ್ಥರ ಮೇಲೆ ಕ್ರಮವಹಿಸಬೇಕು. ಬೆಳಗಾವಿಯಲ್ಲಿ ಯುವಕನನ್ನು ಕೊಂದ ಆರೋಪಿಗಳನ್ನು ಕೂಡಲೇ ಬಂಧಿಸಿ ಕಾನೂನು ಕ್ರಮ ವಹಿಸಬೇಕು. ಇತ್ತೀಚಿನ ವರ್ಷಗಳಲ್ಲಿ ಯುವಜನರು ತಮ್ಮ ಬಾಳಸಂಗಾತಿಯನ್ನು ಪುಟ 4 ಕ್ಕೆ



ಯುಪಿ ರೈತರ ಹತ್ಯೆ ಕರ್ನಾಟಕದಲ್ಲಿ ವ್ಯಾಪಕ ಪ್ರತಿಭಟನೆ

ಉತ್ತರ ಪ್ರದೇಶದ ಲಖಿಂಪುರ ಖೇರಿಯಲ್ಲಿ ಕೇಂದ್ರ ಸಚಿವ ಅಜಯ್ ಮಿಶ್ರಾರವರ ಮಗ ಆಶಿಶ್ ಮಿಶ್ರಾ ಪ್ರತಿಭಟನಾನಿರತ ರೈತರ ಮೇಲೆ ಕಾರು ಹರಿಸಿ ನಾಲ್ವರು ರೈತರನ್ನು ಕೊಂದ ಘಟನೆ ಖಂಡಿಸಿ ಕರ್ನಾಟಕದಲ್ಲಿ ವಿವಿಧ ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆದಿದೆ.

ಬೆಂಗಳೂರಿನಲ್ಲಿ ಮೈಸೂರು ಬ್ಯಾಂಕ್ ವೃತ್ತದ ಬಳಿ ಸಂಯುಕ್ತ ಕರ್ನಾಟಕ ಹೋರಾಟದ ನೇತೃತ್ವದಲ್ಲಿ ರೈತರು, ಕಾರ್ಮಿಕರು, ವಿದ್ಯಾರ್ಥಿ, ಯುವಜನ, ಮಹಿಳಾ ಹಾಗೂ ದಲಿತ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ಪ್ರತಿಭಟನೆ ಉದ್ದೇಶಿಸಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷರಾದ ಕೋಡಿಹಳ್ಳಿ ಚಂದ್ರಶೇಖರ್ ಮಾತನಾಡಿ, ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಮಗನಾದ ಆಶೀಶ್ ಮಿಶ್ರಾನನ್ನು ಬಂಧಿಸಬೇಕು. ಸಚಿವ ಸ್ಥಾನದಿಂದ ಅಜಯ್ ಮಿಶ್ರಾರನ್ನು ಕಿತ್ತೊಗೆಯಬೇಕು ಎಂದು ಆಗ್ರಹಸಿದರು.

ಲಖೀಂಪುರ ಖೇರಿಯಲ್ಲಿ ನಡೆದಿರುವ ರೈತರ ಮೇಲಿನ ದಾಳಿ ಮತ್ತು ಮಾರಣಹೋಮಕ್ಕೆ ಕಾರಣರಾದ ಕೇಂದ್ರ ಸಚಿವ ಅಜಯ್ ಮಿಶ್ರಾ ತೆನಿ ಮತ್ತು ಈ ಘಟನೆಯ ವಿಚಾರದಲ್ಲಿ ನಿರ್ಲಕ್ಷ್ಯ ಮತ್ತು ಕರ್ತವ್ಯ ಲೋಪ ಎಸಗಿರುವ ಉತ್ತರಪ್ರದೇಶ ಸರ್ಕಾರದ ಮೇಲೆ ರಾಷ್ಟ್ರಪತಿಗಳು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಸಂಯುಕ್ತ ಹೋರಾಟ ಕರ್ನಾಟಕವು ರಾಷ್ಟ್ರಪತಿಗಳಿಗೆ ಹಕ್ಕೊತ್ತಾಯ ಮನವಿಯನ್ನೂ ಕಳಿಸಿದೆ ಎಂದರು.

ಸಿಐಟಿಯು ರಾಜ್ಯಾಧ್ಯಕ್ಷೆ ಎಸ್. ವರಲಕ್ಷ್ಮಿ ಮಾತನಾಡಿ, ಸಚಿವ ಸಚಿವ ಅಜಯ್ ಮಿಶ್ರಾ ತೆನಿ ಅವರು ರೈತರ ಪ್ರತಿಭಟನೆಯ ಕುರಿತು ಬಹಿರಂಗ ಬೆದರಿಕೆ ಹಾಕಿದ್ದರು. ಅವರ ಬೆದರಿಕೆಯನ್ನು ಖಂಡಿಸಿ, ಅವರು ಪ್ರತಿನಿಧಿಸುವ ಕ್ಷೇತ್ರವಾದ ಲಖೀಂಪುರ ಖೇರಿಯಲ್ಲಿ ರೈತರು ಪ್ರತಿಭಟನೆ ನಡೆಸುತ್ತಿದ್ದರು. ಈ ವೇಳೆ ಸಚಿವರ ಬೆಂಗಾವಲು ಪಡೆಯ ವಾಹನ ಹರಿಸುವ ಮೂಲಕ ತಮ್ಮ ಬೆದರಿಕೆಯನ್ನು ಸಚಿವ ಸತ್ಯಗೊಳಿಸಿದ್ದಾರೆ. ಈ ಕೃತ್ಯ ಭಾರತದ ಜನರಿಗೆ ಸಂವಿಧಾನ ಕೊಡಮಾಡಿರುವ ಪ್ರತಿಭಟನೆಯ ಹಕ್ಕಿನ ತೀವ್ರ ಉಲ್ಲಂಘನೆಯೂ ಆಗಿದೆ ಎಂದು ವರಲಕ್ಷ್ಮಿ ಆರೋಪಿಸಿದರು.

ಪ್ರತಿಭಟನೆಯಲ್ಲಿ ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್. ವಿಮಲಾ, ಗೌರಮ್ಮ, ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಎನ್. ಉಮೇಶ್, ಎಸ್.ಎಫ್.ಐ. ನ ದಿಲಿಪ್ ಶೆಟ್ಟಿ, ಕೆ.ವಿ.ಎಸ್. ನ ಸರೋವರ್ ಸೇರಿದಂತೆ ರೈತ, ಕಾರ್ಮಿಕ, ದಲಿತ ಸಂಘಟನೆಯ ಮುಖಂಡರು ಇದ್ದರು.

ಮಂಡ್ಯ:

ಉತ್ತರ ಪ್ರದೇಶ ಲಕೀಂಪುರ್ ಖೇರ್ ನಲ್ಲಿ ನಡೆದ ಪ್ರತಿಭಟನಾ ರೈತರ ಕೊಲೆ ಖಂಡಿಸಿ, ಕೇಂದ್ರ ಮಂತ್ರಿ ಅಜಯ್ ಮಿಶ್ರ ಮಗ ಆಶೀಶ್ ಮಿಶ್ರ ಮೇಲೆ ಕೊಲೆ ಮೊಕದ್ದಮೆ ದಾಖಲಿಸಿ ಬಂಧಿಸುವಂತೆ ಆಗ್ರಹಿಸಿ, ಈ ಕೂಡಲೇ ಕೊಲೆ ಪ್ರಚೋದನೆ ಮಾಡಿರುವ ಅಜಯ್ ಮಿಶ್ರ ರನ್ನು ಸಂಪುಟದಿಂದ ಉಚ್ಚಾಟಿಸುವಂತೆ ಒತ್ತಾಯಿಸಿ ಮಂಡ್ಯ ಜಿಲ್ಲೆ ಮಳವಳ್ಳಿ ಪ್ರತಿಭಟನೆ ನಡೆಸಲಾಯಿತು.

ಜನವಾದಿ ಮಹಿಳಾ ಸಂಘಟನೆ ರಾಜ್ಯಾಧ್ಯಕ್ಷರಾದ ದೇವಿ, ಸುನೀತಾ, ಸುಶೀಲಾ ಕೆಪಿಆರ್ಎಸ್ ಭರತ್ ರಾಜ್, ಸ್ವಾಮಿ ಸಿಐಟಿಯು ತಿಮ್ಮೇಗೌಡ, ಹರೀಶ ಡಿವೈಎಫ್ಐ ಗುರುಸ್ವಾಮಿ, ಶಿವಕುಮಾರ, ಹೇಮಂತ, ಭಾಗವಹಿಸಿದರು. ಮಂಡ್ಯದಲ್ಲಿ ನಡೆದ ಪ್ರತಿಭಟನೆಯಲ್ಲಿ ಕೆಪಿಆರ್ಎಸ್ ನ ಕೃಷ್ಣೇಗೌಡ, ಸಿಐಟಿಯು ನ ಸಿ. ಕುಮಾರಿ, ಎಐಎಡಬ್ಲ್ಯೂಯು ನ ಪುಟ್ಟಮಾದು ಸೇರಿದಂತೆ ಅನೇಕರಿದ್ದರು.

ಹಾಸನ:

ಉತ್ತರ ಪ್ರದೇಶದಲ್ಲಿ ರೈತರ ಮೇಲೆ ಕಾರು ಹರಿಸಿದ ಪ್ರಕರಣ ಖಂಡಿಸಿ ಹಾಸನದಲ್ಲಿ ರೈತ, ಕಾರ್ಮಿಕರಿಂದ ಪ್ರತಿಭಟನೆ ಮಾಡಲಾಯಿತು.

ತಮ್ಮ ಹಕ್ಕೊತ್ತಾಯಗಳಿಗಾಗಿ ಪ್ರತಿಭಟನೆ ನಡೆಸುತ್ತಿದ್ದ ರೈತ ಸಮುದಾಯದ ಮೇಲೆ, ದೇಶದಾದ್ಯಂತ ಬೆಳೆಯುತ್ತಿರುವ ಚಳುವಳಿಯನ್ನು ಮುರಿಯುವ ಸಂಚಿನ ಭಾಗವಾಗಿ ಸಚಿವರ ಬೆಂಗಾವಲಿನ ವಾಹನಗಳನ್ನು ಚಲಾಯಿಸಿ, ಎಂಟು ಜನರ ಬರ್ಬರ ಹತ್ಯೆ ನಡೆಸಲಾದ ಕುಕೃತ್ಯವು ದೇಶದಾದ್ಯಂತ ತೀವ್ರ ಆತಂಕ ಮತ್ತು ತಲ್ಲಣವನ್ನುಂಟು ಮಾಡಿದೆ. ಒಕ್ಕೂಟ ಸರಕಾರದ ಗೃಹ ಖಾತೆಯ ರಾಜ್ಯ ಸಚಿವರಾದ ಅಜಯ್ ಮಿಶ್ರ ಹಾಗೂ ಆತನ ಮಗ ಮತ್ತು ಸಂಬಂಧಿ ಗುಂಡಾಗಳು ಈ ದುಷ್ಕೃತ್ಯದಲ್ಲಿ ಪಾಲ್ಗೊಂಡಿದ್ದಾರೆ.

ಹರ್ಯಾಣದ ಮುಖ್ಯಮಂತ್ರಿಗಳು ಬಿಜೆಪಿ ಮತ್ತು ಸಂಘ ಪರಿವಾರದ ಗುಂಡಾಗಳಿಗೆ ರೈತ ಚಳುವಳಿಯನ್ನು ಮುರಿಯಲು ಲಾಠಿ ಮುಂತಾದ ಆಯುಧಗಳ ಮೂಲಕ ದಾಳಿ ನಡೆಸಲು ಬಹಿರಂಗವಾಗಿ ಕರೆ ನೀಡುವ ಮೂಲಕ ಸಂವಿಧಾನಾತ್ಮಕ ಅಧಿಕಾರವನ್ನು ಸಂವಿಧಾನ ವಿರೋಧಿಯಾಗಿ ದುರ್ಬಳಕೆ ಮಾಡಿದ್ದಾರೆ ಎಂದು ಪ್ರತಿಭಟನೆ ಕಾರರು ಆರೋಪಿಸಿದರು.

ದೊಡ್ಡ ಬಳ್ಳಾಪುರ:

ಯುಪಿ ರೈತರ ಹತ್ಯೆ ಖಂಡಿಸಿ ದೊಡ್ಡಬಳ್ಳಾಪುರದಲ್ಲಿ ಸಮಾನ ಮನಸ್ಕ ಸಂಘಟನೆಗಳು ತಾಲೂಕು ಕಚೇರಿ ಮುಂದೆ ಪ್ರತಿಭಟನೆ ನಡೆಸಿ ತಹಸೀಲ್ದಾರ್‌ರವರಿಗೆ ಹಾಕ್ಕೋತ್ತಾಯಗಳ ಮನವಿಯನ್ನು ಸಲ್ಲಿಸಿದರು.

ದಕ್ಷಿಣ ಕನ್ನಡ:

ಯುಪಿ ರೈತರ ಹತ್ಯೆ ಖಂಡಿಸಿ ರಾಜ್ಯ ರೈತ ಸಂಘದ ರಾಜ್ಯ ನಾಯಕರಾದ ರವಿಕಿರಣ್ ಪೂನಚರವರು ಮಾತನಾಡಿ, "ರೈತ ವಿರೋಧಿಯಾದ ಕ್ರಷಿ ಕಾಯಿದೆಗಳ ವಿರುದ್ಧ ಕಳೆದ 10 ತಿಂಗಳಿನಿಂದ ದೇಶದ ರೈತರು ಸಮರಧೀರ ಹೋರಾಟದಲ್ಲಿ ತೊಡಗಿದ್ದರೂ ಕನಿಷ್ಠ ರೈತರ ಅಹವಾಲನ್ನು ಆಲಿಸಲು ಸಿದ್ದವಿಲ್ಲದ ನರೇಂದ್ರ ಮೋದಿ ಸರಕಾರವು ರೈತ ಹೋರಾಟವನ್ನು ಅಪಹಾಸ್ಯ ಮಾಡುತ್ತಿದ್ದು, ಇಲ್ಲಸಲ್ಲದ ಅಪಪ್ರಚಾರವನ್ನು ಮಾಡುತ್ತಿದೆ. ಮಾತ್ರವಲ್ಲದೆ ಹೋರಾಟದ ಹಾದಿಯನ್ನು ತಪ್ಪಿಸಲು ಹಿಂಸೆಗೆ ಪ್ರಚೋದಿಸುವ ದುರುದ್ದೇಶದಿಂದಲೇ ಕೇಂದ್ರ ಸಚಿವರ ಬೆಂಗಾವಲು ವಾಹನ ರೈತರ ಮೇಲೆಯೇ ಹರಿದು ರೈತರನ್ನು ಹತ್ಯೆ ನಡೆಸಿರುವ ಫ್ಯಾಸಿಸ್ಟ್ ಮೋದಿ ಸರಕಾರ ಹಾಗೂ ಗೂಂಡಾರಾಜ್ಯವಾದ ಯೋಗಿ ಸರಕಾರಗಳ ಅಮಾವೀಯ ಕ್ರತ್ಯವನ್ನು ದೇಶದ ಜನತೆ ಒಂದಾಗಿ ಖಂಡಿಸಲೇಬೇಕಾಗಿದೆ" ಎಂದು ಹೇಳಿದರು.

ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು ಮಾತನಾಡಿ, "ಸ್ವಾತಂತ್ರ್ಯ ಚಳುವಳಿಯ ಬಳಿಕ ದೀರ್ಘಕಾಲದ ಐತಿಹಾಸಿಕ ಹೋರಾಟವಾಗಿ ಹೊರಹೊಮ್ಮಿದ ರೈತರ ಹೋರಾಟವು ದೇಶ ಉಳಿಸುವ ದೇಶಪ್ರೇಮಿ ಹೋರಾಟವಾಗಿ ಪರಿವರ್ತನೆ ಗೊಂಡಿದೆ. ಇಂತಹ ರೈತರ ಹೋರಾಟವನ್ನು ವಿರೋಧಿಸುವ, ಅಪಹಾಸ್ಯ ಮಾಡುವ, ವಿನಾಃ ಕಾರಣ ಅಪಪ್ರಚಾರ ಮಾಡುವವರು ನಿಜಕ್ಕೂ ದೇಶದ್ರೋಹಿಗಳು. ಬದಲಾಗಿ ರೈತ ವಿರೋಧಿಯಾದ ಕೃಷಿ ಕಾಯಿದೆಗಳನ್ನು ವಿರೋಧಿಸುವವರು ದೇಶದ್ರೋಹಿಗಳೆಂದು ಜರೆಯುವ ಪ್ರಧಾನಿಗಳ ಹೇಳಿಕೆ ತೀರಾ ಖಂಡನೀಯವಾಗಿದೆ" ಎಂದು ಹೇಳಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ರೈತ ಸಂಘಟನೆಗಳ ಮುಖಂಡರಾದ ಕ್ರಷ್ಣಪ್ಪ ಸಾಲ್ಯಾನ್, ಓಸ್ವಾಲ್ಡ್ ಪ್ರಕಾಶ್ ಫೆರ್ನಾಂಡೀಸ್, ರೆನ್ನಿ ಡಿಸೋಜ, ಡಿವೈಎಫ್ಐ ನಾಯಕರಾದ ಸಂತೋಷ್ ಬಜಾಲ್ ಮುಂತಾದವರು ಮಾತನಾಡಿ, "ರೈತರ ಹತ್ಯೆಗೆ ಕಾರಣವಾದ ಕೇಂದ್ರದ ನರೇಂದ್ರ ಮೋದಿ ಸರಕಾರ ಹಾಗೂ ಉತ್ತರ ಪ್ರದೇಶದ ಯೋಗಿ ಸರಕಾರಗಳ ರೈತ ವಿರೋಧಿ ನಡೆಯನ್ನು ಪ್ರಬಲವಾಗಿ" ಖಂಡಿಸಿದರು.

ಈ ಹೋರಾಟದಲ್ಲಿ ವಿವಿಧ ರೈತ ಸಂಘಟನೆಗಳ ಮುಖಂಡರಾದ ರಾಮಣ್ಣ ವಿಟ್ಲ, ವಾಸುದೇವ ಉಚ್ಚಿಲ್, ಶೇಖರ್ ಕುತ್ತಾರ್, ಶಾಹುಲ್ ಹಮೀದ್, ಶಬೀರ್ ಅಹಮ್ಮದ್, ಜಾತ್ಯಾತೀತ ಜನತಾದಳದ ಜಿಲ್ಲಾ ನಾಯಕರಾದ ಸುಮತಿ ಎಸ್ ಹೆಗ್ಡೆ,ಅಲ್ತಾಫ್ ತುಂಬೆ, ಸಿಐಟಿಯು ಜಿಲ್ಲಾ ನಾಯಕರಾದ ಯೋಗೀಶ್ ಜಪ್ಪಿನಮೊಗರು, ಡಿವೈಎಫ್ಐ ಯಕರಾದ ನವೀನ್ ಕೊಂಚಾಡಿ, ಜಗದೀಶ್ ಬಜಾಲ್, ನಿತಿನ್ ಬಂಗೇರ, ನಿತಿನ್ ಕುತ್ತಾರ್, ಸಾಮಾಜಿಕ ಚಿಂತಕರಾದ ಪ್ರಮೀಳಾ ದೇವಾಡಿಗ ಮುಂತಾದವರು ಭಾಗವಹಿಸಿದ್ದರು.



ಮಂಗಳೂರು ನಗರದ ಕೊಲೊಸೊ ಕಾಲೇಜಿನ ವಿದ್ಯಾರ್ಥಿನಿ ನೀನಾಳ ಸಾವಿನ ತನಿಖೆಗೆ ಎಸ್.ಎಫ್.ಐ. ಒತ್ತಾಯ

ಮಂಗಳೂರು ನಗರದ ಕೊಲೊಸೊ ನರ್ಸಿಂಗ್ ಕಾಲೇಜಿನಲ್ಲಿ ಪ್ರಥಮ ವರ್ಷದ ವಿದ್ಯಾರ್ಜನೆ ಮಾಡುತ್ತಿದ್ದ ಕಾಸರಗೋಡು ಮೂಲದ ವಿದ್ಯಾರ್ಥಿನಿ ನೀನಾ ಹಾಸ್ಟೇಲ್‌ನ ಸ್ನಾನದ ಕೊಠಡಿಯಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆಯ ಬಗ್ಗೆ ಕಾಲೇಜಿನ ವಿದ್ಯಾರ್ಥಿ ವಲಯದಲ್ಲಿ ಹಲವು ಅನುಮಾನಗಳಿಗೆ ಎಡೆಮಾಡಿದೆ. ವಿದ್ಯಾರ್ಥಿನಿಯು ಆತ್ಮಹತ್ಯೆಗೈಯಲು ಹಾಸ್ಟೆಲ್‌ನಲ್ಲಿ ನೀಡುವ ಮಾನಸಿಕ ಕಿರುಕುಳವೇ ಕಾರಣ ಎಂದು ಮೇಲ್ನೋಟಕ್ಕೆ ಕಾಣುತ್ತಿದ್ದು ಪೊಲೀಸ್ ಇಲಾಖೆ ವಿದ್ಯಾರ್ಥಿ ನೀನಾಳ ಸಾವಿನ ನೈಜ ಕಾರಣವನ್ನು ಪತ್ತೆಹಚ್ಚಿ ಬಯಲಿಗೆಳೆಯಲು ಸಮಗ್ರ ತನಿಖೆ ನಡೆಸಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ದ.ಕ ಜಿಲ್ಲಾ ಸಮಿತಿ ಆಗ್ರಹಿಸಿದೆ.

ಕಾಲೇಜಿಗೆ ಕೇರಳದಿಂದ ವಿದ್ಯಾರ್ಥಿಗಳನ್ನು ಪೂರೈಸುತ್ತಿರುವ ಏಜೆಂಟ್ ವಿದ್ಯಾರ್ಥಿನಿಯರಿಗೆ ನಿರ್ಬಂಧಗಳ ನೆಪ ಮತ್ತು ಶುಲ್ಕದ ನೆಪದಲ್ಲಿ ಕಿರುಕುಳ ಕೊಡುತ್ತಿದ್ದು ವಿದ್ಯಾರ್ಥಿಗಳು ಅವರು ಎದುರಿಸುತ್ತಿರುವ ಮಾನಸಿಕ ಒತ್ತಡವನ್ನು ವಿದ್ಯಾರ್ಥಿ ಸಂಘಟನೆ ಎಸ್‌ಎಫ್‌ಐ ಮುಖಂಡರ ಬಳಿ ಹಂಚಿಕೊಂಡಿದ್ದಾರೆ. ವಿದ್ಯಾರ್ಥಿನಿಯರ ಹಾಸ್ಟೆಲ್‌ನಲ್ಲಿ ವಾರ್ಡನ್ ಹೊರತಾಗಿ ಓರ್ವ ಪುರುಷ ಏಜೆಂಟ್ ಬಂದು ತನ್ನದೇ ಆದ ನಿಯಮಗಳನ್ನು ಹೇರುವುದಲ್ಲದೆ ರಾತ್ರಿ ಹೊತ್ತು ಶುಲ್ಕದ ನೆಪವೊಡ್ಡಿ ವಿದ್ಯಾರ್ಥಿನಿಯರ ಕೊಠಡಿಗೆ ತೆರಳುವ ವಿಷಯ ತಿಳಿದು ಬಂದಿದೆ. ವಿದ್ಯಾರ್ಥಿನಿಗೆ ಡೈರಿ ಬರೆಯುವ ಹವ್ಯಾಸವಿದ್ದು ವಿದ್ಯಾರ್ಥಿನಿಯ ಸಾವಿನ ಬಳಿಕ ಪೊಲೀಸರ ಬದಲು ಪ್ರಾಂಶುಪಾಲರು ವಿದ್ಯಾರ್ಥಿನಿಯ ಡೈರಿ ತೆಗೆದುಕೊಂಡು ಹೋಗಿದ್ದು ಇದು ಅನುಮಾನಕ್ಕೀಡಾಗಿದೆ.

ಹಾಸ್ಟೆಲ್‌ನ ನಿಯಮ ಪಟ್ಟಿಯಲ್ಲಿ "ನಮಗೆ ಬೇಕಾದ ಹಾಗೆ ನಿಯಮ ಬದಲಾಯಿಸುತ್ತೇವೆ" ಎಂಬರ್ಥದಲ್ಲಿ ನಿಯಮ ರಚಿಸಿ ವಿದ್ಯಾರ್ಥಿನಿಯರಲ್ಲಿ ಸಹಿ ಮಾಡಲು ಒತ್ತಡ ಹೇರಿದ್ದು, ಸಹಿ ಮಾಡದೆ ಇದ್ದರೆ ಆಡಳಿತ ಮಂಡಳಿಯ ಕ್ಯಾಬಿನ್ ಗೆ ಒಬ್ಬರೇ ಹೋಗಿ ಮಾತನಾಡಬೇಕು ಎಂದು ತಿಳಿಸಿರುತ್ತಾರೆ.

ವಿದ್ಯಾರ್ಥಿನಿಯರಿಗೆ ಅನಾರೋಗ್ಯದ ಸಮಯದಲ್ಲಿ ಪ್ರಥಮ ಚಿಕಿತ್ಸೆಯ ವ್ಯವಸ್ಥೆ ಇಲ್ಲ ಹಾಗೂ ಪಿರೇಡ್ಸ್ ಸಮಯದಲ್ಲಿ ನ್ಯಾಪ್ಕೀನ್ ಖರೀದಿಸಲೂ ಸಹ ಹೊರಗೆ ಬಿಡುತ್ತಿಲ್ಲ ಮತ್ತು ಅವರುಗಳು ಕೂಡ ವ್ಯವಸ್ಥೆ ಮಾಡುತ್ತಿಲ್ಲ. ಪ್ರತಿಯೊಂದು ಹಾಸ್ಟೆಲ್‌ನಲ್ಲೂ ಅವಶ್ಯಕ ಮಾತ್ರೆಗಳು ಮತ್ತು ಹೆಣ್ಣುಮಕ್ಕಳಿಗೆ ನ್ಯಾಪ್ಕೀನ್ ಇರಬೇಕು ಎಂಬ ನಿಯಮ ಇದ್ದರೂ ಅದನ್ನು ಪಾಲಿಸುತ್ತಿಲ್ಲ.

ಈ ಎಲ್ಲಾ ಸಮಸ್ಯೆಗಳ ನಡುವೆ ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ವಾರ್ಡಾನ್ ಸಮಸ್ಯೆಯೂ ಎದುರಾಗಿದೆ. ಈಗಾಗಲೇ 3 ವಾರ್ಡನ್ ಬದಲಾಗಿದ್ದು ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಮಾತ್ರ ವಾರ್ಡನ್ ಹಾಸ್ಟೆಲ್‌ನಲ್ಲಿ ಇರುತ್ತಾರೆ. ವಿದ್ಯಾರ್ಥಿನಿಯರಿಗೆ ಭದ್ರತೆಗೆ ಸೆಕ್ಯುರಿಟಿ ವ್ಯವಸ್ಥೆ ಕೂಡ ಇಲ್ಲ. ವಿದ್ಯಾರ್ಥಿನಿಯರ ಹೆತ್ತವರು ಆರ್ಥಿಕ ಸಮಸ್ಯೆಯಿಂದಾಗಿ ಮಕ್ಕಳನ್ನು ಸಂಬಂಧಿಕರ ಮನೆಯಲ್ಲಿ ಅಥವಾ ಸರಕಾರಿ ಹಾಸ್ಟೆಲ್‌ನಲ್ಲಿ ಇರಿಸುತ್ತೇವೆ ಅಂದರೆ ಟಿ.ಸಿ. ಕೊಡುತ್ತೇವೆ ಎಂದು ಬೆದರಿಕೆ ಒಡ್ಡುತ್ತಿದ್ದಾರೆ.

ಇನ್ನೂ ಅನೇಕ ಸಮಸ್ಯೆಗಳನ್ನು ಮತ್ತು ಮಾನಸಿಕ ಒತ್ತಡವನ್ನು ವಿದ್ಯಾರ್ಥಿನಿಯರು ಅನುಭವಿಸುತ್ತಿದ್ದು ವಿದ್ಯಾರ್ಥಿನಿ ನೀನಾಳ ಸಾವಿಗೆ ಇದುವೇ ಮುಖ್ಯ ಕಾರಣವಾಗಿದ್ದು ಪೊಲೀಸ್ ಇಲಾಖೆ ಕೂಲಂಕುಷ ತನಿಖೆ ಮಾಡಬೇಕು. ಆತ್ಮಹತ್ಯೆ ಮಾಡಲು ಹಿಂದಿರುವ ಕಾರಣವನ್ನು ಪತ್ತೆ ಹಚ್ಚಿ ತಪ್ಪಿತಸ್ಥರ ಮೇಲೆ ಕಠಿಣ ಕಾನೂನುಕ್ರಮಕ್ಕೆ ಒಳಪಡಿಸಬೇಕೆಂದು ಎಂದು ಭಾರತ ವಿದ್ಯಾರ್ಥಿ ಫೆಡರೇಶನ್ ಎಸ್‌ಎಫ್‌ಐ ದ.ಕ ಜಿಲ್ಲಾ ಸಮಿತಿ ಆಗ್ರಹಿಸಿದೆ.

ಹಂಪಿ ವಿವಿ ನೇಮಕಾತಿ ಪ್ರಕ್ರಿಯೆ: ಮೀಸಲಾತಿ ನಿಯಮಕ್ಕೆ ವಿರುದ್ಧವಾಗಿರುವ ಅಧಿಸೂಚನೆ ರದ್ದು ಪಡಿಸಲು ಆಗ್ರಹ

ಗುರುರಾಜ ದೇಸಾಯಿ



ಸಂಶೋಧನೆಗೆ ಮೀಸಲಾಗಿರುವ ಕರ್ನಾಟಕದ ಏಕೈಕ ವಿಶ್ವವಿದ್ಯಾಲಯ ಎಂದು ಕರೆಸಿಕೊಂಡಿರುವ ಕನ್ನಡ ವಿಶ್ವವಿದ್ಯಾಲಯವು ಹಲವು ಕಾರಣಗಳಿಗಾಗಿ ವೈಶಿಷ್ಟ್ಯತೆಯನ್ನು ಪಡೆದುಕೊಂಡಿದೆ. ಹಾಗಾಗಿಯೇ ಈ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಾಂಗವನ್ನು ಪಡೆಯುವುದಕ್ಕೆ ರಾಜ್ಯದ ನಾನಾ ಭಾಗಗಳಿಂದ ವಿದ್ಯಾರ್ಥಿಗಳು ಬರುತ್ತಾರೆ. ಅವರಿಗೆ ಒಂದು ಉನ್ನತ ಸಂಸ್ಕೃತಿಯನ್ನು ಮತ್ತು ಸಂಶೋಧನಾ ಮಾರ್ಗದರ್ಶನವನ್ನು ಮಾಡುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಇಂತಹ ವೈಶಿಷ್ಟ್ಯತೆಗಳಿಂದ ಕೂಡಿರುವ ವಿಶ್ವವಿದ್ಯಾಲಯದಲ್ಲಿ ದಿನಾಂಕ 03.09.2021 ರಂದು 371(ಜೆ) ಕಲಂ ಅಡಿಯಲ್ಲಿ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅರ್ಜಿಯನ್ನು ಆಹ್ವಾನಿಸಿ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಈ ಅಧಿಸೂಚನೆಯು ಮೀಸಲಾತಿ ನಿಯಮಕ್ಕೆ ವಿರುದ್ಧವಾಗಿದ್ದು, ಅಸಾಂವಿಧಾನಿಕವಾಗಿದೆ ಎಂದು ಜನಪರ ಸಂಘಟನೆಗಳು ಆರೋಪಿಸಿವೆ.

ನೇಮಕಾತಿಯಲ್ಲಿ 2018 ರ ಯುಜಿಸಿ ನಿಯಮದ ಅಡಿ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ತಿಳಿಸಲಾಗಿದೆ. ಆದರೆ 2018 ರ ಯುಜಿಸಿ ನಿಯಮಗಳ ಪ್ರಕಾರ ಸ್ಪರ್ಧಾತ್ಮಕ ಪರೀಕ್ಷೆಗೆ ಅವಕಾಶವಿಲ್ಲ. ಬದಲಾಗಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸದೇ ಮೆರಿಟ್ ಆಧಾರದ ಮೇಲೆ ನೇಮಕಾತಿ ಮಾಡಬೇಕಾಗುತ್ತದೆ. ಈ ಮೆರಿಟ್‌ಗೆ ಸಂಬಂಧಿಸಿದಂತೆ ಪ್ರತ್ಯೇಕ ಮಾನದಂಡಗಳನ್ನೂ ಯುಜಿಸಿ ಗುರುತಿಸಿದೆ. ಅದರ ಪ್ರಕಾರವಾಗಿಯೇ ನೇಮಕಾತಿ ಪ್ರಕ್ರಿಯೆ ಮಾಡಬೇಕಾಗುತ್ತದೆ. ಆದರೆ ಸದರಿ ನೇಮಕಾತಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ಮಾಡುವುದಾಗಿ ತಿಳಿಸಿದ್ದಾರೆ. ಇದು ಯುಜಿಸಿ ನಿಯಮಗಳ ಉಲ್ಲಂಘನೆಯಾಗುತ್ತದೆ. ಹೀಗೆ ಮಾಡುವುದರ ಹಿಂದೆ ಆಡಳಿತ ವರ್ಗದವರ ಸ್ವಹಿತಾಸಕ್ತಿ ಅಡಗಿದೆ ಎಂಬ ಅನುಮಾನ ವ್ಯಕ್ತವಾಗುತ್ತಿದೆ.

ಈ ನೇಮಕಾತಿಗೆ ಸಂಬಂಧಿಸಿದ ಬೋಧಕ ವರ್ಗದ ವೃಂದ ಮತ್ತು ನೇಮಕಾತಿ ಪರಿನಿಯಮವನ್ನು ಇದುವರೆಗೂ ಪ್ರಕಟಿಸಿಲ್ಲ. ಯಾವುದೇ ನೇಮಕಾತಿಯಲ್ಲಿ ಹುದ್ದೆಗಳಿಗೆ ಇರಬೇಕಾದ ಅರ್ಹತಾ ಮಾನದಂಡಗಳನ್ನು ಸೂಚಿಸುವುದು, ಯಾವ ವಿಧಾನದಲ್ಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುವುದು, ಹುದ್ದೆಗಳ ಭರ್ತಿಗೆ ಕನಿಷ್ಠ ವಿದ್ಯಾರ್ಹತೆ ಯಾವುದು ಹೀಗೆ ಹಲವು ಮಾನದಂಡಗಳನ್ನು ಗುರುತಿಸುವ ಪರಿನಿಯಮವನ್ನು ಇದುವರೆಗೂ ಪ್ರಕಟಿಸಿಲ್ಲ ಎಂದು ಜನಪರ ಸಂಘಟನೆಗಳು ಆಕ್ಷೇಪವನ್ನು ಎತ್ತಿವೆ.

ಈ ಅಧಿಸೂಚನೆಯನ್ನು ರದ್ದು ಮಾಡಬೇಕು ಎಂದು ಬೇಡಿಕೆಯನ್ನಿಟ್ಟಿರುವ ಸಂಘಟನೆಗಳು ಯಾವವು ಎಂದರೆ. ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ), ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ), ಸಮುದಾಯ ಕರ್ನಾಟಕ, ದಲಿತ ಹಕ್ಕುಗಳ ಸಮಿತಿ (ಡಿಎಚ್‌ಎಸ್), ದಲಿತ ಸಂಘರ್ಷ ಸಮಿತಿ ಭೀಮವಾದ, ಅಖಿಲ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಎಐಡಿವೈಓ) ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್), ಕರ್ನಾಟಕ ರಾಜ್ಯ ದೇವದಾಸಿ ಮಹಿಳಾ ವಿಮೋಚನಾ ಸಂಘಗಳು ಆಕ್ಷೇಪಣೆಯನ್ನು ಸಲ್ಲಿಸಿ ಅಧಿಸೂಚನೆಯನ್ನು ರದ್ದುಪಡಿಸುವಂತೆ ಒತ್ತಾಯಿಸಿವೆ.

ಹಾಗಾದರೆ ಆ ಅಧಿಸೂಚನೆ ಮೀಸಲಾತಿಗೆ ಹೇಗೆ ವಿರುದ್ಧವಾಗಿದೆ ಎಂಬುದನ್ನು ತಿಳಿಯೋಣ ಈ ಅಧಿಸೂಚನೆಯನ್ನು ಗಮನಿಸಿದರೆ ಒಟ್ಟು 17 ಹುದ್ದೆಗಳಲ್ಲಿ ಹೆಚ್ಚಿನ ಹುದ್ದೆಗಳು ಸಾಮಾನ್ಯ ವರ್ಗಕ್ಕೆ ಮೀಸಲಾಗಿರುವುದು ಕಂಡುಬರುತ್ತದೆ. ಸಂವಿಧಾನ ಬದ್ಧವಾಗಿ ಎಸ್.ಸಿ, ಎಸ್.ಟಿ, ಓ.ಬಿ.ಸಿ, ಮತ್ತು ಅಲ್ಪಸಂಖ್ಯಾತ ವರ್ಗದವರಿಗೆ ಸಿಗಬೇಕಾಗಿದ್ದ ಮೀಸಲಾತಿಯನ್ನು ಗಾಳಿಗೆ ತೂರಲಾಗಿದೆ. ಕರೆದಿರುವ ಒಟ್ಟು 17 ಹುದ್ದೆಗಳಲ್ಲಿ ಕೇವಲ ಒಂದು ಹುದ್ದೆಯನ್ನು ಮಾತ್ರ ಪರಿಶಿಷ್ಟ ಜಾತಿಗೆ ಮೀಸಲಿರಿಸಿದ್ದಾರೆ. ಕರ್ನಾಟಕ ಸರಕಾರ ಮೀಸಲಾತಿ ಸಂಬಂಧಿತ 1995 ರ ಆದೇಶದ ಪ್ರಕಾರ ಅಧಿಸೂಚನೆ ಮಾಡಿದ್ದರೆ, ಸಾಮಾನ್ಯ-09, ಎಸ್‌ಸಿ-02, ಎಸ್‌ಟಿ-01-ಪ್ರವರ್ಗ1-01, 2ಎ-02, 3ಎ-01, 3ಬಿ-01 ಈ ಮಾದರಿಯಲ್ಲಿ ಹುದ್ದೆಗಳನ್ನು ಮೀಸಲಿಡಬೇಕಿತ್ತು.

ಸದರಿ ಅಧಿಸೂಚನೆ (೦೩.೦೯.೨೦೨೧) ಯಲ್ಲಿ ಮೀಸಲಾತಿ	ಕರ್ನಾಟಕ ಸರ್ಕಾರ ಮೀಸಲಾತಿ ಸಂಬಂಧಿಸಿದ ೧೯೯೫ ಆದೇಶದ ಪ್ರಕಾರ ನೇಮಕಾತಿ ಅಧಿಸೂಚನೆಯನ್ನು ಮಾಡಿದ್ದಾರೆ	
GM – 14 Category (I) – 01 SC – 01 II (A) – 01 Total post is 17	GM -09 SC – 02 ST – 01 C I - 01 II (A) – 02 III (A) – 01 III (B) – 01 Total post is 17 ಒಟ್ಟು 17 ಹುದ್ದೆಗಳಲ್ಲಿ 5 ಹುದ್ದೆಗಳು ಮಹಿಳೆಯರಿಗೆ ಮೀಸಲಿರಿಸಬೇಕು	

ಸಂವಿಧಾನ ಬದ್ಧವಾಗಿ ರೋಸ್ಟರ್ ಆಧಾರದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ ವರ್ಗದವರಿಗೆ ಸಿಗಬೇಕಾದ ಜಾತಿ ಮೀಸಲಾತಿಯನ್ನು ಕಡೆಗಣಿಸಲಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಇದರಿಂದಾಗಿ ಶತಮಾನಗಳಿಂದ ತುಳಿತಕ್ಕೆ ಒಳಗಾಗಿರುವ ಸಮುದಾಯಗಳ ಉದ್ಯೋಗದ ಹಕ್ಕುಗಳನ್ನು ವಿಶ್ವವಿದ್ಯಾಲಯವು ಕಿತ್ತುಕೊಳ್ಳುತ್ತಿರುವುದು ಶೋಚನೀಯ ಸಂಗತಿ ಎಂದು ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಂಚಾಲಕ ಗೋಪಾಲಕೃಷ್ಣ ಅರಳಹಳ್ಳಿ ಆರೋಪಿಸಿದ್ದಾರೆ.

ಅದೇ ರೀತಿಯಲ್ಲಿ ಈ ಅಧಿಸೂಚನೆಯಲ್ಲಿ ಮಹಿಳಾ ಮೀಸಲಾತಿ ನಿಯಮ ಪಾಲನೆಯಾಗಿಲ್ಲ. ಕರ್ನಾಟಕ ಸರಕಾರ ಮೀಸಲಾತಿ ಸಂಬಂಧಿತ 1995 ರ ಆದೇಶದ ಪ್ರಕಾರ ಅಧಿಸೂಚನೆ ಮಾಡಿದ್ದರೆ ಈ 17 ಹುದ್ದೆಗಳಲ್ಲಿ 5 ಹುದ್ದೆಗಳನ್ನು ಮಹಿಳೆಯರಿಗೆ ಮೀಸಲಿಡಬೇಕಿತ್ತು. ಆದರೆ ಇಲ್ಲಿ ಕೇವಲ 1 ಹುದ್ದೆಯನ್ನು ಮಾತ್ರ ಮೀಸಲಿಟ್ಟಿದ್ದಾರೆ. ಮಹಿಳಾ ಅಧ್ಯಯನ ವಿಭಾಗಕ್ಕೆ ಸ್ವತಂತ್ರ ಅಸ್ತಿತ್ವ ಇಲ್ಲ ಎಂಬುದನ್ನು ತೋರಿಸುತ್ತದೆ. ಇದು ಮಹಿಳಾ ಅಧ್ಯಯನ ವಿಷಯದಲ್ಲಿ ಯಾವ ವಿಭಾಗಕ್ಕೆ ಅರ್ಜಿ ಸಲ್ಲಿಸಬೇಕು ಎಂಬ ಗೊಂದಲ ಕೂಡ ಈಗ ಆರಂಭವಾಗಿದೆ. ರೋಸ್ಟರ್ ನಿಯಮಗಳಿಗೆ ಸ್ಪಷ್ಟತೆ ಇಲ್ಲದಿರುವುದೆ ಇದಕ್ಕೆ ಕಾರಣವಾಗಿದೆ. ಇದನ್ನು ಪ್ರಶ್ನಿಸಿ ಪ್ರತಿಭಟನೆ ನಡೆಸಿದ ಮಹಿಳಾ ಅಭ್ಯರ್ಥಿಗಳನ್ನು ತಡರಾತ್ರಿಯವರೆಗೆ ಠಾಣೆಯಲ್ಲಿ ಇರುವಂತಹ ಶಿಕ್ಷೆ ನೀಡಿ ಅವರನ್ನು ಹೆದರಿಸುವ ಕೆಲಸ ಮಾಡಲಾಗಿದೆ. ಮಹಿಳಾ ಅಧ್ಯಯನ ವಿಭಾಗಕ್ಕೆ ಮಹಿಳೆಯರನ್ನೆ ನೇಮಕ ಮಾಡಿಕೊಳ್ಳಬೇಕು ಎಂಬ ಕೂಗು ಕೇಳಿ ಬಂದಿದೆ.

"ಯಾವುದೇ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಶೇಕಡಾ 33 ರಷ್ಟು ಮಹಿಳಾ ಮೀಸಲಾತಿಯನ್ನು ನೀಡಬೇಕು ಎಂಬುದು ಸರ್ಕಾರದ ನಿಯಮ". ಆದರೆ ವಿಶ್ವವಿದ್ಯಾಲಯ ಹೊರಡಿಸಿರುವ ಅಧಿಸೂಚನೆಯಲ್ಲಿ ಈ ಮೀಸಲಾತಿಯನ್ನು ನೀಡಿಲ್ಲ. ಇದು ಇಡೀ ಮಹಿಳಾ ಸಮುದಾಯಕ್ಕೇ ಅನ್ಯಾಯವೆಸಗಿದಂತಾಗಿದೆ ದಲಿತ ಸಂಘರ್ಷ ಸಮಿತಿ ಭೀಮವಾದದ ರಾಜ್ಯ ಸಂಚಾಲಕರಾದ ಆರ್. ಮೋಹನರಾಜ್ ರವರು ಆರೋಪಿಸಿದ್ದಾರೆ.

ಈ ಸಂಘಟನೆಗಳು ಸಲ್ಲಿಸಿರುವ ಆಕ್ಷೇಪಣೆಗಳನ್ನು ವಿಶ್ವವಿದ್ಯಾಲಯ ಮತ್ತು ರಾಜ್ಯ ಸರಕಾರ ಗಣನೆಗೆ ತೆಗೆದುಕೊಂಡು ಇದರಲ್ಲಿ ಉಂಟಾಗಿರುವ ತೊಡಕುಗಳನ್ನು ನಿವಾರಿಸಲು ಮುಂದಾಗಬೇಕಿದೆ. ವಿಶೇಷವಾಗಿ 371 (ಜೆ) ಕಲಂ ಗೆ ಧಕ್ಕೆಯಾಗದಂತೆ ಹಾಗೂ ಸಂವಿಧಾನ ಬದ್ಧ ಮೀಸಲಾತಿಯನ್ನು ಜಾರಿ ಮಾಡುವ ಮೂಲಕ ಸರಕಾರ ಹಾಗೂ ವಿಶ್ವವಿದ್ಯಾಲಯ ಶೋಷಿತರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಲು ಮುಂದಾಗಬೇಕಿದೆ.

ಕೋಮುದ್ವೇಷ ರಾಜಕಾರಣದಿಂದ .....

ಪುಟ 3 ರಿಂದ

ಆಯ್ಕೆ ಮಾಡಿಕೊಳ್ಳಬೇಕಾದರೆ ಜಾತಿ, ಧರ್ಮಗಳ ಹೆಸರಿನಲ್ಲಿ ಗಂಭೀರವಾದ ದೌರ್ಜನ್ಯವೆಸಗಿ ಕೊಲೆ ಮಾಡುವ ಹಂತಕ್ಕೆ ಹೋಗುತ್ತಿರುವುದನ್ನು ವಿರೋಧಿಸುತ್ತೇವೆ' ಎಂದು ಹೇಳಿದರು.



ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ವಿಮಲ ಕೆ.ಎಸ್. ಮಾತನಾಡಿ 'ಸಂವಿಧಾನ ದೇಶದ ಎಲ್ಲ ಜನರಿಗೆ ಅನ್ವಯಯವಾಗುವಂತಹ ಮೂಲಭೂತ ಹಕ್ಕುಗಳನ್ನು ಮತ್ತು ಅದನ್ನು ಪಾಲಿಸಲು ಅಗತ್ಯವಾದ ಕರ್ತವ್ಯಗಳನ್ನು ನೀಡಲಾಗಿದೆ. ಇನ್ನೊಂದು ಕಡೆಗಳಲ್ಲಿ ಆಳುವ ಸರ್ಕಾರಗಳು ಯುವಜನರ ಆಯ್ಕೆಯ ಹಕ್ಕನ್ನು ಖಾತ್ರಿಗೊಳಿಸುವ ಬದಲು ಆಯ್ಕೆಯ ಹಕ್ಕನ್ನೇ ವ ೊ ಟ ಕ ು ಗ ೊ ಳಿ ಸ ು ವ ಕಾನೂನು ತರಲು ಮುಂದಾಗಿದೆ. ಸಂವಿಧಾನ ಅಂತರ್‌ಧರ್ಮೀಯ, ಅಂತರ್‌ಜಾತಿಯ ವಿವಾಹಿತರಿಗೆ ಸರಿಯಾದ ರಕ್ಷಣೆ ಮತ್ತು ಸೌಲಭ್ಯಗಳನ್ನು ಕಲ್ಪಿಸಬೇಕು ಮತ್ತು ವಿಶೇಷ ವಿವಾಹ ಕಾಯ್ದೆಯನ್ನು ಬಲಪಡಿಸಬೇಕು' ಎಂದು ಆಗ್ರಹಿಸಿದರು.

ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಅಳ್ಳಳ್ಳ ಗ್ರಾಮದ ಮೂರು ನಾಲ್ಕು ಜನ ಯುವರ ಗುಂಪೊಂದು ಅದೇ ತಾಲ್ಲೂಕಿನ ಚೌಡೇಶ್ವರಿಹಾಳ ಗ್ರಾಮದ ಮಹಿಳೆಯರೊಬ್ಬರ ಮನೆಗೆ ನುಗ್ಗಿ ಅತ್ಯಾಚಾರಕ್ಕೆ ಪ್ರಯತ್ನಿಸಲಾಗಿದೆ. ಇದನ್ನು ಪ್ರತಿಭಟಿಸಿದ ಆಕೆಯ ಮೇಲೆ ಪೆಟ್ರೋಲ್ ಸುರಿದು ಕೊಲೆ ಮಾಡಲಾಗಿದೆ. ಈ ಘಟನೆ ನಾಗರೀಕ ಸಮಾಜ ತಲೆ ತಗ್ಗಿಸುವಂತಹದು. ಇತ್ತೀಚಿಗೆ ಇದೇ ಜಿಲ್ಲೆಯ ಮಹಿಳೆಯೊಬ್ಬರನ್ನು ಬೆತ್ತಲುಗೊಳಿಸಿ ಥಳಿಸಿದ ಘಟನೆ ಮಾಸುವ ಮುನ್ನವೇ ಈ ಘಟನೆ ಇನ್ನಷ್ಟು ಮಹಿಳೆಯರನ್ನು ಬೆಚ್ಚಿ ಬೀಳಿಸುತ್ತದೆ. ಗೃಹ ಇಲಾಖೆ ಶೀಘ್ರವಾಗಿ ತನಿಖೆ ಮಾಡಬೇಕು ಮತ್ತು ಕೂಡಲೇ ಆರೋಪಿಗಳನ್ನು ಬಂಧಿಸಬೇಕೆಂದು ಪ್ರತಿಭಟನೆಯ ಮೂಲಕ ಆಗ್ರಹಿಸಿದರು.

ಯಾದಗಿರಿ ಪ್ರಕರಣದಲ್ಲಿ ಆರೋಪಿಗಳು ತಪ್ಪಿಸಿಕೊಳ್ಳದಂತೆ ಕಾನೂನು ಕ್ರಮವಹಿಸಬೇಕು. ಸಾಕ್ಷಿಗಳು ನಾಶವಾಗದಂತೆ ಕ್ರಮವಹಿಸುವುದು. ಎರಡು ಘಟನೆಗಳ ಸಮಗ್ರ ತನಿಖೆಯಾಗಿ ಆರೋಪಿಗಳಿಗೆ ಕಠಿಣ ಶಿಕ್ಷೆಗೆ ಒಳಪಡಿಸಬೇಕೆಂದು ಸಂಘಟನೆಯು ಆಗ್ರಹಿಸಿದೆ.


ಜಸ್ಟೀಸ್ ವರ್ಮಾ ಸಮಿತಿ ಶಿಫಾರಸ್ಸುಗಳನ್ನು ಜಾರಿ ಮಾಡಬೇಕು. ಉಗ್ರಪ್ಪ ಸಮಿತಿಯ ಶಿಫಾರಸ್ಸುಗಳನ್ನು ಸರ್ಕಾರ ಅಂಗೀಕರಿಸಬೇಕು. ಮಹಿಳೆಯರಿಗೆ, ದಲಿತರಿಗೆ, ಅಲ್ಪ ಸಂಖ್ಯಾತರಿಗೆ ಘನತೆಯ ಬದುಕನ್ನು ಖಾತ್ರಿಗೊಳಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಲಲಿತಾ ಶೆಣೈ, ಶ್ರೀಮತಿ, ಬಸಮ್ಮ, ಸುನಂದ, ಸೆಲ್ವಿ, ರಾಜೇಶ್ವರಿ, ಲಕ್ಷ್ಮಿ ಮತ್ತಿತರು ಭಾಗವಹಿಸಿದ್ದರು.

ಸುರತ್ಕಲ್‌ಗೆ ಮುಸ್ಲೀಮರು ಎಂ80 ಸ್ಕೂಟರಿನಲ್ಲಿ ಮೀನು ಮಾರುತ್ತಾ ಇಂದು ನಿನ್ನೆ ಬಂದವರಲ್ಲ

ನವೀನ್ ಸೂರಿಂಜೆ

"ಇವತ್ತು ನಿನ್ನೆ ಎಂ80 ಸ್ಕೂಟರಿನಲ್ಲಿ ಮೀನು ಮಾರುತ್ತಾ ಬರುವ ಬ್ಯಾರಿ ಹುಡುಗರಿಗೇ ಇಷ್ಟಿರಬೇಕಾದರೆ? ನಮ್ಮದೇ ನೆಲದ ಅನ್ನ ತಿಂದು ಈ ಮುಸ್ಲಿಂ ಹುಡುಗರು ನಮ್ಮ ಮನೆ ಹುಡುಗಿಯರಿಗೆ ಕಾಳು ಹಾಕುವುದಾದರೆ?." ಎಂದು ಸುರತ್ಕಲ್ ನೆಲದಲ್ಲಿ ನಿಂತು ಭಜರಂಗದಳದ ಕಾರ್ಯಕ್ರಮದಲ್ಲಿ ಚೈತ್ರಾ ಕುಂದಾಪುರ ಮಾತನಾಡಿದ್ದಾರೆ.



ಸುರತ್ಕಲ್‌ಗೆ ಮುಸ್ಲೀಮರು ಎಂ80 ಸ್ಕೂಟರಿನಲ್ಲಿ ಮೀನು ಮಾರುತ್ತಾ ಇಂದು ನಿನ್ನೆ ಬಂದವರಲ್ಲ. ಚೈತ್ರಾ ಕುಂದಾಪುರ ನಿಂತು ಈ ಭಾಷಣ ಮಾಡುತ್ತಿದ್ದ ವೇದಿಕೆಯ ಎದುರಿರುವ ಸುರತ್ಕಲ್ ಹೆದ್ದಾರಿಯಲ್ಲಿ ಹಾಜಿ ಅಬ್ದುಲ್ಲರು ಸಾಹೇಬರು 1920ರ ಸಂದರ್ಭದಲ್ಲೇ ವಾಹನದಲ್ಲಿ ಬಂದಿದ್ದಾರೆ. ಚೈತ್ರಾ ಕುಂದಾಪುರ ನಿಂತ ಸುರತ್ಕಲ್ ನೆಲದಲ್ಲೇ ಹಾಜಿ ಅಬ್ದುಲ್ಲ ಸಾಹೇಬರೂ ನಡೆದಾಡಿದ್ದಾರೆ. 1918ರಲ್ಲಿ ಕರಾವಳಿಯ ಜನಕ್ಕೆ ಊಟಕ್ಕೆ ಅಕ್ಕಿಯ ಕೊರತೆ ಉಂಟಾಗುತ್ತದೆ. ಆಗ ಹಾಜಿ ಅಬ್ದುಲ್ಲ ಸಾಹೇಬರು ತನ್ನದೇ ಹಡಗಿನಲ್ಲಿ ಬರ್ಮಾದ ರಂಗೂನ್‌ನಿಂದ ಅಕ್ಕಿ ವಿತರಿಸಿದ್ದರು ಎಂದು ದಾಖಲೆಗಳು ಹೇಳುತ್ತವೆ.

1920ಕ್ಕೆ ಉಡುಪಿಯ ಅಷ್ಟ ಮಠಗಳು ಆರ್ಥಿಕ ಸಂಕಷ್ಟದಲ್ಲಿದ್ದು ಇನ್ನೇನು ಮುಚ್ಚಬೇಕು ಎನ್ನುವಾಗ ಹಾಜಿ ಅಬ್ದುಲ್ಲರು ಮಠಗಳಿಗೆ ಅಗತ್ಯವಿದ್ದ ಆಹಾರ, ಹಣವನ್ನು ನೀಡಿ ರಕ್ಷಿಸುತ್ತಾರೆ. ಜನ ಆಹಾರವಿಲ್ಲದೆ ಸಾಯುವ ಪರಿಸ್ಥಿತಿ ಇದ್ದಾಗ ಉಡುಪಿಯ ಅಷ್ಟ ಮಠಗಳಲ್ಲಿ ಒಂದಾದ ಕೃಷ್ಣಾಪುರ ಮಠವು ಚಿನ್ನದ ಪಲ್ಲಕ್ಕಿ ನಿರ್ಮಿಸಲು ಸಹಾಯ ಮಾಡುವಂತೆ ಹಾಜಿ ಅಬ್ದುಲ್ಲರನ್ನು ಕೇಳಿಕೊಳ್ಳುತ್ತದೆ. ಒಂದು ಕಡೆ ಜನರಿಗೆ ಅಕ್ಕಿ ವಿತರಿಸುತ್ತಿದ್ದ ಹಾಜಿ ಅಬ್ದುಲ್ಲ ಸಾಹೇಬರು ಕೃಷ್ಣಾಪುರ ಮಠದ ಸ್ವಾಮೀಜಿಯ ಮನವಿಯಂತೆ ಒಂದು ಸೇರು ಚಿನ್ನವನ್ನು ಕೃಷ್ಣಾಪುರ ಮಠಕ್ಕೆ ನೀಡುತ್ತಾರೆ. ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಈ ಕೃಷ್ಣಾಪುರ ಮಠ ಇರುವುದು ಚೈತ್ರಾ ಕುಂದಾಪುರ ಮುಸ್ಲೀಮರನ್ನು ಅವಮಾನಿಸಿದ ಸುರತ್ಕಲ್‌ನ ವೇದಿಕೆಯಿಂದ ಒಂದೆರಡು ಕಿಲೋ ಮೀಟರ್ ದೂರದಲ್ಲಿ. ಚೈತ್ರಾ ಕುಂದಾಪುರರವರು ಮುಸ್ಲೀಮರತ್ತಾ ಕೈತೋರಿಸಿದ ಅದೇ ಬೀದಿಯಲ್ಲಿ ಹಾಜಿ ಅಬ್ದುಲ್ಲರು ಕೃಷ್ಣಾಪುರ ಮಠದತ್ತಾ ಚಿನ್ನ, ಅಕ್ಕಿ ವಿತರಿಸಲು ಬಂದಿದ್ದರು.

ಅದೇ ಭಾಷಣದಲ್ಲಿ ಚೈತ್ರಾ ಕುಂದಾಪುರರವರು "ಕೆಲವರ ಪಾಲಿಗೆ ಭಜರಂಗದಳ ಎಂದರೆ ಗೂಂಡಾಗಳು. ಕೆಲವರ ಪಾಲಿಗೆ ಭಜರಂಗದಳ ಎಂದರೆ ರೌಡಿಗಳು. ಕೆಲವರ ಪಾಲಿಗೆ ಭಜರಂಗದಳ ಎಂದರೆ ಪುಡಾರಿಗಳು. ಇನ್ನೂ ಕೆಲವರ ಪಾಲಿಗೆ ಭಜರಂಗದಳ ಎಂದರೆ ಕೆಲಸ ಇಲ್ಲದವರು. ನಮ್ಮ ಧರ್ಮವನ್ನು ರಕ್ಷಣೆ ಮಾಡಬೇಕು ಎಂದಿದ್ದರೆ ನಮ್ಮ ಭಜರಂಗದಳ ಗೂಂಡಾಗಿರಿಗೂ ಸಿದ್ದ, ರೌಡೀಸಂಗೂ ಸಿದ್ದ" ಎನ್ನುತ್ತಾರೆ.

ಇದೇ ಭಾಷಣವನ್ನು ಚೈತ್ರ ಕುಂದಾಪುರರವರು ಆರ್‌ಎಸ್‌ಎಸ್ ಅಥವಾ ವಿಶ್ವಹಿಂದೂ ಪರಿಷತ್ ಕಾರ್ಯಕ್ರಮದಲ್ಲಿ ಮಾಡುತ್ತಾರೆಯೇ? ಭಜರಂಗದಳದಲ್ಲಿ ಇರುವುದು ಕೇವಲ ನಮ್ಮ ಶೂದ್ರ ಯುವಕರು. ನಮ್ಮ ಶೂದ್ರ ಹುಡುಗರು ಧರ್ಮಕ್ಕಾಗಿ ರೌಡಿಗಳಾಗುವುದು, ಗೂಂಡಾಗಳಾಗುವುದು ಇವರಿಗೆ ಹೆಮ್ಮೆಯ ಸಂಗತಿ. ಆರ್‌ಎಸ್‌ಎಸ್ ಮತ್ತು ವಿಶ್ವಹಿಂದೂ ಪರಿಷತ್ತಿನ ಎಷ್ಟು ನಾಯಕರ ಮೇಲೆ ಗೂಂಡಾಗಿರಿಯ ಕೇಸುಗಳಿವೆ? ಇಲ್ಲಿಯವರೆಗೆ ಇದು ಗೂಂಡಾಗಿರಿಯಲ್ಲ, ಧರ್ಮರಕ್ಷಣೆ ಎಂದು ಹಿಂದುಳಿದ/ಶೂದ್ರ ಯುವಕರನ್ನು ನಂಬಿಸಿದ್ದವರು ಈಗ ಆರ್‌ಎಸ್‌ಎಸ್ ಸಿದ್ದಾಂತ ಜಾರಿಗಾಗಿ ಗೂಂಡಾಗಿರಿ, ರೌಡಿಸಂ ನಿಮ್ಮ ಕೆಲಸ ಎಂದು ಅಧಿಕೃತವಾಗಿ ಘೋಷಿಸಿದ್ದಾರೆ. ಈಗ ಶೂದ್ರ ಯುವಕರು ಒಂದು ಕ್ಷಣ ಯೋಚನೆ ಮಾಡಬೇಕು. ನಾವು ರೌಡಿಗಳಾಗಿ/ಗೂಂಡಾಗಳಾಗಿ ಧರ್ಮ ರಕ್ಷಣೆ ಮಾಡುವುದಾದರೆ, ಧರ್ಮ ರಕ್ಷಣೆ ಹೆಸರಿನಲ್ಲಿ ಹೀರೋ/ನಾಯಕ ಯಾರಾಗುತ್ತಾರೆ?

ಚೈತ್ರ ಕುಂದಾಪುರರವರು ಮಾತನಾಡುತ್ತಾ ಸುರತ್ಕಲ್‌ನ ಪೌರಾಣಿಕ ಕತೆಯನ್ನೂ ತಿರುಚುತ್ತಾರೆ. ರಾವಣನು ಶಿವನ ಆತ್ಮಲಿಂಗವನ್ನು ಕಿತ್ತು ಕೊಂಡೊಯ್ಯುವಾಗ ಬಿದ್ದ ಕಲ್ಲಿನ ಚೂರುಗಳಿರೋ ಪ್ರದೇಶವೇ ಸುರತ್ಕಲ್ ಎನ್ನುತ್ತಾರೆ. ಪೌರಾಣಿಕ ಕತೆಯ ಪ್ರಕಾರ ಖರಾಸುರ ಎಂಬ ರಾಕ್ಷಸನು ಸಾಧುವಾಗಿ ಖರ ಮಹರ್ಷಿಯಾಗುತ್ತಾನೆ. ಈ ಖರ ಮಹರ್ಷಿಯ ಶಿರದಿಂದ ಬಿದ್ದ ಕಲ್ಲಿನ ಜಾಗ ಆಡು ಭಾಷೆಯಲ್ಲಿ ಶಿರದ ಕಲ್ಲು ಹೋಗಿ ಸುರತ್ಕಲ್ ಆಗುತ್ತದೆ ಎನ್ನುತ್ತದೆ ಪೌರಾಣಿಕ ಕತೆ. ಅಂತಹ ಖರ ರಾಕ್ಷಸನೇ ಸಾಧು ಖರ ಮಹರ್ಷಿಯಾಗಿ ಪರಿವರ್ತನೆಯಾಗಿ ಧರ್ಮ ರಕ್ಷಣೆ ಮಾಡಿರುವಾಗ ಸುರತ್ಕಲ್‌ನ ಯುವಕರು ಧರ್ಮರಕ್ಷಣೆಗಾಗಿ ಗೂಂಡಾಗಳಾಗಬೇಕು/ ರೌಡಿಗಳಾಗಬೇಕು ಎನ್ನುವುದು ಹೇಗೆ ಹಿಂದೂ ಸಂಸ್ಕೃತಿಯಾಗುತ್ತದೆ?

ಚೈತ್ರಾ ಕುಂದಾಪುರರವರು ಹೇಳಿದಂತೆ ಸುರತ್ಕಲ್‌ನಿಂದ ಲಂಕೆಗೆ ರಾವಣ ಆತ್ಮಲಿಂಗ ಕೊಂಡೊಯ್ಯುತ್ತಿದ್ದ ಎನ್ನುವುದಕ್ಕೆ ಯಾವುದೇ ದಾಖಲೆಯೂ ಇಲ್ಲ, ಪೌರಾಣಿಕ ಕತೆಯೂ ಇಲ್ಲ. ಆದರೆ ಹಾಜಿ ಅಬ್ದುಲ್ಲ ಸಾಹೇಬರು ಕರಾವಳಿಯ ಹೆಂಚು, ಮೀನು, ಒಣಮೀನನ್ನು ಶ್ರೀಲಂಕಾಕ್ಕೆ ರಫ್ತು ಮಾಡಿ ಅಲ್ಲಿಂದ ಅಕ್ಕಿಯನ್ನು ತಂದು ಸುರತ್ಕಲ್ ಸೇರಿದಂತೆ ಇಡೀ ಕರಾವಳಿಗೆ ಉಚಿತವಾಗಿ ಹಂಚಿದರು ಎಂದು ದಾಖಲೆ ಹೇಳುತ್ತದೆ. ಸುರತ್ಕಲ್‌ಗೂ ಲಂಕೆಗೂ ಸಂಬಂಧವೇನಾದರೂ ಇದ್ದರೆ ಅದು ಹಾಜಿ ಅಬ್ದುಲ್ಲ ಸಾಹೇಬರಿಂದಲೇ ಹೊರತು ರಾಮಾಯಣದಿಂದ ಅಲ್ಲ.

ಎಲ್ಲಕ್ಕಿಂತ ಹೆಚ್ಚು ಬೇಸರ ತರಿಸಿದ್ದು ಚೈತ್ರ ಕುಂದಾಪುರ ಅವರು ಭಾಷಣದಲ್ಲಿ ಮುಸ್ಲಿಂ ಮಹಿಳೆಯರನ್ನು ಉಲ್ಲೇಖಿಸಿದ ರೀತಿ. "ಕೇವಲ 30 ಶೇಕಡಾ ಇರುವ ಮುಸ್ಲೀಮ್ ಮಹಿಳೆಯರನ್ನು ಶೇಕಡಾ 70 ರಷ್ಟಿರುವ ಹಿಂದೂ ಯುವಕರು ಲವ್ ಮಾಡಿದರೆ, ಮದುವೆ ಆದರೆ ಮುಸ್ಲೀಮರ ಮನೆಯಲ್ಲಿ ಒಂದೇ ಒಂದು ಹೆಣ್ಣು ಮಗಳು ಇರಲ್ಲ" ಎಂದು ಎಚ್ಚರಿಸುತ್ತಾರೆ. ಕನಿಷ್ಟ ಸ್ತ್ರೀ ಸಂವೇದನೆ ಇರುವ ಯಾವ ಮಹಿಳೆ/ಪುರುಷನೂ ಈ ರೀತಿಯಾಗಿ ಮಾತನಾಡಲಾರ. ಮುಸ್ಲಿಂ ಪುರುಷನೊಬ್ಬ ಹಿಂದು ಮಹಿಳೆಯನ್ನು ಮದುವೆಯಾಗುವುದು ಸುಮ್ಮ ಚರ್ಚೆಗಾಗಿ (Just for the argument sake) ತಪ್ಪು ಎಂದು ಹೇಳಿದರೂ ಯಾರೋ ಮಾಡಿದ ತಪ್ಪಿಗೆ ಮುಸ್ಲಿಂ ಮಹಿಳೆಯರನ್ನು ಗುರಿಯಾಗಿಸೋದು ಎಂತಹ ಕ್ರೂರತೆ? ಒಂದು ಹೆಣ್ಣನ್ನು ಕ್ರೂರತೆಗಾಗಿ ಬಳಸಿಕೊಳ್ಳಿ ಎಂದು ಮತ್ತೊಂದು ಹೆಣ್ಣು ತಾನೇ ಘೋಷಿಸಿರುವಂತೆ ಗೂಂಡಾಗಿರಿ ಮಾಡುವ ಯುವಕರಿಗೆ ಕರೆ ಕೊಡುವುದು ಎಂತಹ ಅಮಾನವೀಯತೆ!

ಚೈತ್ರ ಕುಂದಾಪುರ ಈ ಭಾಷಣಕ್ಕಾಗಿ ನಿಂತಿದ್ದ ನೆಲ ಕಾಂತೇರಿ ಜುಮಾದಿಯ ನೆಲ. ಈ ಕಾಂತೇರಿ ಜುಮಾದಿ ಕರಾವಳಿಯ ಹಲವು ಕಡೆಗಳಲ್ಲಿ ಹಲವು ಹೆಸರುಗಳಲ್ಲಿ ಆರಾಧಿಸಲ್ಪಡುತ್ತಾಳೆ. ಹಲವು ಕಡೆಗಳಲ್ಲಿ ಈ ಜುಮಾದಿ ಜೊತೆಗೆ ಮಾಪುಳ್ಳಿ ಎಂಬ ಬ್ಯಾರ್ದಿ ದೈವವೂ ಆರಾಧನೆಗೊಳಪಡುತ್ತದೆ. ಮಾಪುಳ್ಳಿ ಎಂಬ ಬ್ಯಾರ್ದಿ(ಮುಸ್ಲಿಂ ಮಹಿಳೆ) ದೈವಕ್ಕೆ ನೇಮವಾದ ಬಳಿಕವೇ ಜುಮಾದಿ ನೇಮ ಪಡೆದುಕೊಳ್ಳುತ್ತದೆ. ಇದೆಲ್ಲಾ ಈಗ ಸೃಷ್ಟಿಸಿದ ಪದ್ಧತಿಗಳಲ್ಲ. ಕರಾವಳಿಯಲ್ಲಿ ದೈವಾರಾಧನೆ ಪ್ರಾರಂಭ ಆಗಿದಂದಿನಿಂದ ಕರಾವಳಿಗೂ ಮುಸ್ಲಿಂ ಮಹಿಳೆಯರಿಗೂ ಭಾವನಾತ್ಮಕ ಸಂಬಂಧವಿದೆ. ರಾಜಕೀಯ ದ್ವೇಷ ಸಾಧನೆಗಾಗಿ ಮುಸ್ಲಿಂ ಮಹಿಳೆಯರನ್ನು ಬಳಸಿಕೊಳ್ಳುವುದನ್ನು ಕರಾವಳಿಯ ಅದರಲ್ಲೂ ಸಿರಿ ಆಲಡೆಯ ಕಟ್ಟೆ ಸುರತ್ಕಲ್‌ನ ಹಿಂದೂಗಳು ಒಪ್ಪಲು ಸಾಧ್ಯವೇ ಇಲ್ಲ.

ಚೈತ್ರ ಕುಂದಾಪುರ ತುಳುನಾಡಿನ ಪೌರಾಣಿಕ ಕತೆ, ಜನಪದ ಇತಿಹಾಸ ಮತ್ತು ಇತಿಹಾಸವನ್ನು ಅರ್ಥ ಮಾಡಿಕೊಂಡು ಭಾಷಣ ಮಾಡುವುದನ್ನು ರೂಡಿಸಿಕೊಳ್ಳಬೇಕು. ಕೋಟಿ ಚೆನ್ನಯ್ಯ ಹೆಸರನ್ನು ಭಾಷಣದಲ್ಲಿ ಬಳಕೆ ಮಾಡುವಾಗ ನೂರು ಬಾರಿ ಯೋಚಿಸಬೇಕು. ಬಿಲ್ಲವರಿಗೆ ಮತ್ತು ಎಲ್ಲಾ ಹಿಂದುಳಿದ ವರ್ಗಗಳಿಗೆ ಕೃಷಿ ಭೂಮಿಯನ್ನು ನೀಡಿದ ಉಳುವವನೇ ಹೊಲದೊಡೆಯ ಕಾನೂನಿಗೆ ಬಹುಶಃ ಈ ಕೋಟಿ ಚೆನ್ನಯ್ಯರಂತಹ ಮಹಾತ್ಮರ ಬದುಕೇ ಪ್ರೇರಣೆಯೇನೋ! ಕೋಟಿ ಚೆನ್ನಯ್ಯರು ಚೈತ್ರ ಕುಂದಾಪುರ ಹೇಳಿದಂತೆ ತಲವಾರು ಹಿಡಿದಿಲ್ಲ. ಅವರು ಬಳಸಿದ್ದು ಸುರಿಯಾ. ಅವರು ಸುರಿಯಾ ಬಳಸಿದ್ದು ಯಾವುದೇ ಅಮಾಯಕರ ವಿರುದ್ಧವೂ ಅಲ್ಲ, ದ್ವೇಷ ಸಾಧನೆಗಾಗಿಯೂ ಅಲ್ಲ. ಬಲ್ಲಾಳರು ತನಗಾಗಿ ನೀಡಿದ್ದ ಕೃಷಿ ಭೂಮಿಯನ್ನು ಉಳಿಸಿಕೊಳ್ಳಲು ಜಮೀನ್ದಾರರ ವಿರುದ್ಧ ಸುರಿಯಾ ಬಳಸಿದರು. ಉಳುವವನೇ ಹೊಲದೊಡೆಯ ಎಂಬ ಆಶಯದ ಜಾರಿಗಾಗಿ ಆಗಿನ ಕಾಲದಲ್ಲೇ ಹೋರಾಡಿದ್ದ ಕೋಟಿಚೆನ್ನಯ್ಯರನ್ನು ಈಗಿನ ಹೊಲಸು ರಾಜಕೀಯ ದ್ವೇಷ ಸಾಧನೆಗೆ ಬಳಸಿದ್ದು ತುಳುನಾಡಿನ ಆರಾಧ್ಯ ದೈವವನ್ನು ಅವಮಾನ ಮಾಡಿದ್ದಲ್ಲದೆ ಇನ್ನೇನು ಅಲ್ಲ.



ಸುರತ್ಕಲ್ ಪ್ರದೇಶದ ಪೌರಾಣಿಕ, ಜನಪದ ಇತಿಹಾಸ ಮತ್ತು ಚಾರಿತ್ರಿಕ ಇತಿಹಾಸ ತಿಳಿದಿರುವ ಯಾರೂ ಕೂಡಾ ಚೈತ್ರ ಕುಂದಾಪುರ ಹೇಳಿದಂತೆ ಧರ್ಮ ರಕ್ಷಣೆಗಾಗಿ ರೌಡಿಸಂ ಮಾಡಲ್ಲ ಮತ್ತು ಅಮಾಯಕ ಮುಸ್ಲಿಂ ಮಹಿಳೆಯರನ್ನು ಗುರಿಯಾಗಿಸಲು ಸಾಧ್ಯವೇ ಇಲ್ಲ.

ಶೂಟೌಟ್ ಪ್ರಕರಣದ ಸಮಗ್ರ ತನಿಖೆಗೆ ಡಿವೈಎಫ್‌ಐ ಆಗ್ರಹ

ಮಂಗಳೂರು ನಗರದ ಮೋರ್ಗನ್ಸ್ ಗೇಟ್ ಬಳಿಯ ವೈಷ್ಣವಿ ಎಕ್ಸ್‌ಪ್ರೆಸ್ ಕಾರ್ಗೋ ಸಂಸ್ಥೆಯ ಮಾಲಕ ರಾಜೇಶ್ ಪ್ರಭು ತನ್ನ ಕಾರ್ಮಿಕರ ಸಂಬಳದ ವಿಚಾರದಲ್ಲಿ ನಡೆದ ಮಾತಿನ ಚಕಮಕಿ ವೇಳೆ ತಾನು ಪಿಸ್ತೂಲಿನಿಂದ ಹಾರಿಸಿದ ಗುಂಡು ಆತನ ಪುತ್ರನಿಗೆ ತಗುಲಿದ ಪ್ರಕರಣವನ್ನು ನಗರದ ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಿ ಸಮಗ್ರ ತನಿಖೆ ನಡೆಸಬೇಕೆಂದು ಡಿವೈಎಫ್‌ಐ ದ.ಕ ಜಿಲ್ಲಾ ಸಮಿತಿ ಆಗ್ರಹಿಸಿದೆ.

ರಾಜೇಶ್ ಪ್ರಭು ಮಾಲಕತ್ವದ ವೈಷ್ಣವಿ ಎಕ್ಸ್‌ಪ್ರೆಸ್ ಕಾರ್ಗೋ ಸಂಸ್ಥೆಯಲ್ಲಿ ವಾಹನ ಚಾಲಕರಾಗಿ ದುಡಿಯುತ್ತಿದ್ದ ಚಂದ್ರು ಮತ್ತು ಕ್ಲೀನರ್ ಅಶ್ರಫ್ ಎಂಬವರು ಸರಕು ಸಾಗಾಟ ಮಾಡಿದ ಕೂಲಿ ನೀಡುವಂತೆ ಕಳೆದೆರಡು ದಿನಗಳಿಂದ ಕೇಳಿಕೊಳ್ಳುತ್ತಿದ್ದರೂ ಸಂಬಳ ನೀಡಲು ನಿರಾಕರಿಸುತ್ತಿದ್ದ ವಿಚಾರಕ್ಕೆ ಸಂಬಂಧಿಸಿ ನಡೆದ ಮಾತಿನ ಚಕಮಕಿ ಮುಂದೆ ಹೊಯ್ ಕೈ ನಡೆಯುವವರೆಗೂ ಮುಂದುವರಿದಾಗ ತನ್ನ ಕೆಲಸದಾಳುವಿಗೆ ಹಾರಿಸಿದ ಗುಂಡು ತಪ್ಪಿ ಮಾಲಕನ ಪುತ್ರನಿಗೆ ತಗುಲಿದೆ. ಪುತ್ರ ಸುಧೀಂದ್ರನ ಪರಿಸ್ಥಿತಿ ಈಗ ಚಿಂತಾಜನಕವಾಗಿದ್ದು, ಈ ಮಧ್ಯೆ ಪ್ರಕರಣವನ್ನು ದಿಕ್ಕು ತಪ್ಪಿಸುವ ಮಾತುಗಳು ಕೇಳಿ ಬರುತ್ತಿದೆ. ಗುಂಡು ಹಾರಟ ನಡೆದ ಪ್ರಕರಣವನ್ನು ಕಾರ್ಮಿಕರ ತಲೆ ಮೇಲೆ ಹೊರಿಸಿ ಅವರನ್ನು ತಪ್ಪಿತಸ್ಥರನ್ನಾಗಿಸುವ ತಯಾರಿಗಳು ನಡೆಯುತ್ತಿವೆ ಎಂಬ ವಿಚಾರಗಳು ಕೇಳಿ ಬರುತ್ತಿದ್ದು ಮಾಲಕ ರಾಜೇಶ್ ಪ್ರಭು ಪ್ರಕರಣದಿಂದ ರಕ್ಷಿಸುವ ಪ್ರಯತ್ನಗಳು ನಡೆಯುತ್ತಿವೆ ಎಂಬ ವಿಚಾರ ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ. ಈ ಬಗ್ಗೆ ಮಂಗಳೂರು ನಗರ ಪೊಲೀಸ್ ಆಯುಕ್ತರು ಶೂಟೌಟ್ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಕಳೆದ ಹಲವಾರು ವರುಷಗಳಿಂದ ಕಾರ್ಮಿಕರನ್ನು ದುಡಿಸಿ ಸಂಬಳ ನೀಡದೆ ಸತಾಯಿಸುವಂತಹ ಕೆಲಸಗಳನ್ನು ಸಂಸ್ಥೆಯ ಮಾಲಕ ಮಾಡುತ್ತಾ ಬಂದಿದ್ದು, ಕಾರ್ಮಿಕರು ದುಡಿದ ಸಂಬಳವನ್ನು ಕೇಳಿದರೆ ಪಿಸ್ತೂಲು ತೋರಿಸಿ ಬೆದರಿಸುವಂತಹ ಘಟನೆಗಳು ಈ ಹಿಂದೆಯೂ ನಡೆದಿದೆ.

ಆದ್ದರಿಂದ ಈ ಗುಂಡು ಹಾರಟ ನಡೆಸಿದ ಪ್ರಕರಣವು ಯಾವುದೇ ಕಾರಣಕ್ಕೂ ದಿಕ್ಕು ತಪ್ಪದ ರೀತಿಯಲ್ಲಿ ನೋಡಿಕೊಳ್ಳಲು, ಪ್ರಕರಣವನ್ನು ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಸಮಗ್ರ ತನಿಖೆ ನಡೆಸಬೇಕೆಂದು ಡಿವೈಎಫ್‌ಐ ದ.ಕ ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಜಮ್ಮು-ಕಾಶ್ಮೀರದಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥರು

ಒಂದರ್ಥದಲ್ಲಿ, ಜಮ್ಮುವಿಗೆ ಮೋಹನ ಭಾಗವತ್ ರವರ ಇತ್ತೀಚಿನ ಭೇಟಿ ಒಂದು ವಿಜಯೋತ್ಸವದ ಪ್ರವಾಸವಾಗಿತ್ತು. ಆದರೆ ಅವರು ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನ ಕೊನೆಗೊಳಿಸಿದ್ದಕ್ಕೆ ಜಮ್ಮುವಿನಲ್ಲಾದರೂ ಜನತೆಯ ಮಂಜೂರಾತಿ ಬದಲು ಎರಡು ವರ್ಷಗಳ ನಂತರ ಎಷ್ಟು ಅಸಮಾಧಾನ ಬೆಳೆದಿದೆ ಎಂದು ಅಳೆಯಲೂ ಬಂದಿದ್ದರು. ಅಕ್ಟೋಬರ್ 5ರಂದು ಶ್ರೀನಗರದಲ್ಲಿ ನಡೆದ ಎರಡು ಕಗ್ಗೊಲೆಗಳು ವಿಭಜಕತೆ ಹೆಚ್ಚಿರುವುದನ್ನು ಮತ್ತು ಜಮ್ಮು ಮತ್ತು ಕಾಶ್ಮೀರದ ಸಾರವನ್ನೇ ಧ್ವಂಸ ಮಾಡುವ ಸಂಭವವನ್ನು ಸೂಚಿಸುತ್ತಿವೆ. ಆರ್‌ಎಸ್‌ಎಸ್ ಮುಖ್ಯಸ್ಥರ ಭೇಟಿ ಮುಂಬರಲಿರುವ ಅನಿಷ್ಟಗಳ ಅಪಶಕುನವಾಗಿದೆ.



'ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ

ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಇತ್ತೀಚೆಗೆ ಜಮ್ಮುವಿಗೆ ನಾಲ್ಕು ದಿನಗಳ ಭೇಟಿ ನೀಡಿದರು. ಇದು ಸಂವಿಧಾನದ ವಿಧಿ 370 ಮತ್ತು 35ಎ ರದ್ದತಿ ನಂತರ ಜಮ್ಮು ಮತ್ತು ಕಾಶ್ಮೀರಕ್ಕೆ ಭಾಗವತ್‌ರವರ ಮೊದಲ ಭೇಟಿ. ಒಂದು ಅರ್ಥದಲ್ಲಿ, ಇದು ಆರ್‌ಎಸ್‌ಎಸ್ ಮುಖ್ಯಸ್ಥರ ಒಂದು ವಿಜಯೋತ್ಸವದ ಪ್ರವಾಸವಾಗಿತ್ತು. ಏಕೆಂದರೆ ಈ ಸಂಘ ಪಟ್ಟುಬಿಡದೆ 370ನೇ ವಿಧಿಯನ್ನು ವಿರೋಧಿಸಿತ್ತು ಮತ್ತು ಅದನ್ನು ತೆಗೆದುಹಾಕಬೇಕೆಂದು ಹೋರಾಡಿತ್ತು.

ಅದು ಜಮ್ಮುವಿನಲ್ಲಿ ಪ್ರಜಾ ಪರಿಷದ್ ಮೂಲಕ 370ನೇ ವಿಧಿಯನ್ನು ವಿರೋಧಿಸಿತು ಮತ್ತು ಜಮ್ಮುವನ್ನು ಭಾರತೀಯ ಒಕ್ಕೂಟದೊಂದಿಗೆ ಸಂಯೋಜಿಸಲು ಒಂದು ಚಳುವಳಿಯನ್ನು ಆರಂಭಿಸಿತು. ಜಮ್ಮು ಮೊದಲು ಆರ್‌ಎಸ್‌ಎಸ್ ಮತ್ತು ನಂತರ ಬಿಜೆಪಿಯ ಕೊತ್ತಳವಾಯಿತು. ಇದಕ್ಕೆ ಮೊದಲು, ಜನಸಂಘದ ಪೂರ್ವಜನಾದ 'ಅಖಿಲ ಜಮ್ಮು ಮತ್ತು ಕಾಶ್ಮೀರ ರಾಜೀಯ ಹಿಂದೂ ಪರಿಷತ್', ಮೇ 1947ರಲ್ಲಿ ರಾಜ್ಯದ ಮಹಾರಾಜನಿಗೆ ಬೆಂಬಲವನ್ನು ನೀಡುವ ಒಂದು ನಿರ್ಣಯವನ್ನು ಅಂಗೀಕರಿಸಿತು. ಮಹಾರಾಜ ಜಮ್ಮು ಮತ್ತು ಕಾಶ್ಮೀರವನ್ನು ದೇಶವಿಭಜನೆಯ ನಂತರದ ಎರಡು ಡೊಮಿನಿಯನ್ ಗಳಲ್ಲಿ ಯಾವುದಕ್ಕೆ ಸೇರ್ಪಡೆ ಮಾಡಬೇಕು ಎಂದು ನಿರ್ಧರಿಸುವ ಸಾಂವಿಧಾನಿಕ ಅಧಿಕಾರ ಹೊಂದಿದ್ದರು. ಆ ಸಮಯದಲ್ಲಿ ಮಹಾರಾಜನಿಗೆ ಭಾರತದಲ್ಲಿ ಸೇರ್ಪಡೆಯಾಗಲು ಇಷ್ಟವಿರಲಿಲ್ಲ.

ಭಾಗವತ್ ಸಂಘದ ಸ್ವಯಂಸೇವಕರು ಮತ್ತು ಬಿಜೆಪಿ ಪದಾಧಿಕಾರಿಗಳೊಂದಿಗೆ ಬುದ್ಧಿಜೀವಿಗಳು ಮತ್ತು ಬೆಂಬಲಿಗರೊಂದಿಗೆ ಸಭೆಗಳನ್ನು ನಡೆಸಿದರು. ಸಂಘದ ಮುಖಂಡತ್ವದ ಎಂದಿನ ಶೈಲಿಯಲ್ಲಿ, ಅಂದರೆ ನಿಜವಾದ ಅರ್ಥವನ್ನು ಮತ್ತು ಆಶಯವನ್ನು ಸಂದಿಗ್ಧಗೊಳಿಸಿಡುವ ರೀತಿಯಲ್ಲಿಯೇ ಮಾತನಾಡುತ್ತ, ವಿಶೇಷ ಸ್ಥಾನಮಾನದ ಅಂತ್ಯ ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ರಚನೆಯನ್ನು ಉಲ್ಲೇಖಿಸಿ ಈಗ ಬದಲಾಗಿರುವುದು ಆಳ್ವಿಕೆಯ ವ್ಯವಸ್ಥೆ ಎಂದರು. ಹಳೆಯ ಮನೋಸ್ಥಿತಿ ಮತ್ತು ನಿಲುವುಗಳು ಇನ್ನು ಬದಲಾಗಬೇಕಷ್ಟೇ ಎಂದು ಹೇಳಿದರು.

ಜಮ್ಮು ಮತ್ತು ಕಾಶ್ಮೀರದ ಮೂಲ ರಾಜ್ಯವನ್ನು ಕೋಮು ಆಧಾರದಲ್ಲಿ ಮೂರು ಭಾಗಗಳಾಗಿ ಮಾಡಬೇಕೆಂಬ ಸಂಘದ ಸ್ಪಷ್ಟ ತಿಳುವಳಿಕೆಯ ಪ್ರಕಾರ, ಭಾಗವತ್ ಹೇಳ ಬಯಸಿದ್ದು ಆಡಳಿತಾತ್ಮಕ ನಿರ್ಧಾರಗಳಿಗೆ ರಾಜಕೀಯ ಮತ್ತು ಸೈದ್ಧಾಂತಿಕ ವಿಭಜನೆಯ ಒತ್ತಾಸೆಯಿರಬೇಕಾಗಿದೆ ಎಂದು.

ಆರ್‌ಎಸ್‌ಎಸ್ 2002 ರಲ್ಲಿ ಒಂದು ನಿರ್ಣಯದಲ್ಲಿ, ಜಮ್ಮು, ಕಣಿವೆ ಮತ್ತು ಲಡಾಖ್ ಪ್ರತ್ಯೇಕ ಪ್ರದೇಶಗಳಾಗಿ ರಾಜ್ಯದ ತ್ರಿಭಜನೆಗೆ ಕರೆ ನೀಡಿತ್ತು. 2019ರಲ್ಲಿ ತಂದ ಬದಲಾವಣೆಗಳು ಈ ದಿಕ್ಕಿನಲ್ಲಿ ಒಂದು ಹೆಜ್ಜೆಯಾಗಿತ್ತು. ಈಗ ಎರಡು ಕೇಂದ್ರಾಡಳಿತ ಪ್ರದೇಶಗಳಾಗಿವೆ– ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್. ಭಾಗವತ್ ಹೇಳಬಯಸಿದ್ದು– ಜಮ್ಮು ಮತ್ತು ಕಾಶ್ಮೀರದ ನಡುವಿನ ವಿಭಜನೆಯನ್ನು ಹೆಚ್ಚಿಸಿ ಅವು ಎರಡು ಪ್ರತ್ಯೇಕ ಪ್ರದೇಶಗಳಾಗುವಂತೆ ಆರ್‌ಎಸ್‌ಎಸ್ ಕೆಲಸ ಮಾಡುತ್ತದೆ ಎಂದು. ಹಳೆಯ ಮನೋಸ್ಥಿತಿ ಬದಲಿಸುವುದು ಎಂಬ ಅವರ ಮಾತಿನ ಅರ್ಥ ಇದೇ.

ಭಾಗವತ್ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನ ಕೊನೆಗೊಂಡ ಎರಡು ವರ್ಷಗಳ ನಂತರ ಬೆಳೆಯುತ್ತಿರುವ ಅಸಮಾಧಾನವನ್ನು ಅಳೆಯಲು ಕೂಡ ಬಂದಿದ್ದರು. ಜಮ್ಮುವಿನ ಜನರು ಹೊಸ ವ್ಯವಸ್ಥೆಯಲ್ಲಿ ಪ್ರಯೋಜನ ಪಡೆಯುವ ಬದಲು ಇದ್ದುದನ್ನು ಕಳೆದುಕೊಂಡಿದ್ದೇವೆ ಎಂದು ಕಂಡುಕೊಂಡಿದ್ದಾರೆ ಉದ್ಯೋಗಾವಕಾಶಗಳ ಕೊರತೆ, ಸ್ಥಳೀಯ ನಿವಾಸ ಕುರಿತ ಅಂಶಗಳನ್ನು ಕೊನೆಗೊಳಿಸಿದ್ದರಿಂದ ಹೊರಗಿನವರು ದೊಡ್ಡ ಪ್ರಮಾಣದಲ್ಲಿ ಬಂದು ತುಂಬಿಕೊಳ್ಳುವ ಬೆದರಿಕೆ ಮತ್ತು ದಿಲ್ಲಿಯಿಂದ ಆಳ್ವಿಕೆಯ ಅಸಮರ್ಪಕತೆ ಎಲ್ಲವೂ ಮೇಲಕ್ಕೆದ್ದು ಬಂದಿವೆ.

ವಿಶೇಷ ಸ್ಥಾನಮಾನವನ್ನು ಕೊನೆಗೊಳಿಸಿದ್ದಕ್ಕೆ ಜನರ ಮಂಜೂರಾತಿ, ವಿಶೇಷವಾಗಿ ಜಮ್ಮುವಿನಲ್ಲಾದರೂ ಖಾತ್ರಿಪಡಿಸಲು ಆಗುತ್ತದೋ ಇಲ್ಲವೋ ಎಂಬ ಬಗ್ಗೆ ಆತಂಕ ಅವರಲ್ಲಿದೆ.

ಇದರಾಚೆಗೆ, ಭಾಗವತ್ ಅನ್ವೇಷಿಸಿದ್ದು ಆರ್‌ಎಸ್‌ಎಸ್ ಶಾಖೆಗಳನ್ನು ಕಾಶ್ಮೀರ ಕಣಿವೆಗೆ ವಿಸ್ತರಿಸುವುದು ಹೇಗೆ ಎಂದು. ಮುಸ್ಲಿಮರು ಭಾರತೀಯರೇ, ಹಿಂದೂಗಳಂತಹ ಡಿಎನ್‌ಎ ಯನ್ನೇ ಹೊಂದಿದ್ದಾರೆ ಎಂಬ ಭಾಗವತ್‌ರ ಇತ್ತೀಚಿನ ಟಿಪ್ಪಣಿ ಸಂಘವನ್ನು ಮುಸ್ಲಿಮರಿಗೆ ಸ್ವೀಕಾರಾರ್ಹ ಗೊಳಿಸುವುದಕ್ಕಾಗಿಯೇ ಆಗಿತ್ತು. ನಿಜವಾದ ಗುರಿಯೆಂದರೆ ಮುಸ್ಲಿಮರನ್ನು ವಿಶಾಲ ಹಿಂದೂ ಸಮಾಜದಲ್ಲಿ 'ಸಮೀಕರಿಸುವುದು'. ಜಮ್ಮು ಮತ್ತು ಕಾಶ್ಮೀರದಾದ್ಯಂತ ಶಾಖೆಗಳ ಜಾಲವನ್ನು ವಿಸ್ತರಿಸುವ ಮಾತನ್ನು ಆಡಿರುವುದು ಈ ಸಮೀಕರಣ ಪ್ರಕ್ರಿಯೆಯನ್ನು ಮುಂದಕ್ಕೊಯ್ಯಬೇಕು ಎಂಬ ಸಂಘದ ಮಹತ್ವಾಕಾಂಕ್ಷೆಯನ್ನು ಸೂಚಿಸುತ್ತದೆ.

ಕೇಂದ್ರೀಯ ಆಡಳಿತದಲ್ಲಿ, ಈಗಾಗಲೇ ಕಾಶ್ಮೀರದವರಲ್ಲದವರನ್ನು, ಮಾಜಿ ಸೈನಿಕರು ಮತ್ತು ಕೈಗಾರಿಕಾ ಎಸ್ಟೇಟುಗಳ ಹೆಸರಿನಲ್ಲಿ ನೆಲೆಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ. ಇದಕ್ಕಾಗಿ ವಾಸದ ನಿಯಮಗಳನ್ನು ಬದಲಿಸಲಾಗಿದೆ. ಈಗ ಕೈಗೆತ್ತಿಕೊಂಡಿರುವ ಕ್ಷೇತ್ರ ಮರುವಿಂಗಡಣೆ, ಭವಿಷ್ಯದ ವಿಧಾನಸಭೆಯಲ್ಲಿ ಕಾಶ್ಮೀರದ ರಾಜಕೀಯ ಪ್ರಾತಿನಿಧ್ಯದಲ್ಲಿ ಬದಲಾವಣೆ ತರುವ ನಿರೀಕ್ಷೆ ಅವರಲ್ಲಿದೆ.

ಕಣಿವೆಯಲ್ಲಿ ಮುಖ್ಯವಾಹಿನಿಯ ಪಕ್ಷಗಳನ್ನು ಇನ್ನೂ ದಮನ ಮಾಡುತ್ತಿರುವಾಗ ಪ್ರಜಾಸತ್ತಾತ್ಮಕ ರಾಜಕೀಯಕ್ಕೆ ಹೆಚ್ಚೇನೂ ಅವಕಾಶವಿಲ್ಲದಾಗಿದೆ. ಇದು ಉಗ್ರರು ವೈಯಕ್ತಿಕ ಹಿಂಸೆಯ ಕೃತ್ಯಗಳಿಗೆ ಇಳಿಯುವ ಪರಿಸ್ಥಿತಿಯತ್ತ ಒಯ್ದಿದೆ. ಅಕ್ಟೋಬರ್ 5ರಂದು ಶ್ರೀನಗರದಲ್ಲಿ ಎಲ್ಲರ ಗೌರವಕ್ಕೆ ಪಾತ್ರರಾಗಿದ್ದ 70ವರ್ಷ ವಯಸ್ಸಿನ ಕಾಶ್ಮೀರಿ ಪಂಡಿತ ಔಷಧಿಗಾರ ಮತ್ತು ಒಬ್ಬ ಬಿಹಾರಿ ಬೀದಿ ಮಾರಾಟಗಾರರ ಕಗ್ಗೊಲೆಗಳು ಕೋಮು ವಿಭಜನೆಯನ್ನು ಸೃಷ್ಟಿಸಲಿಕ್ಕಾಗಿಯೇ ಎಸಗಿದವುಗಳು.

ಇವೆಲ್ಲವೂ ವಿಭಜಕತೆ ಹೆಚ್ಚಿರುವುದನ್ನು ಮತ್ತು ಜಮ್ಮು ಮತ್ತು ಕಾಶ್ಮೀರದ ಸಾರವನ್ನೇ ಧ್ವಂಸ ಮಾಡುವ ಸಂಭವವನ್ನು ಸೂಚಿಸುತ್ತಿವೆ. ಆರ್‌ಎಸ್‌ಎಸ್ ಮುಖ್ಯಸ್ಥರ ಭೇಟಿ ಮುಂಬರಲಿರುವ ಅನಿಷ್ಟಗಳ ಅಪಶಕುನವಾಗಿದೆ.

ಕಾಶ್ಮೀರ ಕಣಿವೆಯಲ್ಲಿ ಮುಖ್ಯವಾಹಿನಿಯ ಪಕ್ಷಗಳನ್ನು ಇನ್ನೂ ದಮನ ಮಾಡುತ್ತಿರುವಾಗ ಪ್ರಜಾಸತ್ತಾತ್ಮಕ ರಾಜಕೀಯಕ್ಕೆ ಹೆಚ್ಚೇನೂ ಅವಕಾಶವಿಲ್ಲದಾಗಿದೆ. ಇದು ಉಗ್ರರು ವೈಯಕ್ತಿಕ ಹಿಂಸೆಯ ಕೃತ್ಯಗಳಿಗೆ ಇಳಿಯುವ ಪರಿಸ್ಥಿತಿಯತ್ತ ಒಯ್ದಿದೆ. ಕಾಶ್ಮೀರ ಕಣಿವೆಯಲ್ಲಿ ಕಳೆದ ಐದು ದಿನಗಳಲ್ಲಿ ಏಳು ಮಂದಿಯನ್ನು ಉಗ್ರರು ಗುಂಡಿಟ್ಟು ಕೊಂದಿದ್ದಾರೆ.

ಶ್ರೀನಗರದಲ್ಲಿ ಔಷಧ ಅಂಗಡಿ ನಡೆಸುತ್ತಿದ್ದ ಮಖನ್‌ಲಾಲ್ ಬಿಂದ್ರೂ ಅವರನ್ನು ಮಂಗಳವಾರ ಸಂಜೆ ಗುಂಡಿಟ್ಟು ಕೊಲ್ಲಲಾಗಿದೆ. ಔಷಧ ಅಂಗಡಿಯ ಒಳಗೆ ಹತ್ತಿರದಿಂದ ಗುಂಡು ಹಾರಿಸಿ ಅವರ ಹತ್ಯೆ ಮಾಡಲಾಗಿದೆ. ಅದಾಗಿ, ಒಂದು ತಾಸಿನ ಬಳಿಕ ಬಿಹಾರದ ಬೀದಿಬದಿ ವ್ಯಾಪಾರಿ ಒಬ್ಬರನ್ನು ಲಾಲ್ ಬಝಾರ್ ಪ್ರದೇಶದಲ್ಲಿ ಕೊಲ್ಲಲಾಗಿದೆ. ಅದೇ ದಿನ ಬಂಡಿಪೊರಾ ಜಿಲ್ಲೆಯಲ್ಲಿಯೂ ಒಬ್ಬ ನಾಗರಿಕರ ಹತ್ಯೆ ಆಗಿದೆ.

ರಾಜ್ಯ ಹಿರಿಯ ಸಿಪಿಐ(ಎಂ) ಮುಖಂಡ ಮಹಮ್ಮದ್ ಯುಸುಫ್ ತರಿಗಾಮಿಯವರು ಬಿಂದ್ರೂರವರ ನಿವಾಸಕ್ಕೇ ಭೇಟಿ ನೀಡಿದರು. ಬಿಂದ್ರೂ ನೇರ ನಡೆಯ ವ್ಯಕ್ತಿ, ಎಲ್ಲ ಕಷ್ಟಗಳನ್ನು ಎದುರಿಸಿ ಅವರು ಕಾಶ್ಮೀರದಲ್ಲೇ ಉಳಿದರು. ತನ್ನ ಜನರ ನಡುವೆ ತಾನು ಸುರಕ್ಷಿತನಾಗಿದ್ದೇನೆ ಎಂದು ಅವರು ಅವರು ಎಂದು ನಂಬಿದ್ದ ಅವರು ಎಂದೂ ತನಗೆ ರಕ್ಷಣೆ ಬೇಕೆಂದು ಕೇಳಿರಲಿಲ್ಲ ಎಂದು ತರಿಗಾಮಿ ಹೇಳಿದರು.

ಈ ದುರದೃಷ್ಟಕರ ಕಗ್ಗೊಲೆಗಳು ನಿಲ್ಲಬೇಕು, ಇಂತಹ ಹೀನ ಕೃತ್ಯಗಳಿಗೆ ಯಾವುದೇ ಸಮರ್ಥನೆಯಿಲ್ಲ. ಇವು ಅಮಾನವೀಯ, ಇದನ್ನು ಎಸಗಿದವರು ಸಾಧಿಸಿರುವುದು ಏನೂಇಲ್ಲ, ಬಲಿಯಾದ ಕುಟುಂಬಗಳ ಸಂಕಟಗಳನ್ನು ಹೆಚ್ಚಿಸಿದ್ದಾರಷ್ಟೇ ಎಂದಿರುವ ತರಿಗಾಮಿ ನಮ್ಮಲ್ಲಿ ಪ್ರತಿಯೊಬ್ಬರೂ ಮಾತನಾಡಬೇಕು, ಇಂತಹ ಬರ್ಬರ ಕಥ್ಯಗಳ ವಿರುದ್ಧ ದನಿಯೆತ್ತಬೇಕು ಎಂದು ಹೇಳಿದ್ದಾರೆ.

ಎಂದಿನ ವರೆಗೆ ಹೀಗೆ..? : ಅಕ್ಟೋಬರ್ 6 ರಂದು ಶ್ರೀನಗರದ ಘಂಟಾಘರ್‌ನಲ್ಲಿ ಶೋಕಸಭೆ





ಅವರು ನನ್ನ ತಂದೆಯ ದೇಹವನ್ನಷ್ಟೇ ಕೊಂದರು, ಅವರ ಚೈತನ್ಯವನ್ನಲ್ಲ ಎಂದಿದ್ದಾಳೆ ಶ್ರೀನಗರದಲ್ಲಿ ಉಗ್ರರು ಸಾಯಿಸಿದ ಕಾಶ್ಮೀರ ಪಂಡಿತ ಸಮುದಾಯದ ಬಿಂದ್ರೂರವರ ಮಗಳು.

ಇತ್ತ ಲಖಿಮ್‌ಪುರದಲ್ಲಿ, ಕೇಂದ್ರ ಮಂತ್ರಿಯೆಮಗನ ಕಾರು ಸಾಯಿಸಿದ ರೈತನ ಮಗಳೂ ಇದನ್ನು ಅನುಮೋದಿಸುತ್ತಾಳೆ!

ವ್ಯಂಗ್ಯಚಿತ್ರ: ಸಂದೀಪ ಅಧ್ವರ್ಯು
ಟೈಂಸ್ ಆಫ್ ಇಂಡಿಯ





ಅತ್ಯಂತ ಹೊಲಸು ಹತ್ಯೆ



ಜನರಲ್ ~~ಡಾಯರ್~~ ಟಾಯರ್
ವ್ಯಂಗ್ಯಚಿತ್ರ ಕೃಪೆ: ದಿನೇಶ್ ಕುಕ್ಕುಜಡ್ಕ

ಲಖಿಂಪುರ್ ಖೇರಿಯಲ್ಲಿ ಪ್ರತಿಭಟನಾ ನಿರತ ರೈತರ ಮೇಲೆ ನಡೆಸಲಾದ ಹಿಂಸಾಚಾರ ಆಳುವ ಬಿಜೆಪಿಯ ಒಂದು ಹತಾಶ ಕೃತ್ಯ. ಬಿಜೆಪಿ ನಾಯಕರು ಮತ್ತು ಮಂತ್ರಿಗಳ ಹೇಳಿಕೆಗಳು ರೈತರ ಚಳವಳಿಯ ತೀವ್ರತೆ ಮುಂದುವರೆಯುತ್ತಿರುವುದು ಹಾಗೂ ಅದನ್ನು ಛಿದ್ರಗೊಳಿಸಲು ತಮಗೆ ಆಗದಿರುವುದನ್ನು ನೋಡಿ ಹತಾಶೆಯ ದನಿಯನ್ನು ಪಡೆಯುತ್ತಿವೆ. ಆದರೆ ಇಂಥ ಹಿಂಸಾಚಾರಗಳಿಂದ ರೈತರ ಹೋರಾಟವನ್ನು ಬಗ್ಗುಬಡಿಯಲು ಸಾಧ್ಯವಿಲ್ಲ



ಪ್ರಕಾಶ ಕಾರಟ್

ಉತ್ತರ ಪ್ರದೇಶದ ಲಖಿಂಪುರ್ ಖೇರಿಯಲ್ಲಿ ಅಕ್ಟೋಬರ್ 3 ರಂದು ಪ್ರತಿಭಟನೆ ನಿರತ ರೈತರ ಮೇಲೆ ನಡೆದ ಘೋರ ದಾಳಿಯು ಕಳೆದ 10 ತಿಂಗಳಿಂದ ನಡೆಯುತ್ತಿರುವ ರೈತ ಚಳವಳಿ ವಿರುದ್ಧ ಹಿಂಸೆಯ ಒಂದು ಹೊಸ ಮಟ್ಟವನ್ನು ಸೂಚಿಸುತ್ತದೆ. ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಮಿಶ್ರಾ ಸಂಘಟಿಸಿದ್ದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲಿದ್ದ ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿ ಕೇಶವ್ ಪ್ರಸಾದ್ ಮೌರ್ಯ ಭೇಟಿಯನ್ನು ವಿರೋಧಿಸಿ ರೈತರು ಪ್ರತಿಭಟನೆ ನಡೆಸುತ್ತಿದ್ದರು.

ಮೌರ್ಯ ಆಗಮಿಸಲಿದ್ದ ಸ್ಥಳದ ಸಮೀಪ ರೈತರು ಜಮಾಯಿಸಿದ್ದರು. ಆಗ ಅಜಯ್ ಮಿಶ್ರಾ ಹಾಗೂ ಅವರ ಮಗ ಆಶಿಶ್ ಮಿಶ್ರಾ ಇದ್ದ ವಾಹನದ ನೇತೃತ್ವದ ಕಾರುಗಳ ಸಾಲನ್ನು ಪ್ರತಿಭಟಿಸಲು ಸೇರಿದ್ದ ರೈತರ ಮೇಲೆ ಹರಿಸಿದಾಗ ನಾಲ್ಕು ರೈತರು ಮೃತಪಟ್ಟು ಅನೇಕರು ಗಾಯಗೊಂಡರು. ಗಾಯಾಳುಗಳಲ್ಲಿ ಕಿಸಾನ್ ನೇತಾರ ತೇಜಿಂದರ್ ಸಿಂಗ್ ವಿರ್ಕ್ ಕೂಡ ಸೇರಿದ್ದಾರೆ. ಮಗುಚಿ ಬಿದ್ದ ಕಾರಿನಲ್ಲಿದ್ದ ನಾಲ್ವರನ್ನು ಹೊಡೆಯಲಾಯಿತು, ಅವರು ಸತ್ತಿದ್ದಾರೆ. ಆಶಿಶ್ ಮಿಶ್ರಾ ಸಮೀಪದ ಹೊಲಗಳ ಮೂಲಕ ಪಲಾಯನ ಮಾಡಿದ್ದಕ್ಕೆ ಅಲ್ಲಿ ಹಾಜರಿದ್ದ ರೈತರು ಪುರಾವೆ ಒದಗಿಸಿದ್ದಾರೆ.

ಕೃಷಿ ಕಾನೂನುಗಳು ಹಾಗೂ ಅದನ್ನು ವಿರೋಧಿಸಿ 10 ತಿಂಗಳಿಂದ ರೈತರು ನಡೆಸುತ್ತಿರುವ ಚಳವಳಿ ಬಗ್ಗೆ ನರೇಂದ್ರ ಮೋದಿ ಸರ್ಕಾರ ಕಠಿಣ ನಿಲುವು ತಳೆಯುತ್ತಿರುವ ಹಿನ್ನೆಲೆಯಲ್ಲಿ ಈ ಲಜ್ಜೆಗೇಡಿ ಹಲ್ಲೆ ನಡೆದಿದೆ. ಒಂದು ವಾರದ ಹಿಂದೆ ನಿಯತಕಾಲಿಕೆಯೊಂದಕ್ಕೆ ನೀಡಿದ್ದ ಸಂದರ್ಶನದಲ್ಲಿ ಪ್ರಧಾನಿ ನರೇಂದ್ರ ಮೋದಿ ಕೃಷಿ ಕಾಯ್ದೆಗಳನ್ನು ಸಮರ್ಥಿಸಿಕೊಂಡಿದ್ದರು. ಅವನ್ನು ವಿರೋಧಿಸಿದ್ದಕ್ಕಾಗಿ ಪ್ರತಿಪಕ್ಷಗಳು 'ಬೌದ್ಧಿಕವಾಗಿ ಅಪ್ರಾಮಾಣಿಕರು', 'ರಾಜಕೀಯ ವಂಚಕರು' ಎಂದು ಆರೋಪಿಸಿದ್ದರು. ಅದಾದ ನಂತರ, ಹರ್ಯಾಣ ಮುಖ್ಯಮಂತ್ರಿ ಮನೋಹರ ಲಾಲ್ ಖಟ್ಟರ್ ಬಿಜೆಪಿ ಕಿಸಾನ್ ಮೋರ್ಚಾದಲ್ಲಿ ಮಾಡಿದ ಭಾಷಣದಲ್ಲಿ ಚಳವಳಿ ನಿರತ ರೈತರ ವಿರುದ್ಧ ದೊಣ್ಣೆಗಳನ್ನು ಕೈಗೆತ್ತಿಕೊಳ್ಳಿ ಎಂದು ಕಾರ್ಯಕರ್ತರಿಗೆ ಕರೆ ನೀಡಿದ್ದರು. ರೈತರ ವಿರುದ್ಧ 'ಮುಯ್ಯಿಗೆ ಮುಯ್ಯಿ' ಕೈಗೊಳ್ಳುವುದು ಅಗತ್ಯ ಎಂದು ಪ್ರಚೋದಿಸಿದ್ದರು.

ಲಖಿಂಪುರ್ ಖೇರಿ ಪ್ರಕರಣಕ್ಕೆ ಸಂಬಂಧಿಸಿ ಹೇಳುವುದಾದರೆ ಕೇಂದ್ರ ಮಂತ್ರಿ ಅಜಯ್ ಮಿಶ್ರಾ ಸೆಪ್ಟೆಂಬರ್ 25ರಂದು ಕೃಷಿ ಕಾನೂನುಗಳ ವಿರುದ್ಧ ಚಳವಳಿ ನಡೆಸುತ್ತಿರುವ ರೈತರ ವಿರುದ್ಧ ಹಿಂಸಾಚಾರದ ಬೆದರಿಕೆ ಹಾಕಿ ಪ್ರಚೋದನಕಾರಿ ಭಾಷಣ ಮಾಡಿದ್ದರು. ಅದಾದ ಕೆಲವು ದಿನಗಳ ನಂತರ ರೈತರ ಮೇಲೆ ಹಲ್ಲೆ ನಡೆದಿದೆ. ಬಿಜೆಪಿ ನಾಯಕರು ಮತ್ತು ಮಂತ್ರಿಗಳ ಹೇಳಿಕೆಗಳು ರೈತರ ಚಳವಳಿಯ ತೀವ್ರತೆ ಮುಂದುವರೆಯುತ್ತಿರುವುದು ಹಾಗೂ ಅದನ್ನು ಛಿದ್ರಗೊಳಿಸಲು ತಮಗೆ ಆಗದಿರುವುದನ್ನು ನೋಡಿ ಹತಾಶೆಯ ದನಿಯನ್ನು ಪಡೆಯುತ್ತಿವೆ.

ಇದಕ್ಕೂ ಮುಂಚೆ ಹರ್ಯಾಣದ ಕರ್ನಾಲ್‌ನ ಟೋಲ್ ಪ್ಲಾಜಾ ಬಳಿ ರೈತರ ಮೇಲೆ ಪೊಲೀಸರು ನಡೆಸಿದ ಕ್ರೂರ ಲಾಠಿ ಪ್ರಹಾರದ ಬಗ್ಗೆ ಖಟ್ಟರ್ ವಿಷಾದ ವ್ಯಕ್ತಪಡಿಸಬೇಕಾಗಿ ಬಂದಿತ್ತು. ಆ ದಾಳಿಯಲ್ಲಿ ಒಬ್ಬ ರೈತ ಮೃತಪಟ್ಟಿದ್ದರು. ಅದಕ್ಕೂ ಮೊದಲು, ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್ ಆಯುಷ್ ಸಿನ್ಹಾ 'ತಡೆಬೇಲಿ ಮುರಿಯಲು ಯತ್ನಿಸುವ ರೈತರ ತಲೆ ಒಡೆಯಿರಿ' ಎಂದು ಪೊಲೀಸರಿಗೆ ಕರೆ ನೀಡಿದ್ದರು. ಈ ಘಟನೆಯ ನಂತರ, ಸಂಯುಕ್ತ ಕಿಸಾನ್ ಮೋರ್ಚಾ ನಾಯಕತ್ವದಲ್ಲಿ ರೈತರು ಕರ್ನಾಲ್‌ನಲ್ಲಿ ಮಿನಿ–ಸೆಕ್ರಟಾರಿಯೇಟ್‌ಗೆ ಮುತ್ತಿಗೆ ಹಾಕಿದ್ದರು. ಅದಾದ ನಾಲ್ಕು ದಿನಗಳ ನಂತರ ಮಣಿದ ಆಡಳಿತ ರೈತರ ಪ್ರಮುಖ ಬೇಡಿಕೆಗಳಿಗೆ ಒಪ್ಪಿಗೆ ಸೂಚಿಸಿತ್ತು. ದೌರ್ಜನ್ಯದ ಬಗ್ಗೆ ನ್ಯಾಯಾಂಗ ತನಿಖೆ, ಮೃತ ರೈತನ ಕುಟುಂಬಕ್ಕೆ ಪರಿಹಾರ ಹಾಗೂ ಒಂದು ಉದ್ಯೋಗ ಹಾಗೂ ದರ್ಪದ ಅಧಿಕಾರಿ ಸಿನ್ಹಾರನ್ನು ರಜೆ ಮೇಲೆ ಕಳಿಸಬೇಕೆಂಬ ಬೇಡಿಕೆಗಳನ್ನು ಸರ್ಕಾರ ಒಪ್ಪಿದೆ.

ಲಖಿಂಪುರ್ ಖೇರಿಯಲ್ಲಿ ಅಮಾನುಷ ಕೃತ್ಯ ನಡೆದ ನಂತರ ಸ್ಥಳದಲ್ಲಿ ಸಾವಿರಾರು ರೈತರು ನೆರೆದಿದ್ದರು. ಕಿಸಾನ್ ನಾಯಕರೊಂದಿಗೆ ಮಾತುಕತೆ ನಡೆಸಿದ ನಂತರ ಉತ್ತರ ಪ್ರದೇಶ ಆಡಳಿತ ಮಣಿದು ಕೆಲವು ಪ್ರಮುಖ ಬೇಡಿಕೆಗಳ ಈಡೇರಿಕೆಗೆ ಒಪ್ಪಿದೆ. ಕೇಂದ್ರ ಸಚಿವರ ಮಗನ ಹೆಸರು ನಮೂದಿಸಿ ಎಫ್‌ಐಆರ್ ದಾಖಲು, ಎಫ್‌ಐಆರ್ ಮೇಲೆ ಕ್ರಮ ಕೈಗೊಳ್ಳಲು ಆಡಳಿತ ಏಳು ದಿನ ಕಾಲಾವಕಾಶ ಕೋರಿಕೆ, ಮೃತ ರೈತರ ಕುಟುಂಬಗಳಿಗೆ ತಲಾ 45 ಲಕ್ಷ ರೂಪಾಯಿ ಹಾಗೂ ಗಾಯಾಳು ಕುಟುಂಬಗಳಿಗೆ ತಲಾ 10 ಲಕ್ಷ ರೂಪಾಯಿ ಪರಿಹಾರದ ಹಕ್ಕೊತ್ತಾಯಗಳಿಗೆ ಸರ್ಕಾರ ಒಪ್ಪಿದೆ. ಘಟನೆ ಬಗ್ಗೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಯವರಿಂದ ವಿಚಾರಣೆ ನಡೆಸುವುದಾಗಿಯೂ ಕೂಡ ಸರ್ಕಾರ ಪ್ರಕಟಿಸಿದೆ. ಪೊಲೀಸರು ನಿಷ್ಪಕ್ಷಪಾತ ತನಿಖೆ ನಡೆಸುತ್ತಾರೋ ಇಲ್ಲವೋ ಎಂಬುದನ್ನು ಕಾದು ನೋಡಬೇಕಿದೆ.

ಪ್ರತಿ ಬಾರಿಯೂ ಸರ್ಕಾರಿ ಯಂತ್ರವು ಚಳವಳಿಗಳನ್ನು ದಮನಿಸಲು ಪೊಲೀಸ್ ಅಥವಾ ಇತರ ವಿಧಾನಗಳನ್ನು ಬಳಸುತ್ತಾ ಬಂದಿದೆ. ಆದರೆ ರೈತರು ಅದನ್ನು ಹಿಮ್ಮೆಟ್ಟಿಸುತ್ತಿದ್ದಾರೆ. ದೆಹಲಿ ಮತ್ತು ಸುತ್ತಮುತ್ತ ಜನವರಿ 26ರಂದು ನಡೆದ ಘಟನೆಗಳ ನಂತರ ಈ ನಮೂನೆ ಸಾಮಾನ್ಯವಾಗಿ ಬಿಟ್ಟಿದೆ.

ಆದಿತ್ಯನಾಥ್ ಆಡಳಿತ ದಬ್ಬಾಳಿಕೆ ಮತ್ತು ಪೊಲೀಸ್ ದೌರ್ಜನ್ಯಕ್ಕೆ ಬಹಳ ಕುಖ್ಯಾತವಾಗಿದೆ. ಘಟನೆಯ ಮರುದಿನ ಲಖಿಂಪುರ್ ಖೇರಿಗೆ ತೆರಳಲು ಬಯಸಿದ ಪ್ರತಿಪಕ್ಷಗಳ ಎಲ್ಲ ನಾಯಕರನ್ನು ತಡೆದು ಬಂಧಿಸಲಾಗಿದೆ. ಉತರ ಪ್ರದೇಶದ ಅನೇಕ ಕಡೆ, ರೈತರ ಹತ್ಯಾಕಾಂಡ ಪ್ರತಿಭಟಿಸಿ ಶಾಂತಿಯುತ ಪ್ರತಿಭಟನೆ ನಡೆಸಲು ಕೂಡ ಅವಕಾಶ ನೀಡಲಾಗಿಲ್ಲ.


ಕೇಂದ್ರದ ಒಬ್ಬ ರಾಜ್ಯ ಸಚಿವ, ಅದರಲ್ಲೂ ಗೃಹ ಖಾತೆಯ ಮಂತ್ರಿ, ಈ ರೀತಿಯ ಹಿಂಸಾತ್ಮಕ ಘಟನೆಗೆ ಪ್ರಚೋದಿಸಲು ಕಾರಣವಾದರೆ, ಅದರಲ್ಲೂ ಘಟನೆಯಲ್ಲಿ ಸ್ವತಃ ಅವರ ಮಗ ಒಳಗೊಂಡಿರುವಾಗ, ಸಚಿವ ಸ್ಥಾನದಿಂದ ಅವರನ್ನು ತೆಗೆದು ಹಾಕುವುದು ಪ್ರಧಾನ ಮಂತ್ರಿ ಹಾಗೂ ಸರ್ಕಾರದ ಪ್ರಾಥಮಿಕ ಕರ್ತವ್ಯವಾಗಿದೆ. ಆದರೆ ಇನ್ನೂ ಹಾಗೆ ಮಾಡಿಲ್ಲ. ಪ್ರಧಾನಿಯಾಗಲೀ ಕೇಂದ್ರದ ಗೃಹ ಸಚಿವರಾಗಲೀ ರೈತರ ಕೊಲೆಗಳನ್ನು ಖಂಡಿಸುವ ಗೋಜಿಗೂ ಹೋಗಿಲ್ಲ. ಆ ಸೌಜನ್ಯವೂ ಅವರಿಗಿಲ್ಲ. ಘಟನೆಯ ಎರಡು ದಿನದ ನಂತರ, ಅಂದರೆ ಅಕ್ಟೋಬರ್ 5ರಂದು ಲಖನೌಗೆ ಭೇಟಿ ನೀಡಿದ ಪ್ರಧಾನಿ ಮೋದಿ ಈ ಪ್ರಕರಣದ ಪ್ರಸ್ತಾಪವನ್ನೂ ಮಾಡಿಲ್ಲ.

ಲಖಿಂಪುರ್ ಖೇರಿಯಲ್ಲಿ ಪ್ರತಿಭಟನಾ ನಿರತ ರೈತರ ಮೇಲೆ ನಡೆಸಲಾದ ಹಿಂಸಾಚಾರ ಆಳುವ ಬಿಜೆಪಿಯ ಒಂದು ಹತಾಶ ಕೃತ್ಯ. ಇಂಥ ಹಿಂಸಾಚಾರಗಳಿಂದ ರೈತರ ಹೋರಾಟವನ್ನು ಬಗ್ಗುಬಡಿಯಲು ಸಾಧ್ಯವಿಲ್ಲ.

ಅನು: ವಿಶ್ವ

ಪ್ರಧಾನಿಯಾಗಲೀ,
ಗೃಹ ಸಚಿವರಾಗಲೀ
ರೈತರ ಕೊಲೆಗಳನ್ನು
ಖಂಡಿಸುವ ಗೋಜಿಗೂ ಹೋಗಿಲ್ಲ.
ಆ ಸೌಜನ್ಯವೂ ಅವರಿಗಿಲ್ಲ.

ವ್ಯಂಗ್ಯಚಿತ್ರ:
ಅಲೋಕ್ ನಿರಂತರ್









ಹೊಸ ಶಿಕ್ಷಣ ನೀತಿ: ಅಂಗನವಾಡಿಗಳ ಪಾಲಿನ ನೇಣುಗಂಬ

"ಹೊಸ ಶಿಕ್ಷಣ ನೀತಿ ಅಂಗನವಾಡಿ ಕೇಂದ್ರಗಳ ಪಾಲಿನ ನೇಣುಗಂಬವಾಗಿದ್ದು, ಯಾವುದೇ ಕಾರಣಕ್ಕೂ ಅಂಗನವಾಡಿ ಶಿಕ್ಷಕಿಯರು ಇದಕ್ಕೆ ಬಲಿಪಶುಗಳಾಗಬಾರದು. ಈ ನೇಣುಗಂಬವನ್ನು ನಾಶಮಾಡಲು ಹೋರಾಟಕ್ಕೆ ಸಜ್ಜಾಗಬೇಕು' ಎಂದು ಡಾ. ವಡ್ಡಗೆರೆ ನಾಗರಾಜಯ್ಯ ಕರೆ ನೀಡಿದರು.

ಅವರು, ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘಟನೆ, ಇಂದು ಬೆಂಗಳೂರು ನಗರದ ಸ್ಕೌಟ್ ಮತ್ತು ಗೈಡ್ಸ್ ಕಚೇರಿಯ ಸಭಾಂಗಣದಲ್ಲಿ 'ಹೊಸ ಶಿಕ್ಷಣ ನೀತಿಯಿಂದ ಅಂಗನವಾಡಿ ಕೇಂದ್ರಗಳ ಮೇಲಾಗುವ ಪರಿಣಾಮಗಳು' ಎಂಬ ವಿಷಯದ ಕುರಿತು ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡುತ್ತಾ, ಎನ್.ಇ.ಪಿ ಯನ್ನು ಜಾರಿ ಮಾಡುವ ಮೂಲಕ ಕರ್ನಾಟಕ ಮೊದಲ ಬಲಿಪಶುವಾದ ರಾಜ್ಯವಾಗಿದೆ. ಹೊಸ ಶಿಕ್ಷಣ ನೀತಿಯನ್ನು ಎಲ್ಲಿಯೂ ಚರ್ಚೆ ನಡೆಸಿಲ್ಲ. ಇದು ಶಿಕ್ಷಣದ ವ್ಯಾಪಾರೀಕರಣವನ್ನು ಪ್ರತಿಪಾದಿಸುತ್ತದೆ. 'ಸನಾತನವಾದಿ ಶಿಕ್ಷಣ ವ್ಯವಸ್ಥೆಗೆ ನಾಂದಿ ಹಾಡುವುದನ್ನು ತಡೆಯಬೇಕಿದೆ. ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಸಾವಿತ್ರಿ ಬಾಯಿ ಫುಲೆ ಅವರ ಕನಸಿನ ಶಿಕ್ಷಣ ನಮಗೆ ಬೇಕಿದೆ' ಆ ನಿಟ್ಟಿನಲ್ಲಿ ನಿಮ್ಮ ಆಂದೋಲನ ಬಲಗೊಳ್ಳಲಿ ಎಂದು ಕರೆ ನೀಡಿದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಕೆ.ಎಸ್ ವಿಮಲಾ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಾ, ಈ ನೀತಿಯ ಕುರಿತು ಎಲ್ಲಿಯೂ ಚರ್ಚೆ ನಡೆಸಿಲ್ಲ. ರಾಜ್ಯದಲ್ಲಿ ಈಗಾಗಲೇ ಜಾರಿ ಮಾಡಲಾಗಿದೆ. ಆದರೆ ಈ ನೀತಿಯ ಸಾಧಕ ಬಾಧಕಗಳನ್ನು ಕನಿಷ್ಟ ಸಚಿವ ಸಂಪುಟದಲ್ಲೂ ಚರ್ಚೆ ನಡೆಸದೆ ಜಾರಿ ಮಾಡಲಾಗಿದೆ. ರಾಜ್ಯದಲ್ಲಿ ಅಪೌಷ್ಟಿಕತೆ ಹೆಚ್ಚಿದೆ. ನಗರ ಪ್ರದೇಶದಲ್ಲಿ 32.5% ಹಾಗೂ ಗ್ರಾಮೀಣ ಪ್ರದೇಶದಲ್ಲಿ 37.5% ರಷ್ಟು ಅಪೌಷ್ಠಕತೆ ಇದೆ. ರಾಜ್ಯದಲ್ಲಿ ಪ್ರತಿ 5 ಮಗುವಿಗೆ ಒಂದು ಮಗು ಅಪೌಷ್ಠಿಕತೆಯಿಂದ ನರಳುತ್ತಿದೆ. ಹಾಗಾಗಿ ಅಂಗನವಾಡಿಗಳನ್ನು ಬಲ ಪಡಿಸಿದರೆ ಮಾತ್ರ ಈ ಅಸಮಾನತೆಯನ್ನು ಹೋಗಲಾಡಿಸಲು ಸಾಧ್ಯವಾಗುತ್ತದೆ. 'ಸರ್ಕಾರ ಹೊಸ ಶಿಕ್ಷಣ ನೀತಿಯನ್ನು ವಾಪಸು ಪಡೆಯಬೇಕು. ಐಸಿಡಿಎಸ್ ಯೋಜನೆಯನ್ನು ಕಾಯಂಗೊಳಿಸಬೇಕು ಎಂದು ಆಗ್ರಹಿಸಿದರು. ಹೊಸ ಶಿಕ್ಷಣ ನೀತಿಯ ಅಪಾಯಗಳನ್ನು ಪೋಷಕರ ಬಳಿಗೆ ಒಯ್ಯಬೇಕಿದೆ ಆ ನಿಟ್ಟಿನಲ್ಲಿ ಅಂದೋಲನ ರೂಪಗೊಳ್ಳಬೇಕು ಎಂದು ಕರೆ ನೀಡಿದರು.

ಶಿಕ್ಷಣ ತಜ್ಞ ಬಿ ಶ್ರೀಪಾದ್ ಭಟ್ ಮಾತನಾಡಿ ಹೊಸ ಶಿಕ್ಷಣ ನೀತಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ. ಅಂಗನವಾಡಿ ವ್ಯವಸ್ಥೆಯನ್ನು ಹೊಸ ಶಿಕ್ಷಣ ನಾತಿ ನಾಶ ಪಡಿಸುತ್ತದೆ ಎಂದು ಆತಂಕವನ್ನು ವ್ಯಕ್ತ ಪಡಿಸಿದರು. 2030 ಕ್ಕೆ ಶಿಕ್ಷಣವನ್ನು ಬಲಪಡಿಸುವುದಾಗಿ ಈ ನೀತಿ ಹೇಳುತ್ತಿದೆ ಇದು ಶುದ್ಧ ಸುಳ್ಳು. ಸರಕಾರದ ವರದಿ ಪ್ರಕಾರ ದೇಶದಲ್ಲಿ 75% ಜನರಿಗೆ ಇಂಗ್ಲೀಷ ಬರುವುದಿಲ್ಲ ಎಂದು ಸರಕಾರವೇ ಹೇಳುತ್ತಿದೆ. ಆದರೆ ಈ ನೀತಿಯನ್ನು ಇಂಗ್ಲೀಷನಲ್ಲಿ ಪ್ರಕಟಿಸಿರುವುದರ ಅಪಾಯವನ್ನು ಅರಿಯಬೇಕು. ಎಲ್ಲರ ಒತ್ತಾಯದ ಮೇರೆಗೆ ರಾಜ್ಯಗಳ ಭಾಷೆಯಲ್ಲಿ ತರಲಾಯಿತು. ಅದು ಕೇವಲ ಮುಖ್ಯಾಂಶಗಳು ಮಾತ್ರ ಇವೆ. ಈ ನೀತಿಗೆ ಆಶಯ ಇದೆ, ಆದರೆ ಗುರಿ ಇಲ್ಲ. ಕೇವಲ ಆಶಯ ಇದ್ದರೆ ಸಾಲದು ಗುರಿ ಇಲ್ಲದ ಈ ಶಿಕ್ಷಣ ನೀತಿ ಉಳ್ಳವರ ಪರವಾದ ಶಿಕ್ಷಣವನ್ನು ರೂಪಿಸುತ್ತದೆ ಎಂದರು.

ರಾಜ್ಯ ಅಂಗನವಾಡಿ ನೌಕರರ ಸಂಘದ ರಾಜ್ಯಾಧ್ಯಕ್ಷೆ ಎಸ್.ವರಲಕ್ಷ್ಮಿ ಮಾತನಾಡಿ, 'ಕೇಂದ್ರ ಸರ್ಕಾರ ರಾಜ್ಯಗಳ ಮೇಲೆ ಹೇರುತ್ತಿರುವ ಉದ್ದೇಶಿತ ನೀತಿಯಲ್ಲಿನ ಬಾಲವಾಟಿಕಾದಲ್ಲಿ ಅಂಗನವಾಡಿ ಪಠ್ಯಕ್ರಮ ಏಕಿಲ್ಲ' ಎಂದು ಪ್ರಶ್ನಿಸಿ, 'ಇದು ವಿಶ್ವ ಹಿಂದೂ ಪರಿಷತ್ ಪ್ರತಿಪಾದಿಸುವ ಮನುವಾದಿ ಶಿಕ್ಷಣ ನೀತಿಯಾಗಿದೆ' ಎಂದು ಕಿಡಿ ಕಾರಿದರು.

ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್.ಎಸ್ ಸುನಂದಾ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಐಸಿಡಿಎಸ್ ಉಳಿಸುವ ಹೋರಾಟ ಬಲಗೊಳ್ಳಲಿದೆ, ಕೇಂದ್ರ ರಾಜ್ಯ ಸರಕಾರಕ್ಕೆ ತಕ್ಕ ಪಾಠ ಕಲಿಸುವುದಾಗಿ ಎಚ್ಚರಿಕೆ ನೀಡಿದರು. ಸಂಘಟನೆಯ ಉಪಾಧ್ಯಕ್ಷರಾದ ಟಿ. ಲೀಲಾವತಿ ಪ್ರತಿಜ್ಞಾವಿಧಿ ಬೋಧಿಸಿದರು. ರಾಜ್ಯದ ವಿವಿಧ ಜಿಲ್ಲೆಗಳಿಂದ ನೂರಾರು ಅಂಗನವಾಡಿ ನೌಕರರು ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು. ಎನ್.ಇ.ಪಿ. ವಿರೋಧಿಸಲು ಹಳ್ಳಿ ಹಳ್ಳಿಗೆ ಆಂದೋಲನವನ್ನು ರೂಪಿಸುವ ಮಹತ್ವದ ನಿರ್ಣಯಗಳನ್ನು ವಿಚಾರ ಸಂಕಿರಣದಲ್ಲಿ ಕೈಗೊಳ್ಳಲಾಯಿತು.









ರೈತರನ್ನು ಅವಮಾನಿಸಿದ ಲಕ್ಷ್ಮಣ ಸವದಿಗೆ ಪ್ರಶ್ನೆಗಳು

ಲಕ್ಷ್ಮಣ ಸವದಿ ಎಪಿಎಂಸಿ ತಿದ್ದುಪಡಿ ಕಾಯ್ದೆ 2008 ರಿಂದಲೂ ಇತ್ತು, ಕಾಯ್ದೆ ಕುರಿತ ತಪ್ಪು ಕಲ್ಪನೆಯಿಂದ ಭಾರತ್ ಬಂದ್ ನಲ್ಲಿ ಭಾಗವಹಿಸಿದ್ದಾರೆ, ದಲ್ಲಾಳಿಗಳು ತಮ್ಮ ಹಿಡಿತ ತಪ್ಪಿ ಹೋಗುತ್ತಿರುವ ಕಾರಣದಿಂದ ಪ್ರತಿಭಟಿಸಿದ್ದಾರೆ, ಎಪಿಎಂಸಿ ಕಾಯ್ದೆ ರೈತ ಪರವಾಗಿದೆ, ಬೇಕಿದ್ದರೆ ಕಾಯ್ದೆ ಕುರಿತ ಚರ್ಚೆಗೆ ಕಾಯ್ದೆ ಪ್ರತಿ ಹಿಡಿದುಕೊಂಡು ಬರಲಿ ಎಂದು ಸವಾಲು ಹಾಕಿದ್ದಾರೆ. ಈ ಸವಾಲನ್ನು ಸ್ವೀಕರಿಸಿ ಕರ್ನಾಟಕ ಪ್ರಾಂತ ರೈತಸಂಘದ ನಾಯಕ ಟಿ.ಯಶವಂತ ಅವರಿಗೆ ಮರು ಪ್ರಶ್ನೆಗಳನ್ನು ಹಾಕಿದ್ದಾರೆ.

ಟಿ. ಯಶವಂತ

ದೆಹಲಿ ಗಡಿಗಳಲ್ಲಿ ನಡೆಯುತ್ತಿರುವ ಜಗತ್ತಿನ ಅತಿ ದೊಡ್ಡ ಹಾಗೂ ದೀರ್ಘ ರೈತ ಹೋರಾಟಕ್ಕೆ ಹತ್ತು ತಿಂಗಳು ತುಂಬಿರುವ ಮತ್ತು ಕರಾಳ ಕೃಷಿ ಕಾಯ್ದೆಗಳ ಅಂಗೀಕಾರಕ್ಕೆ ಒಂದು ವರ್ಷ ಆದ ಹಿನ್ನೆಲೆಯಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿದ್ದ ಭಾರತ್ ಬಂದ್ ಗೆ ಕರ್ನಾಟಕ ದಲ್ಲೂ ಅಭೂತಪೂರ್ವ ಬೆಂಬಲ ವ್ಯಕ್ತವಾಗಿರುವುದನ್ನು ಸಹಿಸದೆ ರಾಜ್ಯ ಬಿಜೆಪಿ–ಆರ್.ಎಸ್.ಎಸ್. ನಾಯಕರು ತಮ್ಮ ನಾಲಿಗೆ ಹರಿಬಿಟ್ಟು ರೈತರನ್ನು ಹಾಗೂ ರೈತ ಚಳುವಳಿಯನ್ನು ಅವಮಾನಿಸುವ ಮಾತುಗಳನ್ನು ಆಡಿದ್ದಾರೆ.



ಬಿಜೆಪಿ ಮುಖಂಡರುಗಳಾದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಂತ್ರಿ ನಾರಾಯಣಗೌಡ, ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ, ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ಸಿ.ಟಿ ರವಿ, ಕೋಲಾರ ಸಂಸದ ಮುನಿಸ್ವಾಮಿ ಮುಂತಾದವರು ಸೆಪ್ಟೆಂಬರ್ 27 ರ ಭಾರತ್ ಬಂದ್ ನಲ್ಲಿ ಭಾಗವಹಿಸಿರುವವರು ನಕಲಿ ರೈತರು, ದಲ್ಲಾಳಿಗಳು ಎಂದು ಜರಿದಿದ್ದಾರೆ.

ಆದರೆ ಲಕ್ಷ್ಮಣ ಸವದಿ ಮುಂದುವರೆದು ಎಪಿಎಂಸಿ ತಿದ್ದುಪಡಿ ಕಾಯ್ದೆ 2008 ರಿಂದಲೂ ಇತ್ತು, ಕಾಯ್ದೆ ಕುರಿತ ತಪ್ಪು ಕಲ್ಪನೆಯಿಂದ ಭಾರತ್ ಬಂದ್ ನಲ್ಲಿ ಭಾಗವಹಿಸಿದ್ದಾರೆ,

ಪುಟ 10 ಕ್ಕೆ

ಕೊಲಂಬಿಯದ ಎಡಶಕ್ತಿಗಳ 'ಚಾರಿತ್ರಿಕ ಒಪ್ಪಂದ'

ಕೊಲಂಬಿಯದ ಎಂಟು ಎಡಚಳುವಳಿಗಳು ಒಂದು ಹೊಸ ಮೈತ್ರಿಕೂಟ ರಚಿಸಿದ್ದು, ಮಾರ್ಚ್ 13, 2022ರಂದು ನಡೆಯಲಿರುವ ರಾಷ್ಟ್ರೀಯ ಕಾಂಗ್ರೆಸ್ (ಅಲ್ಲಿನ ಪಾರ್ಲಿಮೆಂಟ್ ನ ಹೆಸರು) ಗೆ ಜಂಟಿಯಾಗಿ ಸ್ಪರ್ಧಿಸಲು ನಿರ್ಧರಿಸಿವೆ. ಈ ಮೈತ್ರಿಕೂಟಕ್ಕೆ 'ಚಾರಿತ್ರಿಕ ಒಪ್ಪಂದ' ಎಂಬ ಹೆಸರಿಡಲಾಗಿದೆ. 'ಮಾನವೀಯ ಕೊಲಂಬಿಯ', ದೇಶಪ್ರೇಮಿ ಒಕ್ಕೂಟ–ಕಮ್ಯುನಿಸ್ಟ್ ಪಕ್ಷ', 'ಪ್ರಜಾಸತ್ತಾತ್ಮಕ ಬದಲಿ ಧ್ರುವ', ಸಾಮಾಜಿಕ ಬದಲಿ ಚಳುವಳಿ (ಎಂ.ಎ.ಐ.ಎಸ್), ಲೇಬರ್ ಪಕ್ಷ, ಪ್ರಜಾತ್ತಾತ್ಮಕ ಒಕ್ಕೂಟ ಮತ್ತು 'ನಾವೆಲ್ಲ ಕೊಲಂಬಿಯಾ' – ಇವು ಈ ಮೈತ್ರಿಕೂಟದಲ್ಲಿ ಸೇರಿದ ಎಂಟು ಎಡ ಪಕ್ಷ/ಚಳುವಳಿಗಳು.

'ಚಾರಿತ್ರಿಕ ಒಪ್ಪಂದ' ಎಲ್ಲ ಎಡ ರಾಜಕೀಯ ಮತ್ತು ಸಾಮಾಜಿಕ ಚಳುವಳಿಗಳು, ಪಕ್ಷಗಳು/ಸಂಘಟನೆಗಳನ್ನು ದೇಶದ ಪುನರ್ರಚನೆಯ ಅಜೆಂಡಾದ ಮೇಲೆ ಒಗ್ಗೂಡಿಸುವ ಉದ್ದೇಶ ಹೊಂದಿದೆ. ದೇಶದ ಪುನರ್ರಚನೆಯ ಅಜೆಂಡಾದಲ್ಲಿ ಶಾಂತಿ, ಪರಿಸರ, ಶಿಕ್ಷಣ ಮತ್ತು ಆರೋಗ್ಯಗಳು ಸೇರಿವೆ. ಎಲ್ಲ ಎಡ–ನಡುಪಂಥೀಯ ಶಕ್ತಿಗಳನ್ನು ಈ ಮೈತ್ರಿಕೂಟಕ್ಕೆ ಆಹ್ವಾನಿಸಲಾಗಿದೆ. ಬಲಪಂಥೀಯ ಶಕ್ತಿಗಳನ್ನು ಕೂಟದಿಂದ ಹೊರಗಿಡಲಾಗಿದೆ. ಪಾರ್ಲಿಮೆಂಟಿನ ಎರಡೂ ಸದನಗಳಲ್ಲಿ 2022ರ ಚುನಾವಣೆಗಳಲ್ಲಿ ಬಹುಮತ ಪಡೆಯುವತ್ತ ಈ ಕೂಟ ಹೆಜ್ಜೆ ಹಾಕಲಿದೆ. ಎಡ ಪಕ್ಷಗಳನ್ನು ಪಾರ್ಲಿಮೆಂಟ್ ಮತ್ತು ಅಧಿಕಾರದಿಂದ ದೂರವಿಡುವ ಭ್ರಷ್ಟ ದಮನಕಾರಿ ವ್ಯವಸ್ಥೆಗೆ ಸವಾಲು ಹಾಕಲು ನಿರ್ಧರಿಸಿವೆ.

ಕೊಲಂಬಿಯ ಉತ್ತರ/ಮಧ್ಯ ಮತ್ತು ದಕ್ಷಿಣ ಅಮೆರಿಕಗಳ ಗಡಿಯಲ್ಲಿದ್ದು, ಅಲ್ಲಿ ವಿಪರೀತ ಅಸಮಾನತೆ, ಶೋಷಣೆ ಹಾಗೂ ಅದರ ವಿರುದ್ಧ ಸಮರಶೀಲ ಹೋರಾಟದ ದೀರ್ಘ ಪರಂಪರೆ ಇದೆ. ಹೆಚ್ಚಾಗಿ ಬಲಪಂಥೀಯ ಸರಕಾರಗಳ ದಬ್ಬಾಳಿಕೆ, ಶೋಷಣೆಗಳ ವಿರುದ್ಧ ಮತ್ತು ಜನಪರ ನೀತಿಗಳಿಗಾಗಿ "ಕೊಲಂಬಿಯ ಕ್ರಾಂತಿಕಾರಿ ಸೇನಾ ಪಡೆ" **(FARC)** 1974 ರಿಂದ ಸಶಸ್ತ್ರ ಗೆರಿಲ್ಲಾ ಹೋರಾಟ ನಡೆಸಿದೆ. 2016ರಲ್ಲಿ ಅಂತರ್ರಾಷ್ಟ್ರೀಯ ಮಧ್ಯಸ್ಥಿಕೆಯಲ್ಲಿ ಶಾಂತಿ ಒಪ್ಪಂದ ಆಗುವವರೆಗೆ ಸಶಸ್ತ್ರ ಗೆರಿಲ್ಲಾ ಹೋರಾಟವನ್ನು ಹತ್ತಿಕ್ಕುವ ಹೆಸರಲ್ಲಿ ಅಮಾಯಕ ನಾಗರಿಕರ, ಎಲ್ಲ ಸಾಮಾಜಿಕ ರಾಜಕೀಯ ಮಾನವ ಹಕ್ಕು ಹೋರಾಟಗಾರರ, ಪತ್ರಕರ್ತರ ಮತ್ತು ಗೆರಿಲ್ಲಾ ಹೋರಾಟಗಾರರ ಮೇಲೆ ತೀವ್ರ ದಮನಚಕ್ರ ಹರಿಯಬಿಡಲಾಗಿದೆ. ಸರಕಾರ ಪ್ರಾಯೋಜಿತ ಉಗ್ರ ಬಲಪಂಥೀಯ ಸಶಸ್ತ್ರ ಗ್ಯಾಂಗುಗಳು, ಪೋಲಿಸ್ ಮಿಲಿಟರಿ ಪಡೆಗಳು ಕೊಲೆ ಸೇರಿದಂತೆ ತೀವ್ರ ಮಾನವ ಹಕ್ಕುಗಳ ಉಲ್ಲಂಘನೆಯಲ್ಲಿ ತೊಡಗಿದ್ದವು.

ಹಿಂಸಾಚಾರ ಮತ್ತು ದಮನಚಕ್ರ ಎಷ್ಟು ತೀವ್ರವಾಗಿತ್ತೆಂದರೆ 1985ರಿಂದೀಚೆಗೆ 82 ಲಕ್ಷ ಜನ ನಿರ್ವಸಿತರಾಗಿದ್ದಾರೆ. ಐದು ದಶಕಗಳ ಹಿಂಸಾಚಾರದಲ್ಲಿ 2.6 ಲಕ್ಷ ಜನ ಸತ್ತಿದ್ದಾರೆ. 2016ರ ನಂತರವೂ ಒಪ್ಪಂದದ ಪ್ರಕಾರ ಶಸ್ತ್ರಾಸ್ತ್ರ ಒಪ್ಪಿಸಿದ ಮಾಜಿ ಗೆರಿಲ್ಲಾ ಹೋರಾಟಗಾರರ ರಕ್ಷಣೆ, ಪುನರ್ವಸತಿಗಳನ್ನು ಸಂಘಟಿಸುವುದರಲ್ಲಿ ಸರಕಾರದ ನಿರ್ಲಕ್ಷ, ಒಪ್ಪಂದದ ತೀವ್ರ ಉಲ್ಲಂಘನೆಗಳಿಂದಾಗಿ ಶಾಂತಿ ಸ್ಥಾಪನೆಯಾಗಿಲ್ಲ. ಹಿಂಸಾಚಾರದಲ್ಲಿ ತೊಡಗಿದ ಉಗ್ರ ಬಲಪಂಥೀಯ ಸಶಸ್ತ್ರ ಗ್ಯಾಂಗುಗಳು, ಪೋಲಿಸ್ ಮಿಲಿಟರಿ ಪಡೆಗಳ ಸಿಬ್ಬಂದಿಗಳಿಗೆ ಶಿಕ್ಷೆ ಆಗಿಲ್ಲ. ಮಾನವ ಹಕ್ಕುಗಳ ಹೋರಾಟಗಾರರ ಹತ್ಯೆಗಳಲ್ಲಿ ಜಗತ್ತಿನಲ್ಲಿ ಅತಿ ಹೆಚ್ಚು (70%) ಲ್ಯಾಟಿನ್ ಅಮೆರಿಕದಲ್ಲಿ ನಡೆದರೆ, ದೇಶಗಳಲ್ಲಿ ಅತಿ ಹೆಚ್ಚು (30%) ಕೊಲಂಬಿಯಾದ್ದು ಎನ್ನುವುದು ಪರಿಸ್ಥಿತಿಯ ಗಂಭಿರತೆಯನ್ನು ಹೇಳುತ್ತದೆ.

ಈಗಿನ ಅಧ್ಯಕ್ಷ ಇವಾನ್ ದುಕ್ ಅಧಿಕಾರ ವಹಿಸಿಕೊಂಡ (2018) ನಂತರ ಹಿಂಸಾಚಾರ ವಿಪರೀತವಾಗಿ ಹೆಚ್ಚಿದೆ. ಅವರ ಪಕ್ಷ ಶಾಂತಿ ಒಪ್ಪಂದಕ್ಕೆ ಹಲವು ಕಲಮುಗಳಿಗೆ ವಿರೋಧ ವ್ಯಕ್ತಪಡಿಸಿದ್ದು ಅದರ ಜಾರಿಗೆ ನಿರ್ಲಕ್ಷ ವಹಿಸಿದೆ. ಸಾಲದ್ದಕ್ಕೆ ಕೊವಿದ್ ಪರಿಸ್ಥಿತಿಯನ್ನು ನಿಭಾಯಿಸದೆ 8.6 ಲಕ್ಷ ಪ್ರಕರಣಗಳು ಮತ್ತು 26 ಸಾವಿರ ಸಾವುಗಳು ಸಂಭವಿಸಿವೆ. ಬಲಪಂಥೀಯ ಅಧ್ಯಕ್ಷ ಇವಾನ್ ದುಕ್ ಅವರ ಎರಡುವರೆ ವರ್ಷಗಳ ದುರಾಡಳಿತದಿಂದ ಜನತೆಯ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳು ತೀವ್ರವಾಗಿರುವ ಸನ್ನಿವೇಶದಲ್ಲಿ ಈ ಮೈತ್ರಿಕೂಟ ರಚನೆಯಾಗುತ್ತಿರುವುದು ಗಮನಾರ್ಹವಾಗಿದೆ.

ರೈತರನ್ನು ಅವಮಾನಿಸಿದ ಲಕ್ಷ್ಮಣ ಸವದಿಗೆ ಪ್ರಶ್ನೆಗಳು......

ಪುಟ 9 ರಿಂದ

ದಲ್ಲಾಳಿಗಳು ತಮ್ಮ ಹಿಡಿತ ತಪ್ಪಿ ಹೋಗುತ್ತಿರುವ ಕಾರಣದಿಂದ ಪ್ರತಿಭಟಿಸಿದ್ದಾರೆ, ಎಪಿಎಂಸಿ ಕಾಯ್ದೆ ರೈತ ಪರವಾಗಿದೆ, ಬೇಕಿದ್ದರೆ ಕಾಯ್ದೆ ಕುರಿತ ಚರ್ಚೆಗೆ ಕಾಯ್ದೆ ಪ್ರತಿ ಹಿಡಿದುಕೊಂಡು ಬರಲಿ ಎಂದು ಸವಾಲು ಹಾಕಿದ್ದಾರೆ.

ಲಕ್ಷ್ಮಣ ಸವದಿ ಹೇಳುವಂತೆ ರೈತರು ಕಾಯ್ದೆ ಕುರಿತ ತಪ್ಪು ಕಲ್ಪನೆಯಿಂದ ಭಾರತ್ ಬಂದ್ ನಲ್ಲಿ ಭಾಗವಹಿಸಿಲ್ಲ. ಈ ಕಾಯ್ದೆಯ ಟೊಳ್ಳುತನ ಹಾಗೂ ರೈತ ವಿರೋಧಿ ಸ್ವರೂಪ ಈಗಾಗಲೇ ಬಯಲಿಗೆ ಬಂದಿದೆ. ಸ್ವತಃ ಅವರದೇ ಬಿಜೆಪಿ ಸರ್ಕಾರದ ಕೃಷಿ ಮಾರುಕಟ್ಟೆ ಸಚಿವರೇ ಎಪಿಎಂಸಿ ಗಳ ಆದಾಯ ಗಣನೀಯವಾಗಿ ಕುಸಿತ ಕಂಡಿದ್ದು ಶೇಕಡಾ 80 ರಷ್ಟು ಮಾರುಕಟ್ಟೆ ಗಳು ಮುಚ್ಚುವ ಹಂತ ತಲುಪಿವೆ ಎಂದು ಮೈಸೂರಿನಲ್ಲಿ ಹೇಳಿದ್ದಾರೆ. ನಿಮ್ಮದೇ ಸರ್ಕಾರದ ಸಚಿವರ ಮಾತಿಗೆ ನಿಮ್ಮ ಉತ್ತರ ಏನು? ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ತಂದಿರುವ ಕೃಷಿ ಕಾಯ್ದೆಗಳ ಒಟ್ಟು ಸಂಖ್ಯೆ ಆರು. ಆದರೆ ಕೇವಲ ಒಂದು ಕಾಯ್ದೆಯ ಉಲ್ಲೇಖ ಮಾಡಿ ಉಳಿದ ಐದು ಕಾಯ್ದೆಗಳನ್ನು ಬಿಟ್ಟಿದ್ದೇಕೆ? ಈ ಕಾಯ್ದೆಗಳ ಬಗ್ಗೆ ಅಜ್ಞಾನವೋ ಅಥವಾ ಉಲ್ಲೇಖಿಸಿದರೆ ತಮ್ಮ ಬಣ್ಣ ಬಯಲಾಗುವ ಭಯವೋ?

ಎಪಿಎಂಸಿ ತಿದ್ದುಪಡಿ ಕಾಯ್ದೆ 2008 ರಿಂದಲೂ ಇತ್ತು ಎಂದು ಸವದಿ ಸುಳ್ಳು ಹೇಳಿದ್ದಾರೆ. ಕಾಯ್ದೆ 2008 ರಿಂದ ಇದ್ದ ಮೇಲೆ 2020 ರಲ್ಲಿ ಈ ಕಾಯ್ದೆ ತಿದ್ದುಪಡಿ ಗೆ ಎರಡು ಬಾರಿ ಸುಗ್ರಿವಾಜ್ಞೆ ಹೊರಡಿಸಿ ತಿದ್ದುಪಡಿ ತಂದಿದ್ದು ಏಕೆ? ಮೇ 5, 2020 ರಂದು ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತರಲು ಕೇಂದ್ರ ಸರ್ಕಾರ ಲಿಖಿತ ಪತ್ರದ ಮೂಲಕ ನಿರ್ದೇಶನ ಕೊಟ್ಟ ಕೂಡಲೇ ಈ ನಿರ್ದೇಶನ ವನ್ನು ಜಾರಿ ಮಾಡುವ ತರಾತುರಿಯಲ್ಲಿ ಕನಿಷ್ಠ ಕಾನೂನು ಪ್ರಕ್ರಿಯೆ ಅನುಸರಿಸದೇ ಸುಗ್ರಿವಾಜ್ಞೆ ತಂದಿರಿ. ರಾಜ್ಯಪಾಲರು ಆ ಸುಗ್ರಿವಾಜ್ಞೆ ವಾಪಸ್ ಮಾಡಿದ ಮೇಲೆ ಮತ್ತೆ ನಾಚಿಕೆ ಇಲ್ಲದೆ ಎರಡನೇ ಬಾರಿಗೆ ಸುಗ್ರಿವಾಜ್ಞೆ ಹೊರಡಿಸಿದ್ದೀರಾ. ಆಗ ನೀವು ಉಪಮುಖ್ಯಮಂತ್ರಿಯಾಗಿದ್ದ ನಿಮಗೆ ಇದು ಗೊತ್ತಿಲ್ಲವೇ?

ವಾಸ್ತವವಾಗಿ ನಿಯಂತ್ರಿತ ಮಾರುಕಟ್ಟೆಗಳನ್ನು ದುರ್ಬಲಗೊಳಿಸುವ ಪ್ರಯತ್ನ ಬಹಳ ಹಿಂದಿನಿಂದ ನಡೆದಿದ್ದರೂ ರೈತ ಹೋರಾಟದ ಒತ್ತಡದ ಕಾರಣದಿಂದ ಎಪಿಎಂಸಿ ಗಳನ್ನು ಸುಧಾರಿಸದಿದ್ದರೂ ದುರ್ಬಲಗೊಳಿಸುವ ಪ್ರಯತ್ನಕ್ಕೆ ಅವಕಾಶ ಸಿಕ್ಕಿರಲಿಲ್ಲ. ನಿಮ್ಮದೇ ಕೇಂದ್ರ ಸರ್ಕಾರ 2017ರಲ್ಲಿ ರಾಜ್ಯದ ಮೇಲೆ ಒತ್ತಡ ಹೇರಿ ಎಪಿಎಂಸಿ ಸಮಿತಿಗಳ ಅಧಿಕಾರ ವ್ಯಾಪ್ತಿ ಒಂದನ್ನು ಹೊರತುಪಡಿಸಿ ಉಳಿದ ಕ್ಷೇತ್ರಗಳಾದ ಗೋಡೌನ್, ಕೋಲ್ಡ್ ಸ್ಟೋರೇಜ್, ಹಣ್ಣು ತರಕಾರಿ ಮಾರಾಟ, ನೇರ ಮಾರಾಟ, ಆನ್ ಲೈನ್ ಮಾರಾಟ ಮುಂತಾದವುಗಳಿಗೆ ಅವಕಾಶ ನೀಡುವ ತಿದ್ದುಪಡಿ ತಂದಿದ್ದು. ಈಗ 2020 ರ ಸುಗ್ರಿವಾಜ್ಞೆಯಲ್ಲಿ ಎಪಿಎಂಸಿ ಸಮಿತಿಗಳು ಎಪಿಎಂಸಿ ಹೊರಗಡೆ ನಡೆಯುವ ಯಾವುದೇ ಕೃಷಿ ಮಾರುಕಟ್ಟೆ ವ್ಯವಹಾರಗಳಿಗೆ ತಲೆ ಹಾಕುವಂತಿಲ್ಲ ಎಂದು ನಿರ್ಬಂಧಿಸಿದೆ. ಇದು ಹೇಗೆ ಅಂದರೆ ಪೊಲೀಸ್ ಠಾಣೆ ಕಾಂಪೌಂಡ್ ಒಳಗೆ ಅಪರಾಧ ನಡೆದರೆ ಮಾತ್ರ ಪೊಲೀಸರು ಕ್ರಮ ಜರುಗಿಸಬಹುದೇ ಹೊರತು ಕಾಂಪೌಂಡ್ ಹೊರಗಡೆ ಏನೇ ನಡೆದರೂ ಪೊಲೀಸರಿಗೆ ಸಂಬಂದಿಸಿಲ್ಲ ಎಂಬಂತೆ ಈ ತಿದ್ದುಪಡಿ. ಇದು ರೈತ ಪರನಾ? ಎಪಿಎಂಸಿ ಒಳಗೆ ವಹಿವಾಟು ಆದರೆ ಸೆಸ್ಸು, ಟ್ಯಾಕ್ಸು. ಎಪಿಎಂಸಿ ಹೊರಗಿನ ವಹಿವಾಟಿಗೆ ಸೆಸ್ಸು ಇಲ್ಲ ಟ್ಯಾಕ್ಸು ಇಲ್ಲ. ಇದು ರೈತ ಪರನಾ? ಇದನ್ನು ಹೇಗೆ ನೀವು ಸಮರ್ಥಿಸಿಕೊಳ್ಳುತ್ತಿರಾ? ನಿಮಗೆ ನಾಚಿಕೆ ಆಗುವುದಿಲ್ಲವೇ?

ದಲ್ಲಾಳಿಗಳ ಬಗ್ಗೆ ನೀವು ಮಾತಾಡಿದ್ದೀರಾ ಎಪಿಎಂಸಿ ಯಲ್ಲಿ ಮಾತ್ರ ದಲ್ಲಾಳಿ ಇರುತ್ತಾರೆ ಎಂಬುದು ತಪ್ಪು ತಿಳಿವಳಿಕೆ. ನಿಮಗೆ ತಾಕತ್ತಿದ್ದರೆ ದಲ್ಲಾಳಿ ಇಲ್ಲದ ಒಂದೇ ಒಂದು ಖಾಸಗಿ ಮಾರುಕಟ್ಟೆ ತೋರಿಸಿ? ವಾಸ್ತವವಾಗಿ ಯಾವುದೇ ಎರಡು ಪಾರ್ಟಿಗಳ ನಡುವೆ ವ್ಯವಹಾರ ಕುದುರಿಸಲು ದಲ್ಲಾಳಿಗಳು ಬಂದೇ ಬರುತ್ತಾರೆ. ಏನಿದ್ದರೂ ಈ ದಲ್ಲಾಳಿಗಳನ್ನು ನಿಯಂತ್ರಿಸಬೇಕು ಅಷ್ಟೇ. ಆ ಕಾರಣಕ್ಕಾಗಿಯೇ ನಿಯಂತ್ರಿತ ಎಪಿಎಂಸಿ ಮಾರುಕಟ್ಟೆ ಗಳನ್ನು ರೈತ ಸ್ನೇಹಿಯಾಗಿ ಬಲಪಡಿಸಬೇಕು ಎಂದು ರೈತ ಚಳುವಳಿಗಳು ಆಗ್ರಹಿಸುತ್ತಿರುವುದು. ಆದರೆ ನೀವು ಮಾಡುತ್ತಿರುವುದು ಏನು? ನೆಗಡಿ ಆಯ್ತು ಅಂದರೆ ಮೂಗನ್ನೇ ಕತ್ತರಿಸುತ್ತಿದ್ದೀರಾ? ಇದು ಸರಿನಾ? ಕೇವಲ ಲಕ್ಷ ಅಥವಾ ಕೆಲವು ಕೋಟಿಗಳಷ್ಟು ವಹಿವಾಟು ಮಾಡುವ ದಲ್ಲಾಳಿಗಳನ್ನು ನಿಯಂತ್ರಿಸಲು ಸಾಧ್ಯವಾಗದ ತಮಗೆ ಅಥವಾ ತಮ್ಮ ಸರ್ಕಾರಕ್ಕೆ ಸಾವಿರ ಹಾಗೂ ಲಕ್ಷ ಕೋಟಿಗಳ ಹೊಸ ದಲ್ಲಾಳಿಗಳನ್ನು ಹೇಗೆ ನಿಯಂತ್ರಿಸುತ್ತೀರಾ? ನಿಮ್ಮ ಹತ್ತಿರ ಉತ್ತರ ಇದೆಯಾ?

ಕೊನೆಯದಾಗಿ ಕಾಯ್ದೆ ಕುರಿತು ಚರ್ಚೆಗೆ ಬನ್ನಿ ಎಂಬ ನಿಮ್ಮ ಮಾತು ನಿಮ್ಮ ಅಜ್ಞಾನವನ್ನು ಹಾಗೂ ಕಾಯ್ದೆ ಕುರಿತು ತಿಳುವಳಿಕೆ ಇರುವ ಎಲ್ಲರಿಗೂ ನಗು ತರಿಸುತ್ತದೆ. ದೆಹಲಿ ಗಡಿಗಳಲ್ಲಿ ಹಾಗೂ ಇಡೀ ದೇಶದಾದ್ಯಂತ ನಡೆಯುತ್ತಿರುವ ಹೋರಾಟದಲ್ಲಿ ಕಾಯ್ದೆ ಕುರಿತು ಚರ್ಚೆಗೆ ಬನ್ನಿ ಎಂದೇ ಆಗ್ರಹಿಸುತ್ತಿರುವುದು. ಆದರೆ ನರೇಂದ್ರ ಮೋದಿ–ಅಮಿತ್ ಷಾ ಚರ್ಚೆಗೆ ಬರದೇ ಸುಳ್ಳು ಹೇಳಿಕೊಂಡು ತಿರುಗುತ್ತಿದ್ದಾರೆ. ಡಿಸೆಂಬರ್ 2020 ರಿಂದ 22 ಜನವರಿ 2021 ವರೆಗೆ ರೈತ ಮುಖಂಡರ ಜೊತೆ ನಡೆದ ಹಲವು ಸುತ್ತಿನ ಮಾತುಕತೆಗಳಲ್ಲಿ ಏಕೆ ನಿಮ್ಮ ಸರ್ಕಾರ ವಿಷಯವಾರು ಚರ್ಚಿಸಲಿಲ್ಲ? ಏಕೆ ಅಜೆಂಡಾ ನಿಗದಿ ಮಾಡಲಿಲ್ಲ? ಏಕೆ ಮಾತುಕತೆ ವಿವರಗಳ ನಡಾವಳಿಯನ್ನು ಪ್ರಕಟಿಸಲಿಲ್ಲ?

ನಿಮ್ಮ ಸರ್ಕಾರ ಬಹುಮತದ ಅಹಂಕಾರದಿಂದ ಸಂಸತ್ತಿನಲ್ಲಿ ಚರ್ಚಿಸದೇ ಅಂಗೀಕರಿಸಿದೆ. ಸಂಸತ್ತಿನಲ್ಲಿ ನಿರಾಕರಿಸಿದ ಪ್ರತಿಯೊಂದು ಅಂಶಗಳನ್ನು ರೈತರು ದೆಹಲಿ ರೈತ ಹೋರಾಟದ ಮಾತುಕತೆಗಳಲ್ಲಿ ಎತ್ತಿದ್ದಾರೆ. ಆಗೆಲ್ಲಾ ನಿರುತ್ತರವಾಗಿ ಪ್ರತಿಯೊಂದು ಆಕ್ಷೇಪಣೆಗೂ ತಲೆ ತಗ್ಗಿಸಿ ನಿಂತುಕೊಂಡು ಈಗ ಚರ್ಚೆಗೆ ಕರೀತೀರಾ? ನಾಚಿಕೆ ಆಗುವುದಿಲ್ಲವೇ?

ಕಳೆದ ವರ್ಷ ಫ್ರೀಡಂ ಪಾರ್ಕ್ ನ ಪ್ರತಿಭಟನೆ ಸಂದರ್ಭದಲ್ಲಿ ಕೂಡ ನೀವೇ ಇದ್ದ ಸರ್ಕಾರ ಮಾತುಕತೆ ಗೆ ಕರೆದಿತ್ತು. ಆಗ ಭಾಗವಹಿಸಿದ್ದ ರೈತ ಮುಖಂಡರೆಲ್ಲರೂ ಈ ಕಾಯ್ದೆಗಳ ಜನ ವಿರೋಧಿತನವನ್ನು ಬೊಟ್ಟು ಮಾಡಿ ತೋರಿದಾಗ ಈ ಬಗ್ಗೆ ಮಾತಾಡದೆ 'ನಮ್ಮನ್ನು ನಂಬಿ, ನಾವು ರೈತ ಪರ ಇದ್ದೇವೆ' ಎಂದು ಅವಲತ್ತುಕೊಂಡಿರಿ? ಈಗ ಚರ್ಚೆಗೆ ಬನ್ನಿ ಅಂತ ಕರೀತೀರಾ? ತಾಕತ್ತಿದ್ದರೆ ಕಾಯ್ದೆ ರದ್ದುಪಡಿಸಿ ಚರ್ಚೆಗೆ ಬನ್ನಿ, ರೈತರನ್ನು ರೈತ ಚಳವಳಿಯನ್ನು ಅವಮಾನಿಸಿ ನಿಂದಿಸಿದರೆ ನಿಮಗೆ ಮೋದಿ–ಷಾ ಹತ್ರ ಭಟ್ಟಂಗಿತನ ಸಿಗುಬಹುದೇ ಹೊರತು ರೈತರ ಗೌರವ ಸಿಗಲ್ಲ. ಮುಂದೆ ನೀವು ಜನರ ಬಳಿ ಹೋಗುವಾಗ ಇತಿಹಾಸದ ಕಸದ ಬುಟ್ಟಿಗೆ ಸೇರ್ತೀರಾ. ರೈತರು ಈ ದೇಶದ ಅನ್ನದಾತರು. ಅವರನ್ನು ಅವಮಾನಿಸಿದರೆ ನಿಮಗೆ ತಕ್ಕ ಶಾಸ್ತಿ ಆಗುತ್ತದೆ ಎಂಬುದನ್ನು ಬಸವರಾಜ ಬೊಮ್ಮಾಯಿ, ನಾರಾಯಣಗೌಡ, ಸಿಟಿ ರವಿ, ಮುನಿಸ್ವಾಮಿ ಅರಿತುಕೊಳ್ಳಬೇಕು. ●





ತಿರೂರು ರೈಲು ನಿಲ್ದಾಣದಲ್ಲಿ ಚಿತ್ರಿಸಿದ್ದ 'ವ್ಯಾಗನ್ ದುರಂತ'ದ ಚಿತ್ರ

ಮಲಬಾರ್ ಬಂಡಾಯ-1921

ವಸಾಹತುಶಾಹಿ ಮತ್ತು ಭೂಮಾಲಿಕರ ವಿರುದ್ಧದ ಹೋರಾಟ

ಆರ್‌ಎಸ್‌ಎಸ್ ತನ್ನ ಇತಿಹಾಸವನ್ನು ಹಸಿಸುಳ್ಳುಗಳು ಮತ್ತು ಅರ್ಧ ಸತ್ಯಗಳ ಮೇಲೆ ಕಟ್ಟಿ, ಸದಾ ಕುಯುಕ್ತಿ,, ಕಾಲ್ಪನಿಕತೆಮತ್ತು ಕಪಟದಿಂದ ಅಲಂಕರಿಸಿದೆ, ಇದನ್ನು 'ಸಾಂಸ್ಕೃತಿಕ ರಾಷ್ಟ್ರೀಯತೆ' ಎನ್ನುತ್ತ ರಾಷ್ಟ್ರದ ಬಗ್ಗೆ ತಮ್ಮದೇ ಆದ ಪರಿಕಲ್ಪನೆಗಳನ್ನು ಹೊಸೆಯಲು ಮತ್ತು ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡಲು ಹಾಗೂ ಆರ್‌ಎಸ್‌ಎಸ್ ವಿರೋಧಿಗಳನ್ನು ರಾಷ್ಟ್ರವಿರೋಧಿಗಳು ಎಂದು ಟೀಕಿಸಲು ಅವನ್ನು ಬಳಸುತ್ತಿದೆ. ಮತ್ತು ಐಸಿಎಚ್‌ಆರ್ ನಂತಹ ಸಂಸ್ಥೆಗಳನ್ನು ಆರ್‌ಎಸ್‌ಎಸ್ ಮುಸ್ಲಿಂ ವಿರೋಧಿ ಪ್ರಚಾರಕ್ಕೆ ಮೇವು ಒದಗಿಸುವಂತೆ ಮಾರ್ಪಡಿಸಲಾಗಿದೆ. ಮಲಬಾರ್ ಬಂಡಾಯಗಾರರನ್ನು ಕುರಿತಂತೆ ಐಸಿಎಚ್‌ಆರ್ ನ ಇತ್ತೀಚಿನ ನಡೆಯನ್ನು ವೈಜ್ಞಾನಿಕ ಇತಿಹಾಸಲೇಖನಶಾಸ್ತ್ರದ ಮೇಲೆ ಆರ್‌ಎಸ್‌ಎಸ್ ಆಕ್ರಮಣದ ಮುಂದುವರಿಕೆಯಾಗಿ ನೋಡಬೇಕು.

ಕೆ.ಎನ್. ಗಣೇಶ್ ಅನು: ಸಿ.ಆರ್. ಶಾನಭಾಗ

ಹುತಾತ್ಮರ ನಿಘಂಟಿನ ಐದನೇ ಸಂಪುಟವನ್ನು ಪರಿಶೀಲಿಸಲು ಭಾರತೀಯ ಐತಿಹಾಸಿಕ ಸಂಶೋಧನಾ ಮಂಡಳಿಯು(ಐಸಿಎಚ್‌ಆರ್) ರಚಿಸಿದ ತ್ರಿಸದಸ್ಯ ಸಮಿತಿಯ ಶಿಫಾರಸು, ಭಾರತೀಯ ಸ್ವಾತಂತ್ರ್ಯ ಹೋರಾಟ (1857–1947) ಹುತಾತ್ಮರ ನಿಘಂಟಿನಿಂದ 387 ನಮೂದುಗಳನ್ನು ತೆಗೆದುಹಾಕಲು ಸೂಚಿಸಿದ್ದು ವಿವಾದವನ್ನು ಹುಟ್ಟುಹಾಕಿದೆ. 1921 ರ ಮಲಬಾರ್ ಬಂಡಾಯವನ್ನು ಹತ್ತಿಕ್ಕಲು ಬ್ರಿಟಿಷ್ ಆಡಳಿತವು ಗಲ್ಲಿಗೇರಿಸಿದವರ ಹೆಸರುಗಳು ಈ ಪಟ್ಟಿಯಲ್ಲಿವೆ. ಆರೆಸ್ಸೆಸ್ ಪತ್ರಿಕೆಯಾದ ಆರ್ಗನೈಸರ್ ಸಂಪೂರ್ಣ ಸಂಚಿಕೆಯೊಂದನ್ನು ಮಲಬಾರ್ ಬಂಡಾಯದ ಶತಮಾನೋತ್ಸವವನ್ನು ತಮ್ಮ ಇಸ್ಲಾಮಿಕ್ ವಿರೋಧಿ ಪ್ರಚಾರಕ್ಕೆ ನೆಪವಾಗಿ ಬಳಸುವುದಕ್ಕಾಗಿ ಮೀಸಲಿಟ್ಟಿದೆ.

ಕೇರಳ ರಾಜ್ಯದ ಹೊರಗಿನವರಿಗೆ ಐಸಿಎಚ್‌ಆರ್ ನ ಈ ನಡೆಯ ಮಹತ್ವ ತಿಳಿಯದಿರುವ ಸಾಧ್ಯತೆಯಿದೆ ಏಕೆಂದರೆ ಮಲಬಾರ್ ಬಂಡಾಯದ ನಿಜವಾದ ನಡೆ ಅವರಿಗೆ ಪರಿಚಯವಿಲ್ಲದಿರಬಹುದು. ಪ್ರಮಾಣಿತ ಇತಿಹಾಸದ ಪಠ್ಯಪುಸ್ತಕಗಳಲ್ಲಿ ಕೂಡ 'ಮೊಪ್ಲಾಗಳ' ದಂಗೆಯನ್ನು ಸಂಕ್ಷಿಪ್ತವಾಗಿ ನಮೂದಿಸುತ್ತಾರೆ. ಮತ್ತು ಅದನ್ನು ಒಂದು ಸಂಕುಚಿತ ಮತೀಯ ದಂಗೆಯೆಂಬಂತೆ ಉಲ್ಲೇಖಿಸುತ್ತಾರೆ. ಆದ್ದರಿಂದ ನಾವು ಐಸಿಎಚ್‌ಆರ್ ನಡೆಯ ಹಿಂದಿರುವ ರಾಜಕೀಯವನ್ನು ಅರಿತು ಕೊಳ್ಳುವ ಮೊದಲು ಈ ಬಂಡಾಯದ ಘಟನೆಗಳ ಸಂಕ್ಷಿಪ್ತ ವಿವರವನ್ನು ಒದಗಿಸುವುದು ಅಗತ್ಯವೆಂದು ತೋರುತ್ತದೆ.

ದಂಗೆಯ ಹಿನ್ನೆಲೆ:

ಉತ್ತರ ಕೇರಳದಲ್ಲಿ ಅಸ್ತಿತ್ವದಲ್ಲಿದ್ದ ಅನೇಕ ಮಧ್ಯಕಾಲೀನ ಪ್ರಭುತ್ವಗಳಿಂದ ಮಲಬಾರ್ ಜಿಲ್ಲೆಯು 1792 ರಲ್ಲಿ ರೂಪುಗೊಂಡಿತು. ಕೋಝಿಕೋಡ್ ನಗರವು ಇದರ ಪ್ರಧಾನ ಕೇಂದ್ರವಾಗಿತ್ತು, ಮತ್ತು ಮಲಬಾರಿನ ಉತ್ತರ ಭಾಗದ ಆಡಳಿತವನ್ನು ತಲಶೇರಿಯಿಂದ, ದಕ್ಷಿಣ ಭಾಗದ್ದನ್ನು ಚೆರ್ಪುಲಶೇರಿಯಿಂದ ನಿರ್ವಹಿಸಲಾಗುತ್ತಿತ್ತು. ನಂತರ, ಕಂದಾಯ ಕಚೇರಿಯನ್ನು ತಿರುರಂಗಡಿಯಲ್ಲಿ ಸ್ಥಾಪಿಸಲಾಯಿತು. ಮಲಬಾರಿನ ದಕ್ಷಿಣ ಭಾಗವು ಎರನಾಡ್, ವಲ್ಲುವನಾಡ್ ಮತ್ತು ಪೊನ್ನಾನಿ ತಾಲ್ಲೂಕುಗಳನ್ನು ಒಳಗೊಂಡಿತ್ತು. ಮಲಬಾರ್ ದಂಗೆಯ ಬಹುಪಾಲು ಘಟನೆಗಳು ಎರನಾಡ್ ತಾಲೂಕಿನಲ್ಲಿ ನಡೆದವು, ಕೆಲವು ಪೊನ್ನಾನಿ ಮತ್ತು ವಳ್ಳುವನಾಡ್‌ಗಳಲ್ಲೂ ಸಹ.

ಬ್ರಿಟಿಷರ ಆಕ್ರಮಣಕ್ಕೆ ಮುಂಚಿತವಾಗಿ, ಎರನಾಡಿನ ವಿಶಾಲವಾದ ಭಾಗಗಳನ್ನು ಝಮೊರಿನ್ ರಾಜಮನೆತನವು ನಿಯಂತ್ರಿಸುತ್ತಿತ್ತು, ಅವರು ಬ್ರಿಟಿಷರ ಅಡಿಯಲ್ಲಿ ಪ್ರಮುಖ ಭೂಮಾಲೀಕರಾಗಿ ಬದಲಾದರು. ನೀಲಂಬೂರಿನ ಮನೆತನ ಮತ್ತು ಇತರ ಕೆಲವು ಬ್ರಾಹ್ಮಣ ಮನೆಗಳು ಸೇರಿದಂತೆ ಇತರ ಭೂಮಾಲೀಕರು ಇದ್ದರು. ಝಮೊರಿನ್‌ಗಳ ಸೈನ್ಯ ಮತ್ತು ಕಂದಾಯ ಸಂಗ್ರಾಹಕರಾಗಿದ್ದ ಹಲವಾರು ನಾಯರ್ ಮನೆತನಗಳು ಬ್ರಿಟಿಷರ ಅಡಿಯಲ್ಲಿ ಭೂಮಾಲೀಕ ಅಥವಾ ಜೆನ್ಮಿ ಸ್ಥಾನಮಾನವನ್ನು ಪಡೆದವು. ಈ ಪ್ರದೇಶದ ಮೂಲ ಕೃಷಿಕರು ಗುಲಾಮ ದಲಿತ ಮತ್ತು ಹಿಂದುಳಿದ ಜಾತಿಗಳಿಗೆ ಸೇರಿದ್ದವರು. ಹದಿನಾರನೇ ಶತಮಾನದಿಂದ, ಕರಾವಳಿ ಪ್ರದೇಶದಿಂದ ಕ್ರಮೇಣವಾಗಿ ಮುಸ್ಲಿಮರು ಈ ಪ್ರದೇಶಕ್ಕೆ ವಲಸೆ ಬಂದರು. ಮುಸ್ಲಿಮರು ಮೂಲತಃ ವ್ಯಾಪಾರಿಗಳು ಮತ್ತು ಸಣ್ಣ ರೈತರಾಗಿ ಕಾಣಿಸಿಕೊಂಡರು, ಆದರೆ ಅವರ ವಲಸೆಗಳು ಹೆಚ್ಚಾದಂತೆ, ಅವರು ಆಗಿದ್ದ ಭೂಮಾಲೀಕ–ಗೇಣಿದಾರರ ಸಂಬಂಧಗಳಲ್ಲಿ, ಗೇಣಿ ಸಾಗುವಳಿದಾರರಾದರು.

ಅರೇಬಿಯನ್ ಸಮುದ್ರದಲ್ಲಿ ಯುರೋಪಿಯನ್ ವ್ಯಾಪಾರಿಗಳ ಚಟುವಟಿಕೆಯಿಂದಾಗಿ, ಅತ್ಯಂತ ಸಕ್ರಿಯ ವ್ಯಾಪಾರಿಗಳು, ನಾವಿಕರು ಮತ್ತು ಮಧ್ಯವರ್ತಿಗಳಾಗಿದ್ದ (ಮಾಪ್ಪಿಳ ಎಂಬ ಪದವು ಅವರ ಮಧ್ಯವರ್ತಿ ಸ್ಥಾನಮಾನವನ್ನು ಸೂಚಿಸುತ್ತದೆ)ಮುಸ್ಲಿಮರು ಒಳನಾಡುಗಳತ್ತ ವಲಸೆ ಹೋಗುವಂತಾಯಿತು. ಫ್ರೆಂಚ್ ಬಂದರು ಮಾಹೆಯನ್ನು ಹೊರತುಪಡಿಸಿ ಮಲಬಾರ್ ಕರಾವಳಿಯ ಸಂಪೂರ್ಣ ಭಾಗ ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿಯ ನಿಯಂತ್ರಣಕ್ಕೆ ಒಳಪಟ್ಟಿತು. ಮುಸ್ಲಿಂ ವ್ಯಾಪಾರಿಗಳು ಕಂಪನಿಯ ಮಧ್ಯವರ್ತಿಗಳ ಸ್ಥಿತಿಗೆ ಇಳಿದರು ಮತ್ತು ಅವರನ್ನು ಅವಲಂಬಿಸಿದವರು ಒಳನಾಡಿಗೆ ವಲಸೆ ಹೋಗಬೇಕಾಯಿತು. ಇದು ಅವರಲ್ಲಿ ಬ್ರಿಟಿಷ್ ವಿರೋಧಿ ಭಾವನೆಗಳ ಬೆಳವಣಿಗೆಗೆ ಕಾರಣವಾಯಿತು. ಮಲಬಾರಿನಲ್ಲಿ ಬ್ರಿಟಿಷರ ವಿರುದ್ಧ ನಡೆದ ಯುದ್ಧಗಳಲ್ಲಿ ಮಲಬಾರಿನ ಮಾಪಿಳ್ಳರು ಟಿಪ್ಪು ಸುಲ್ತಾನನ ಸೈನ್ಯದೊಂದಿಗೆ ಸೇರಿ ಹೋರಾಡಿದರು. ಬ್ರಿಟಿಷರ ಆಕ್ರಮಣದ ನಂತರ ಅವರು ಬ್ರಿಟಿಷರ ವಿರುದ್ಧ ಪಝಾಸ್ಸಿ ದಂಗೆಯ (1802–1806) ಸಕ್ರಿಯ ಬೆಂಬಲಿಗರಾಗಿದ್ದರು.

ಬ್ರಿಟಿಷರ ಭೂ–ಕಂದಾಯ ವ್ಯವಸ್ಥೆ ಹಿಂದಿನ ಭೂಮಾಲೀಕರು, ರಾಜಮನೆತನಗಳು, ಬ್ರಾಹ್ಮಣರು ಮತ್ತು ಅವರ ಹಿಂಬಾಲಕರಿಗೆ ಲಾಭದಾಯಕವಾಗಿತ್ತು. ಕಂದಾಯ ಪಾವತಿಸುವ ರೈತರಿಗೆ ಮೊದಲಿನ ಭೂಮಾಲೀಕ–ಗೇಣಿದಾರ ಸಂಬಂಧಕ್ಕೆ ತೊಂದರೆಯಾಗಲಿಲ್ಲ. ಆದರೆ ಭೂಮಾಲೀಕರು ತಮ್ಮ ಕಂದಾಯ ಹೊರೆಯನ್ನು ಸ್ವ–ಇಚ್ಛೆಯಂತೆ ಗೇಣಿದಾರ ಸ್ಥಾನಕ್ಕೆ ಇಳಿದ ತಮ್ಮ ಗೇಣಿದಾರರಿಗೆ ವರ್ಗಾಯಿಸಲು ಅವಕಾಶ ಮಾಡಿಕೊಟ್ಟಿತು. ಗೇಣಿಯನ್ನು ನಿರಂಕುಶವಾಗಿ ಹೆಚ್ಚಿಸಲಾಯಿತು ಮತ್ತು ಗೇಣಿದಾರರನ್ನು ಲಂಗುಲಗಾಮಿಲ್ಲದೆ ಒಕ್ಕಲೆಬ್ಬಿಸುವುದು ಆರಂಭವಾಯಿತು. ಒಳಪ್ರದೇಶಗಳ ಮಾರುಕಟ್ಟೆಗಳಲ್ಲಿ ಕೆಲಸ ಮಾಡುವ ವ್ಯಾಪಾರಿಗಳು ಭಾರೀ ಸುಂಕಕ್ಕೆ ಒಳಗಾದರು. ಇವೆಲ್ಲವೂ ಗೇಣಿದಾರರು, ಸ್ಥಳೀಯ ವ್ಯಾಪಾರಿಗಳು ಮತ್ತು ಮಧ್ಯವರ್ತಿಗಳ ಸ್ಥಿತಿಯನ್ನು ಹದಗೆಡಿಸಿತು. ಇದು ಗೇಣಿದಾರರು, ಸಣ್ಣ ರೈತರು ಮತ್ತು ವ್ಯಾಪಾರಿಗಳಲ್ಲಿ ಬ್ರಿಟಿಷರು ಮತ್ತು ಭೂಮಾಲೀಕ ವರ್ಗಗಳ ವಿರುದ್ಧದ ವೈಷಮ್ಯವನ್ನು ಹೆಚ್ಚಿಸಿತು, ಇದು ಹತ್ತೊಂಬತ್ತನೆಯ ಶತಮಾನದಲ್ಲಿ ಹಲವಾರು ದಂಗೆಗಳಲ್ಲಿ ಸ್ಫೋಟಗೊಂಡಿತು.

ಈ ದಂಗೆಗಳು ಬಿಡಿಬಿಡಿಯಾಗಿದ್ದವು ಮತ್ತು ಸ್ಥಳೀಯ ಸಮಸ್ಯೆಗಳು ಮತ್ತು ಪ್ರಕರಣಗಳ ಆಧಾರದ ಮೇಲೆ ಆಗಿರುವುದು ಕಂಡುಬರುತ್ತದೆ. ಒಂದೆಡೆ ಸ್ಥಳೀಯ ಭೂಮಾಲೀಕರು ಮತ್ತು ಅವರ ಹಿಂಬಾಲಕರು ಮತ್ತು ಮತ್ತೊಂದೆಡೆ ಗೇಣಿ ಸಾಗುವಳಿದಾರರು, ಸಣ್ಣ ರೈತರು ಮತ್ತು ಸ್ಥಳೀಯ ವ್ಯಾಪಾರಿಗಳ ನಡುವೆ ಸಂಘರ್ಷಗಳು ಇದ್ದವು. ಬಹುಪಾಲು ಬಂಡುಕೋರರು ಮಾಪ್ಪಿಳಾಗಳು ಮತ್ತು ಇತರ ಗುಂಪುಗಳು ಕೂಡ ಭಾಗವಹಿಸಿರುವ ಕೆಲವು ಪುರಾವೆಗಳಿವೆ. ಒಂದು ದಂಗೆ ಮತ್ತು ಇನ್ನೊಂದರ ನಡುವೆ ಸಾಮಾನ್ಯವಾಗಿ ಸಂಪರ್ಕವಿರುತ್ತಿರಲಿಲ್ಲ. ಬ್ರಿಟಿಷ್ ಆಡಳಿತಗಾರರು ಧಾರ್ಮಿಕ ಮುಖಂಡರು ಅಥವಾ ಸಯ್ಯಿದ್‌ಗಳು ದಂಗೆಗಳಿಗೆ ಕಾರಣವೆಂದು ಹೇಳಿದ್ದರು ಮತ್ತು 1852 ರಲ್ಲಿ ಮಲಬಾರಿನಿಂದ ಸಯ್ಯಿದ್‌ಗಳಲ್ಲಿ ಅತ್ಯಂತ ಪ್ರಭಾವಶಾಲಿಯಾಗಿದ್ದ, ಸಯ್ಯಿದ್ ಫಸಲ್ ಅವರನ್ನು ಗಡೀಪಾರು ಮಾಡಿದರು. ಇದು ಬ್ರಿಟಿಷರ ವಿರುದ್ಧ ಮಾಪ್ಪಿಳ ಮುಸ್ಲಿಮರ ವಿರೋಧವನ್ನು ಹೆಚ್ಚಿಸಿತು ಮತ್ತು ಮಲಬಾರ್‌ನ ಕಲೆಕ್ಟರ್ ಥಾಮಸ್ ಕೊನೊಲಿ ಕೊಲೆಗೆ ಕಾರಣವಾಯಿತು. ಇಡೀ ದಕ್ಷಿಣ ಮಲಬಾರ್‌ನಲ್ಲಿ ದಬ್ಬಾಳಿಕೆಯ ಮೂಲಕ ದಂಗೆಗಳನ್ನು ನಿಗ್ರಹಿಸಲಾಯಿತು. ಮಲಬಾರ್ ವಿಶೇಷ ಪೊಲೀಸ್ ಪಡೆಯನ್ನು ಈ ಉದ್ದೇಶಕ್ಕಾಗಿಯೇ ರಚಿಸಲಾಯಿತು.

ಇಪ್ಪತ್ತನೇ ಶತಮಾನದ ಆರಂಭದ ವರ್ಷಗಳಲ್ಲಿ ದಕ್ಷಿಣ ಮಲಬಾರಿನಲ್ಲಿ ಜೀವನ ಪರಿಸ್ಥಿತಿಗಳು ಮತ್ತಷ್ಟು ಹದಗೆಟ್ಟವು. ಮೊದಲ ಜಾಗತಿಕ ಯುದ್ಧದ ಸಮಯದಲ್ಲಿ 'ಯುದ್ಧದ ಆರ್ಥಿಕತೆ' ಆರಂಭವಾದಾಗ, ಬೆಲೆಗಳು ಏರಿದವು, ಬರಗಾಲದ ಪರಿಸ್ಥಿತಿಗಳು ಸಂಭವಿಸಿದವು. ಜನರು 'ಗಡ್ಡೆ–ಗೆಣಸು ಮತ್ತು ಹುಲ್ಲು' ಮೇಲೆ ಬದುಕ ಬೇಕಾಗಿ ಬಂದ ಅವಧಿಯನ್ನು ನೆನಪಿಸಿಕೊಳ್ಳುತ್ತಾರೆ ಮತ್ತು ಯಾವುದೇ ಕಡೆಯಿಂದ ಯಾವುದೇ ಪರಿಹಾರವು ಸಿಗಲಿಲ್ಲ. ರಾಷ್ಟ್ರೀಯ ಚಳುವಳಿಗೆ ಬೆಂಬಲವು ನಿರ್ದಿಷ್ಟವಾಗಿ ಗೇಣಿ ಕೃಷಿಕರಲ್ಲಿ ಹೆಚ್ಚಾಯಿತು 1919 ರಲ್ಲಿ ಮಂಜೇರಿಯಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಸಮ್ಮೇಳನ–ಸಭೆಗಳಲ್ಲಿ ಜನರು ಎದುರಿಸುತ್ತಿದ್ದ ಪ್ರಾಥಮಿಕ ಸಮಸ್ಯೆಯಾಗಿ ಗೇಣಿದಾರರ ಪ್ರಶ್ನೆಯನ್ನು ಎತ್ತಲು ಪ್ರಯತ್ನಿಸಲಾಯಿತು. ಮೊದಲ ವಿಶ್ವ ಯುದ್ಧದಲ್ಲಿ ಟರ್ಕಿಯ ಭಾಗವಹಿಸುವಿಕೆ, ಬ್ರಿಟನ್ ಮತ್ತು ಅವರ ಮಿತ್ರರಾಷ್ಟ್ರಗಳ ಸೋಲು ದೇಶಕ್ಕೆ ಸ್ವಾತಂತ್ರ್ಯವನ್ನು ಒದಗಿಸುವ ಪ್ರಕ್ರಿಯೆಯನ್ನು ಮತ್ತಷ್ಟು ತ್ವರಿತಗೊಳಿಸುತ್ತದೆ ಎಂದು ಮುಸ್ಲಿಂ ಬುದ್ಧಿಜೀವಿಗಳು ಭಾವಿಸಿದ್ದರು. ಮಿತ್ರಪಕ್ಷಗಳು ಯುದ್ಧವನ್ನು ಗೆದ್ದಾಗ ಅವರ ನಿರೀಕ್ಷೆಗಳು ಹುಸಿಯಾದವು, ಮತ್ತು 1920 ರ ಸಮಯದಲ್ಲಿ ಒಟ್ಟೋಮನ್ ಸಾಮ್ರಾಜ್ಯವನ್ನು ಮತ್ತು ಖಲೀಫಾ ಪಾತ್ರವನ್ನು ಕಿತ್ತುಹಾಕುವ ಮೂಲಕ ಟರ್ಕಿಯ ಮೇಲೆ ಸೆವ್ರೆಸ್ ಒಪ್ಪಂದವನ್ನು ಹೇರಲಾಯಿತು.

ಬಂಡಾಯ:

ಮಲಬಾರ್ ಬಂಡಾಯದ ಐತಿಹಾಸಿಕ ಸನ್ನಿವೇಶವು ಬ್ರಿಟಿಷರು ಮತ್ತು ದಕ್ಷಿಣ ಮಲಬಾರಿನ ರೈತರ (ಅವರಲ್ಲಿ ಹೆಚ್ಚಿನವರು ಮಾಪ್ಪಿಳ ಮುಸ್ಲಿಮರು) ನಡುವೆ ವೈಷಮ್ಯದ ಬೆಳವಣಿಗೆಗೆ ಸಾಕಷ್ಟು ಸನ್ನಿವೇಶಗಳಿದ್ದವು ಎಂದು ತೋರಿಸುತ್ತದೆ. ಭೂಮಾಲೀಕರು ಮತ್ತು ಗೇಣಿದಾರರ ನಡುವಿನ ವೈರುಧ್ಯಗಳು ಪ್ರಮುಖವಾಗಿದ್ದವು, ಮತ್ತು ಇದರಲ್ಲಿ ಧಾರ್ಮಿಕ ಐಡೆಂಟಿಟಿಗಳು ತುಲನಾತ್ಮಕವಾಗಿ ಸಣ್ಣ ಪಾತ್ರವನ್ನು ವಹಿಸಿದ್ದವು. 18 ನೇ ಶತಮಾನದಲ್ಲಿ ಒಂದು ಘಟನೆಯಲ್ಲಿ ಮಾತ್ರ ದೇಗುಲಗಳನ್ನು ಅಪವಿತ್ರಗೊಳಿಸುವುದು ನಡೆಯಿತು, ಮತ್ತು 19 ನೇ ಶತಮಾನದಲ್ಲಿ ನಡೆದ ಒಂದು ಘಟನೆಯಲ್ಲಿ ಮತಾಂತರೆ ಕಾರಣವಾಗಿತ್ತು. ಇತರ ಎಲ್ಲಾ ಸಂಘರ್ಷಗಳು ವಸಾಹತುಶಾಹಿ ಅಥವಾ ಭೂಮಾಲೀಕರ ದಬ್ಬಾಳಿಕೆಗೆ ನೇರವಾಗಿ ಸಂಬಂಧಿಸಿವೆ. ಮಾಪ್ಪಿಳ ಮುಸ್ಲಿಮರಲ್ಲಿ ಬ್ರಿಟಿಷ್ ವಿರೋಧಿ ಭಾವನೆ ಕೂಡ ಮೊದಲಿನಿಂದಲೂ ಕಾಣಿಸುತ್ತಿತ್ತು. ಮ್ಯಾಪಿಳಾಗಳ 'ಧಾರ್ಮಿಕ ಹುರುಪಿ'ಗೆ ಕೊಡುಗೆ ನೀಡಿತು ಎನ್ನಲಾದ ಖಿಲಾಫತ್ ಇವರ ನಡುವೆ ಬಂದದ್ದು 1916 ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನ ಲಕ್ನೋ ಒಪ್ಪಂದದ ನಂತರವೇ. ವಿಶ್ವ ಯುದ್ಧದ ನಂತರವೇ ಇದು ಈ ಪ್ರದೇಶದಲ್ಲಿ ವೇಗವನ್ನು ಪಡೆಯಿತು. ಸ್ವಾತಂತ್ರ್ಯ ಹೋರಾಟಕ್ಕೆ, ಮುಸ್ಲಿಂ ಬುದ್ಧಿಜೀವಿಗಳ ಒಂದು ವಿಭಾಗವು ಬೆಂಬಲವನ್ನು ವ್ಯಕ್ತಪಡಿಸಿತು. ಕೈರೊದಲ್ಲಿ ಶಿಕ್ಷಣ ಪಡೆದು ಲಕ್ಷದ್ವೀಪದ ಕವರಟ್ಟಿಯಲ್ಲಿ ಸೇವೆ ಸಲ್ಲಿಸಿದ ಅಲಿ ಮುಸಲಿಯಾರ್ ಅವರ ಪ್ರಕರಣವು ತಿರುರಂಗಡಿ ಮಸೀದಿಯ ಖತೀಬರಾಗಿ ಅಧಿಕಾರ ವಹಿಸಿಕೊಳ್ಳುವ ಮೊದಲಿನ ಒಂದು ಉದಾಹರಣೆಯಾಗಿದೆ. ಬಂಡಾಯ ಭುಗಿಲೆದ್ದಾಗ ಅಲಿ ಮುಸಲಿಯಾರ್ ಕಟ್ಟಾ ಗಾಂಧಿವಾದಿ ಮತ್ತು ಕಾಂಗ್ರೆಸ್ ಮತ್ತು ಖಿಲಾಫತ್ ಬೆಂಬಲಿಗರಾಗಿದ್ದರು.

ಬಂಡಾಯದ ದಿನವಹಿ ವಿವರಣೆಯನ್ನು ಇಲ್ಲಿ ಒದಗಿಸುವುದು ಅವಶ್ಯವಿಲ್ಲ. ಆಗಸ್ಟ್ ನಲ್ಲಿ ಬಂಡಾಯ ಆರಂಭವಾಯಿತು, ಖಿಲಾಫತ್ ಕಾರ್ಯಕರ್ತನೊಬ್ಬನನ್ನು, ಭೂಮಾಲಿಕರಲ್ಲಿ ಒಬ್ಬನಾದ ನೀಲಂಬೂರ್ ರಾಜ ಇಟ್ಟುಕೊಂಡಿದ್ದ ಖಡ್ಗವನ್ನು ಕಳ್ಳತನ ಮಾಡಿದ ಸುಳ್ಳು ಆರೋಪದ ಮೇಲೆ ಬಂಧಿಸಲಾಯಿತು. ಅಲಿ ಮುಸಲಿಯಾರನ್ನು ಬಂಧಿಸುವ ಪ್ರಯತ್ನದಲ್ಲಿ ಪೊಲೀಸರು ಮಸೀದಿಯ ಮೇಲೆ ದಾಳಿ ನಡೆಸಿದ್ದಾರೆ ಎಂಬ ವದಂತಿಗಳು ಹರಡಿದಾಗ ದಂಗೆಯು ಹತ್ತಿರದ ತಿರುರಂಗಡಿಗೂ ಹರಡಿತು. ಪೋಲೀಸರು ಹತ್ತಿರದ ಎಲ್ಲಾ ಗ್ರಾಮಗಳಿಂದ ಬೃಹತ್ ಜನಸಮೂಹವನ್ನು ಎದುರಿಸಬೇಕಾಯಿತು, ಅವು ಪೋಲೀಸರ ಗುಂಡಿಗೂ ಹೆದರಲಿಲ್ಲ, ಚದುರಿಹೋಗಲಿಲ್ಲ. ಪೂಕ್ಕೊತ್ತೂರು ಮತ್ತು ತಿರುರಂಗಡಿಗಳಲ್ಲಿನ 'ಕದನ'ಗಳ ಸುದ್ದಿ ದಕ್ಷಿಣ ಮಲಬಾರ್‌ನಾದ್ಯಂತ ಹರಡಿತು ಮತ್ತು ಶೀಘ್ರದಲ್ಲೇ ಮಲಪ್ಪುರಂ, ಪೆರಿಂತಾಲ್ಮಣ್ಣ, ಪಂಡಿಕ್ಕಾಡ್ ಮತ್ತು ಇತರ ಪ್ರದೇಶಗಳಲ್ಲಿ ದಂಗೆಗಳು ಆರಂಭವಾದವು. ವರಿಯಂಕುನಾಥ ಕುಂಜಹಮ್ಮದ್ ಹಾಜಿ, ಚೆಂಬ್ರಶೇರಿ ತಂಗಲ್, ಸೀತಿಕ್ಕೋಯ ತಂಗಲ್, ಕುಂಜಿಕಾದರ್ ವಿವಿಧ ಹಂತಗಳಲ್ಲಿ ಬಂಡಾಯದ ನಾಯಕರಾದರು. ರಸ್ತೆಗಳಲ್ಲಿ ತಡೆಒಡ್ಡಲಾಯಿತು, ದೂರವಾಣಿ ಸಂಪರ್ಕ ಕಡಿತಗೊಳಿಸಲಾಯಿತು, ಮತ್ತು ತಿರುರಂಗಡಿಯಲ್ಲಿದ್ದ ಅಕೌಂಟ್ಸ್ ಕಚೇರಿಗೆ ಬೆಂಕಿ ಹಚ್ಚಲಾಯಿತು. ಬ್ರಿಟಿಷ್ ಆಡಳಿತವು ಮಾರ್ಷಲ್ ಲಾ ಅನ್ನು ಹೇರಿತು, ಕಾಂಗ್ರೆಸ್ ಮತ್ತು ಖಿಲಾಫತ್ ಕಾರ್ಯಕರ್ತರು ಸೇರಿದಂತೆ ಎಲ್ಲ ಹೊರಗಿನವರಿಗೆ ಎರನಾಡ್ ತಾಲ್ಲೂಕ ಪ್ರವೇಶವನ್ನು ನಿಷೇಧಿಸಲಾಯಿತು. ಬಂಡಾಯಗಾರರು ಪ್ರತ್ಯೇಕ ಪ್ರದೇಶಗಳನ್ನು ಖಿಲಾಫತ್ ಎಂದು ಘೋಷಿಸುವ ಮೂಲಕ ಪ್ರತಿಕ್ರಿಯಿಸಿದರು, ಪ್ರತಿ ಖಿಲಾಫತ್ ಅನ್ನು ಒಬ್ಬ ಖಿಲಾಫತ್ ನಾಯಕನ ಉಸ್ತುವಾರಿಗೆ ಒಳಪಡಿಸಲಾಯಿತು. ಬ್ರಿಟಿಶರು ವಿವಿಧ ಭಾಗಗಳಿಂದ ಮಿಲಿಟರಿ ಪಡೆಗಳನ್ನು ಕರೆತಂದರು ಮತ್ತು ಸುದೀರ್ಘ ಹೋರಾಟದ ನಂತರ, ಬಂಡಾಯವನ್ನು

ಪುಟ 14 ನೋಡಿ



ಜಾತಿ ಜನಗಣತಿಗೆ ಮೋದಿ ಸರಕಾರದ ನಿರಾಕರಣೆ

ಹಿಂದುತ್ವ ಕೋಮು ರಾಜಕೀಯದ ನಿಜರೂಪ ಬಯಲು

ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ, 2021 ರ ಜನಗಣತಿ ಕಾರ್ಯಾಚರಣೆಯಲ್ಲಿ ಜಾತಿ ಗಣತಿ ಮಾಡಲು ಸಾಧ್ಯವಿಲ್ಲ ಎಂದು ಹೇಳಿದೆ. ಇದು "ಪ್ರಜ್ಞಾಪೂರ್ವಕ ನೀತಿ ನಿರ್ಧಾರ" ಎಂದೂ ಅದು ಸ್ಪಷ್ಟಪಡಿಸಿದೆ. ಸಾಮಾನ್ಯ ಜನಗಣತಿ ಯ ಭಾಗವಾಗಿ ಜಾತಿಗಣತಿ ಯನ್ನು ನಡೆಸಬೇಕೆಂಬ ಬೇಡಿಕೆಗೆ ವ್ಯಾಪಕ ಜನ ಬೆಂಬಲವಿದೆ. ಇದನ್ನು ತಿರಸ್ಕರಿಸಲು ಕೇಂದ್ರ ಸರ್ಕಾರವು ಮುಂದಿಟ್ಟಿರುವ ಕಾರಣಗಳು ತುಂಬಾ ದುರ್ಬಲ ಮತ್ತು ಕ್ಷುಲ್ಲಕವಾಗಿವೆ. ವಾಸ್ತವವಾಗಿ, ಅದರ ನಿರಾಕರಣೆಯ ಹಿಂದಿನ ನಿಜವಾದ ಕಾರಣವೆಂದರೆ, ಜಾತಿ ಗಣತಿಯ ಫಲಿತಾಂಶಗಳು ಹಿಂದುತ್ವ ಕೋಮು ರಾಜಕೀಯದ ನೈಜ ಸ್ವರೂಪವನ್ನು ಬಹಿರಂಗಪಡಿಸಲು ಸಂಘ ಪರಿವಾರ ಬಯಸುವುದಿಲ್ಲ ಎಂಬುದೇ ಆಗಿದೆ.

ಬಿ ವಿ ರಾಘವುಲು **ಅನು: ನಾಗರಾಜ ನಂಜುಂಡಯ್ಯ**

ಸೆಪ್ಟೆಂಬರ್ 23 ರಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ, 2021 ರ ಜನಗಣತಿ ಕಾರ್ಯಾಚರಣೆಯಲ್ಲಿ ಜಾತಿ ಗಣತಿ ಮಾಡಲು ಸಾಧ್ಯವಿಲ್ಲ ಎಂದು ಹೇಳಿದೆ. ಇದು "ಪ್ರಜ್ಞಾಪೂರ್ವಕ ನೀತಿ ನಿರ್ಧಾರ" ಎಂದೂ ಅದು ಸ್ಪಷ್ಟಪಡಿಸಿದೆ. ಸಾಮಾನ್ಯ ಜನಗಣತಿ ಯ ಭಾಗವಾಗಿ ಜಾತಿಗಣತಿ ಯನ್ನು ನಡೆಸಬೇಕೆಂಬ ಬೇಡಿಕೆಗೆ ವ್ಯಾಪಕ ಜನ ಬೆಂಬಲವಿದೆ. ಇದನ್ನು ತಿರಸ್ಕರಿಸಲು ಕೇಂದ್ರ ಸರ್ಕಾರವು ಮುಂದಿಟ್ಟಿರುವ ಕಾರಣಗಳು ತುಂಬಾ ದುರ್ಬಲ ಮತ್ತು ಕ್ಷುಲ್ಲಕವಾಗಿವೆ. ವಾಸ್ತವವಾಗಿ, ಅದರ ನಿರಾಕರಣೆಯ ಹಿಂದಿನ ನಿಜವಾದ ಕಾರಣವೆಂದರೆ, ಜಾತಿ ಗಣತಿಯ ಫಲಿತಾಂಶಗಳು ಹಿಂದುತ್ವ ಕೋಮು ರಾಜಕೀಯದ ನೈಜ ಸ್ವರೂಪವನ್ನು ಬಹಿರಂಗಪಡಿಸಲು ಸಂಘ ಪರಿವಾರ ಬಯಸುವುದಿಲ್ಲ ಎಂಬುದೇ ಆಗಿದೆ.

ಹಿಂದುಳಿದ ವರ್ಗಗಳ ಜಾತಿ ವಿವರಗಳನ್ನು ಸಂಗ್ರಹಿಸುವುದು, 'ಆಡಳಿತಾತ್ಮಕವಾಗಿ ಕಷ್ಟಕರ ಮತ್ತು ತೊಡಕಿನದ್ದು' ಎಂದು ಕೇಂದ್ರ ಸರ್ಕಾರ ತನ್ನ ಪ್ರಮಾಣ ಪತ್ರದಲ್ಲಿ ಹೇಳಿದೆ. "ಅಂಕಿ ಅಂಶಗಳ ಸಂಪೂರ್ಣತೆ ಮತ್ತು ನಿಖರತೆಯ" 'ಬಗ್ಗೆ ಯಾವುದೇ ಗ್ಯಾರಂಟಿ ಇರುವುದಿಲ್ಲ ಮತ್ತು ಆ ಅಂಕಿ ಅಂಶಗಳನ್ನು ಅಧಿಕೃತ ಉದ್ದೇಶಗಳಿಗಾಗಿ 'ಯಾವುದೇ ಅಧಿಕೃತ ದಾಖಲೆಗಳಲ್ಲಿ ಜನಸಂಖ್ಯೆಯ ಮಾಹಿತಿಯ ಒಂದು ಮೂಲವಾಗಿ ಬಳಸಲಾಗುವುದಿಲ್ಲ" ಎಂದು ಅದು ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಜಾತಿ ದತ್ತಾಂಶವನ್ನು ಸಂಗ್ರಹಿಸುವ ಹಿಂದಿನ ಪ್ರಯತ್ನಗಳನ್ನು ಗಮನಿಸಿದ ಯಾರಿಗಾದರೂ ಈ ವಾದಗಳು ಸತ್ಯಗಳನ್ನು ಆಧರಿಸಿರುವುದಿಲ್ಲ ಮತ್ತು ಹಿಂದಿನ ಅನುಭವಕ್ಕೆ ವಿರುದ್ಧವಾದ ಮಾತು ಎಂದು ಅರ್ಥವಾಗುತ್ತದೆ. ಸಾಕಷ್ಟು ರಾಜಕೀಯ ಆಶಯವಿದ್ದರೆ ಜಾತಿಗಣತಿಯನ್ನು ಮಾಡಬಹುದು.

ಸ್ವಾತಂತ್ರ್ಯ ಪೂರ್ವದಲ್ಲಿ, ಅಂದರೆ, 1881 ರಿಂದ 1941 ರವರೆಗಿನ ಎಲ್ಲಾ ದಶಕದ ಜನಗಣತಿ ಕಾರ್ಯಾಚರಣೆಯಲ್ಲಿ, ಜಾತಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ವಿಶೇಷ ಸಂಗತಿಯೆಂದರೆ 1931 ರ ಜನಗಣತಿಯಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ನಾವು ಇನ್ನೂ ಅವಲಂಬಿಸಿದ್ದೇವೆ, ಏಕೆಂದರೆ ಜಾತಿಗೆ ಸಂಬಂಧಿಸಿದ ಮಾಹಿತಿಯನ್ನು ನಂತರದ ಜನಗಣತಿ ಕಾರ್ಯಾಚರಣೆಯಲ್ಲಿ ಸೇರಿಸಲಾಗಿಲ್ಲ (1941 ರ ಜನಗಣತಿಯಲ್ಲಿ ಸಂಗ್ರಹಿಸಿದ ಜಾತಿ ವಿವರಗಳನ್ನು ಎರಡನೇ ವಿಶ್ವಯುದ್ಧದ ಕಾರಣ ಪಟ್ಟಿ ಮಾಡಿ ಪ್ರಕಟಿಸಲಾಗಿಲ್ಲ).

ಮಂಡಲ್ ಆಯೋಗವು ಈ ಜನಗಣತಿಯ ದತ್ತಾಂಶದ ಮೇಲೆ ಹಿಂದುಳಿದ ಜಾತಿಗಳ ಜನಸಂಖ್ಯೆಯ ಶೇಕಡಾವಾರು ಪ್ರಮಾಣವನ್ನು 52 ಶೇಕಡಾ ಎಂದು ಅಂದಾಜಿಸಿದೆ. ಅನೇಕ ಬೂರ್ಜ್ವಾ ಪಕ್ಷಗಳು ತಮ್ಮ ಸಾಮಾಜಿಕ ಹೂಟ ತಂತ್ರಗಳನ್ನು ನಿಖರಗೊಳಿಸಲು ಈ ಅಂಕಿಅಂಶಗಳನ್ನು ಬಳಸುತ್ತಿವೆ. ಮೋದಿ ಸರ್ಕಾರ ಹೇಳಿಕೊಂಡಂತೆ, ಸ್ವಾತಂತ್ರ್ಯದ ನಂತರವೂ, ಜಾತಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹವನ್ನು ಕೈಬಿಟ್ಟಿಲ್ಲ. ಸ್ವತಂತ್ರ ಭಾರತದಲ್ಲಿ ಮೊದಲ ಬಾರಿಗೆ, 1968 ರಲ್ಲಿ, ಇಎಂಎಸ್ ನಂಬೂದಿರಿಪಾಡ್ ನೇತೃತ್ವದ ಎಲ್‌ಡಿಎಫ್ ಸರ್ಕಾರವು ಜಾತಿ ವಿವರಗಳನ್ನು ಸಮಗ್ರ ಮತ್ತು ವೈಜ್ಞಾನಿಕ ರೀತಿಯಲ್ಲಿ ಸಂಗ್ರಹಿಸಿತು. ಹೀಗೆ ಸಂಗ್ರಹಿಸಿದ ಮಾಹಿತಿಯನ್ನು ಅದು ತನ್ನ ಸಾಮಾಜಿಕ–ಆರ್ಥಿಕ, ಕಲ್ಯಾಣ ಕಾರ್ಯಕ್ರಮಗಳನ್ನು ಬಡವರಿಗಾಗಿ ವಿನ್ಯಾಸಗೊಳಿಸಲು ಮತ್ತು ಮೀಸಲಾತಿಯ ನಮೂನೆಯನ್ನು ನಿರ್ಧರಿಸಲು ಬಳಸಿತು.

ಅಂದಿನಿಂದ, ಅನೇಕ ಸರ್ಕಾರಿ ಸಂಸ್ಥೆಗಳು ತಮ್ಮ ಸಮೀಕ್ಷೆಗಳ ಮೂಲಕ ಜಾತಿಗೆ ಸಂಬಂಧಿಸಿದ ಮಾಹಿತಿಯನ್ನು ನಿಯಮಿತವಾಗಿ ಸಂಗ್ರಹಿಸುತ್ತಿವೆ. ರಾಷ್ಟ್ರೀಯ ಮಾದರಿ ಸಮೀಕ್ಷೆ, ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಮತ್ತು ಕೃಷಿ ಸಂಸಾರಗಳ ಸನ್ನಿವೇಶ ಮೌಲ್ಯಮಾಪನ, ಇದಕ್ಕೆ ಕೆಲವು ಉದಾಹರಣೆಗಳಾಗಿವೆ. ಈ ಸಮೀಕ್ಷೆಗಳ ಮೂಲಕ ಸಂಗ್ರಹಿಸಿದ ದತ್ತಾಂಶಗಳನ್ನು ಅನೇಕ ಸರ್ಕಾರದ ಮಧ್ಯಪ್ರವೇಶಗಳನ್ನು ವಿನ್ಯಾಸಗೊಳಿಸಲು ಬಳಸಲಾಗುತ್ತಿದೆ.

2011 ರಲ್ಲಿ, ಸಾಮಾನ್ಯ ಜನಗಣತಿ ಕಾರ್ಯಾಚರಣೆಯ ಭಾಗವಾಗಿ ಮಾಡದಿದ್ದರೂ ಸಹಾ, ದೇಶ ವ್ಯಾಪಿ ಬೃಹತ್ "ಸಾಮಾಜಿಕ–ಆರ್ಥಿಕ ಜಾತಿಗಣತಿ" (ಎಸ್‌ಇಸಿಸಿ) ಯನ್ನು ಕೈಗೊಳ್ಳಲಾಯಿತು. ಇದರಲ್ಲಿ 118 ಕೋಟಿ ಜನರ ಮಾಹಿತಿಗಳನ್ನು ಸಂಗ್ರಹಿಸಲಾಯಿತು. ಈ ದತ್ತಾಂಶವನ್ನು ತಾಳೆ ನೋಡಲಾಗಿದೆ ಮತ್ತು ಪಟ್ಟಿ ಮಾಡಲಾಗಿದೆ. ಗುರುತಿಸಲಾದ ಹೆಚ್ಚಿನ ತಪ್ಪುಗಳನ್ನು ಆಯಾ ರಾಜ್ಯಗಳ ಸಹಾಯದಿಂದ ಸರಿಪಡಿಸಲಾಗಿದೆ. ಕೇವಲ 1,43,00,000 (ಒಂದು ಕೋಟಿ ನಲವತ್ತು ಮೂರು ಲಕ್ಷ) ದೋಷಗಳನ್ನು ಮಾತ್ರ ಇನ್ನೂ ಪರಿಹರಿಸಬೇಕಾಗಿದೆ. ಇದು ಕೇವಲ 1.2 ಪ್ರತಿಶತದಷ್ಟಿದೆ. ಆದರೆ ಸರ್ಕಾರಗಳು, ಮೊದಲು ಕಾಂಗ್ರೆಸ್, ನಂತರ ಬಿಜೆಪಿ, ಈ ದತ್ತಾಂಶವನ್ನು ಬಿಡುಗಡೆ ಮಾಡಿಯೇ ಇಲ್ಲ. 2014 ರವರೆಗೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರವು ಕ್ರೋಡಿಕೃತ ಅಂಕಿಅಂಶಗಳನ್ನು ಮಾತ್ರ ಬಿಡುಗಡೆ ಮಾಡಿತು. 2014 ರಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ಮೋದಿ ಸರ್ಕಾರ, ದತ್ತಾಂಶವನ್ನು ಬಿಡುಗಡೆ ಮಾಡದೆ ಎಸ್‌ಇಸಿಸಿ ರೂ 5000 ಕೋಟಿ ವೆಚ್ಚದಲ್ಲಿ ಪೂರ್ಣಗೊಂಡಿದೆ ಎಂದು ಘೋಷಿಸಿತು. ಸಂಪೂರ್ಣ ದತ್ತಾಂಶವನ್ನು ಕಸದ ಡಬ್ಬಿಗೆ ರವಾನಿಸಿತು. ಎ???ಸಿಸಿ ರೀತಿಯಾಗಿ, ಮಾಡಿದ ಉತ್ತಮ ಆರಂಭವು ಅಮೂಲ್ಯವಾದ ಹಣದ ಬೃಹ??? ದುಂದುವೆಚ್ಚವಾಗಿ ಕೊನೆಗೊಂಡಿತು.

2016 ರಲ್ಲಿ ಭಾರತದ ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತರು ಗ್ರಾಮೀಣಾಭಿವೃದ್ಧಿಯ ಸಂಸದೀಯ ಸ್ಥಾಯಿ ಸಮಿತಿಯ ಮುಂದೆ ಎಸ್‌ಇಸಿಸಿ ದತ್ತಾಂಶವು ಶೇಕಡಾ 98 ರಷ್ಟು ದೋಷರಹಿತ ಎಂದು ಹೇಳಿದ್ದಾರೆ. ಆದರೆ ಮೋದಿ ಸರ್ಕಾರವು ಪ್ರಸಕ್ತ ದತ್ತಾಂಶವನ್ನು ಬಿಡುಗಡೆ ಮಾಡಲು ಮತ್ತು ಜಾತಿ ಗಣತಿಯನ್ನು ನಡೆಸಲು ನಿರಾಕರಿಸುತ್ತಿರುವುದನ್ನು ಸಮರ್ಥಿಸಿಕೊಳ್ಳಲಿಕ್ಕಾಗಿ ಈ ದತ್ತಾಂಶ ಕಳಪೆ ಗುಣಮಟ್ಟದ್ದೆಂದು ಹಣೆಪಟ್ಟಿ ಹಚ್ಚುತ್ತಿದೆ. ಆ ಶೇಕಡಾ 2 ರಷ್ಟು ದೋಷಗಳು ಕೂಡ ಯಾವುದೇ ಜನಗಣತಿಯಲ್ಲಿ ಸಂಭವಿಸುವುದಕ್ಕಿಂತ ಹೆಚ್ಚೇನಲ್ಲ. ಎಸ್‌ಇಸಿಸಿ ಯಿಂದ ಪಡೆದ ಅನುಭವವನ್ನು ಬಳಸಿಕೊಂಡು, ತಾಂತ್ರಿಕ ದೋಷಗಳನ್ನು ಸರಿಪಡಿಸುವ ಮೂಲಕ, ಜನಗಣತಿ ಸಿಬ್ಬಂದಿಗೆ ಸರಿಯಾಗಿ ತರಬೇತಿ ನೀಡುವ ಮೂಲಕ, ಆಧುನಿಕ ಮಾಹಿತಿ ತಂತ್ರಜ್ಞಾನ ಮತ್ತು ದೊಡ್ಡ ದತ್ತಾಂಶ ವಿಶ್ಲೇಷಣಾಶಾಸ್ತ್ರ(ಬಿಗ್ ಡಾಟಾ ಅನಾಲಿಟಿಕ್ಸ್)ವನ್ನು ಬಳಸುವುದರಿಂದ, ಭವಿಷ್ಯದಲ್ಲಿ ಆ ಸಣ್ಣ ಪ್ರಮಾಣದ ದೋಷಗಳನ್ನು ಸಹ ತಪ್ಪಿಸಬಹುದು. ಆದರೆ ಮೋದಿ ಸರ್ಕಾರ ಜಾತಿ ಗಣತಿಯ ಬೇಡಿಕೆಯನ್ನು ತಿರಸ್ಕರಿಸಲು ಆರ್ ಎಸ್ ಎಸ್ ನ ಅಸಮರ್ಥನೀಯ ವಾದವನ್ನು ಮುಂದುವರಿಸುತ್ತಿದೆ.

ಜಾತಿ ಗಣತಿಯ ವಿರುದ್ಧ ಇನ್ನಿತರ ಕೆಲವು ಆಕ್ಷೇಪಗಳನ್ನು ಎತ್ತಲಾಗುತ್ತಿದೆ. ಅವುಗಳಲ್ಲಿ ಒಂದು ಆಕ್ಷೇಪವೆಂದರೆ, ಇತರ ಹಿಂದುಳಿದ ವರ್ಗ(ಒಬಿಸಿ) ಗಳ ದತ್ತಾಂಶವನ್ನು ಸಂಗ್ರಹಿಸುವುದು ತುಂಬಾ ಕಷ್ಟಕರವಾಗಿದೆ, ಏಕೆಂದರೆ ಒಂದೇ ಜಾತಿಯನ್ನು ಬೇರೆ ಬೇರೆ ರಾಜ್ಯಗಳಲ್ಲಿ ವಿವಿಧ ಪಟ್ಟಿಗಳಲ್ಲಿ ವರ್ಗೀಕರಿಸಲಾಗಿದೆ; ರಾಜ್ಯ ಮತ್ತು ಕೇಂದ್ರ ಪಟ್ಟಿಗಳ ನಡುವೆ ವ್ಯತ್ಯಾಸವಿದೆ; ಅಂತರ್ಜಾತಿ ವಿವಾಹಗಳಿಂದ ಹುಟ್ಟಿದ ಮಕ್ಕಳನ್ನು ವರ್ಗೀಕರಿಸುವಲ್ಲಿ ಸಮಸ್ಯೆ ಇದೆ; ಮತ್ತು ಯಾವುದೇ ಜಾತಿಯವರು ಎಂದು ಹೇಳಲು ನಿರಾಕರಿಸುವವರನ್ನು ಹೇಗೆ ವರ್ಗೀಕರಿಸುವುದು ಎಂಬುದರ ಬಗ್ಗೆ ಯಾವುದೇ ಸ್ಪಷ್ಟತೆ ಇಲ್ಲ, ಇತ್ಯಾದಿಯಾಗಿ. ಆದರೆ ಇವೆಲ್ಲ ನಿವಾರಿಸಲಾಗದ ತೊಂದರೆಗಳೇನಲ್ಲ.

ಸಾಮಾನ್ಯ ಜನಗಣತಿಯಲ್ಲಿ, ಧರ್ಮದ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸುವಲ್ಲಿಯೂ ಇಂತಹುದೇ ತೊಂದರೆಗಳಿವೆ– ಭಿನ್ನ ಧಾರ್ಮಿಕ ನಂಬಿಕೆಗಳವರ ವಿವಾಹಗಳಿಂದ ಹುಟ್ಟಿದ ಮಕ್ಕಳನ್ನು ವರ್ಗೀಕರಿಸುವುದು ಮತ್ತು ಯಾವುದೇ ಧರ್ಮವನ್ನು ಅನುಸರಿಸುತ್ತಿಲ್ಲ ಎಂದು ಹೇಳುವವರು ಇತ್ಯಾದಿ. ಧರ್ಮದ ಬಗ್ಗೆ ಅಂತಹ ಮಾಹಿತಿಯನ್ನು ಸಂಗ್ರಹಿಸುವಲ್ಲಿ ಯಾವುದೇ ಸಮಸ್ಯೆ ಇಲ್ಲದಿರುವಾಗ, ಜಾತಿಗಣತಿಗೆ ಮಾತ್ರ ಮಾಹಿತಿ ಸಂಗ್ರಹಿಸಲು ಏಕೆ ಸಾಧ್ಯವಾಗುವುದಿಲ್ಲ ? ಜನಗಣತಿಯಲ್ಲಿ ಧಾರ್ಮಿಕ ಅನುಸರಣೆ ಕುರಿತಾದ ದತ್ತಾಂಶ ಸಂಗ್ರಹವನ್ನು ವಿರೋಧಿಸದ ಬಿಜೆಪಿ, ಜಾತಿ ಗಣತಿಯನ್ನು ಮಾತ್ರ ವಿರೋಧಿಸುವುದು ಸ್ಪಷ್ಟವಾಗಿ ಅದರ ರಾಜಕೀಯ ಇಬ್ಬಂದಿತನವನ್ನು ಬಯಲುಗೊಳಿಸುತ್ತದೆ.

ಜಾತಿಗಣತಿ ವಿಚಾರದಲ್ಲಿ, ಬಿಜೆಪಿ ಅದರ ಪೋಷಕ ಸಂಘಟನೆ ಆರ್ ಎಸ್ ಎಸ್ ಗೆ ವಿರುದ್ಧವಾದ ನಿಲುಮೆ ಹೊಂದುತ್ತದೆ ಎಂದು ನಾವು ನಿರೀಕ್ಷಿಸಲು ಸಾಧ್ಯವಿಲ್ಲ. ಆರ್‌ಎಸ್‌ಎಸ್, ವಾಸ್ತವವಾಗಿ ಜಾತಿ ಗಣತಿಯ ಸಂಗ್ರಹವನ್ನು ಸದಾ ವಿರೋಧಿಸಿಕೊಂಡೇ ಬಂದಿದೆ. ಅನೇಕ ಸಂದರ್ಭಗಳಲ್ಲಿ ಹಲವಾರು ಆರ್ ಎಸ್ ಎಸ್ ಪ್ರಚಾರಕರು ಇದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಮನು ಧರ್ಮವನ್ನು ತಮ್ಮ ಆದರ್ಶವಾಗಿ ಸ್ವೀಕರಿಸಿದವರು ಸಾಮಾಜಿಕ ನ್ಯಾಯದ ಪರವಾಗಿ ನಿಲ್ಲುತ್ತಾರೆಂದು ನಿರೀಕ್ಷಿಸಲಾಗದು. ಅವರು ಜಾತಿ ವ್ಯವಸ್ಥೆಯನ್ನು ದುರ್ಬಲಗೊಳಿಸುವುದನ್ನು ಎಂದಿಗೂ ಸಹಿಸುವುದಿಲ್ಲ. ಹಿಂದುತ್ವದ ಆಧಾರದ ಮೇಲೆ ಹಿಂದುಗಳ ಕೋಮುವಾದೀಕರಣ ಮಾಡಬೇಕಾದರೆ, ಅಸ್ತಿತ್ವದಲ್ಲಿರುವ ಸಾಮಾಜಿಕ–ಆರ್ಥಿಕ–ರಾಜಕೀಯ ಅಸಮಾನತೆಗಳು ಮತ್ತು ಜಾತಿ ಆಧಾರಿತ ದಬ್ಬಾಳಿಕೆಗಳನ್ನು ಮುಚ್ಚಿಡಬೇಕು ಮತ್ತು ಅದನ್ನು ಬೆಳಕಿಗೆ ಬರಲು ಬಿಡಬಾರದು. ಆದರೆ ಜಾತಿಗಣತಿ ನಡೆದರೆ, ಅದು ಹಿಂದೂ ಧರ್ಮದ ತಿರುಳಾಗಿರುವ ಜಾತಿ ವ್ಯವಸ್ಥೆಯ ಅಸಹ್ಯಕರ ಸ್ವರೂಪವನ್ನು ಬಹಿರಂಗಪಡಿಸುತ್ತದೆ. ಇದು ಕೋಮುವಾದಿ ರಾಜಕೀಯವನ್ನು ಆಧರಿಸಿದ ಏಕತೆಯನ್ನು ಹಾಳು ಮಾಡುತ್ತದೆ. ಹಿಂದುಗಳಲ್ಲಿ ಒಬಿಸಿಗಳು ಸೇರಿದಂತೆ ದಮನಿತ ಜಾತಿ ಸಮುದಾಯಗಳು ಸಂಪನ್ಮೂಲಗಳ ಅಸಮಾನ ವಿತರಣೆಯ ಬಗ್ಗೆ ಪ್ರಶ್ನಿಸಲು ಆರಂಭಿಸಿದರೆ, ಅದು ಕೋಮುವಾದಿ ಹಿಂದುತ್ವ ಯೋಜನೆಗೆ ಹಾನಿಯುಂಟು ಮಾಡುತ್ತದೆ. ಅದಕ್ಕಾಗಿಯೇ ಜಾತಿ ಗಣತಿಯ ವಿಚಾರವು ಆರ್‌ಎಸ್‌ಎಸ್ ಮತ್ತು ಬಿಜೆಪಿಗೆ ಅಪಥ್ಯವಾಗಿದೆ.


ಇನ್ನೊಂದು ವ್ಯಾಪಕವಾದ ಅನಿಸಿಕೆಯೆಂದರೆ, ಜಾತಿ ದತ್ತಾಂಶ ಮಾಹಿತಿಯ ನೆರವಿನಿಂದ, ಜಾತಿ ಭಾವನೆಗಳು ಹೆಚ್ಚಾಗುತ್ತವೆ ಎಂಬುದು. ಇದು ಗಾಡಿ ಮೊದಲೋ ಕುದುರೆ ಮೊದಲೋ ಎಂಬಂತೆ. ಜಾತಿ ಪ್ರತ್ಯೇಕತೆ, ಅಸ್ಮಿತೆಯ ಭಾವನೆ, ಜಾತಿ ಶ್ರೇಣೀಕರಣದ ಅಂತರ್ಗತ ಲಕ್ಷಣವಾಗಿದೆ. ಎಲ್ಲಿಯ ವರೆಗೆ ಜಾತಿ ವ್ಯವಸ್ಥೆಯು ನಿರ್ಮೂಲನೆಯಾಗುವುದಿಲ್ಲವೋ ಅಲ್ಲಿಯವರೆಗೆ ಅಂತಹ ವಿಚಾರಗಳಿಗೆ ಬುನಾದಿಗಳು ಇದ್ದೇ ಇರುತ್ತದೆ. ಜಾತಿಗಣತಿ ಇಲ್ಲದಿದ್ದರೂ, ವಿವಿಧ ಅಂಶಗಳಿಂದಾಗಿ, ನಮ್ಮ ಸಮಾಜದಲ್ಲಿ ಜಾತಿ ಅಸ್ಮಿತೆಯ ಪ್ರಜ್ಞೆ ಹೆಚ್ಚುತ್ತಲೇ ಇದೆ. ಬೂರ್ಜ್ವಾ ರಾಜಕೀಯ ಪಕ್ಷಗಳು ತಮ್ಮ ಪಟ್ಟಭದ್ರ ಚುನಾವಣಾ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲು ಅವುಗಳನ್ನು ಹುರಿದುಂಬಿಸುತ್ತಿವೆ. ದುರ್ಬಲ ವರ್ಗಗಳಲ್ಲಿ ಸಾಮಾಜಿಕ ಅಸಮಾನತೆಗಳ ವಿರುದ್ಧ ಜಾಗೃತಿ ಹೆಚ್ಚಾದಂತೆ, ಜಾತಿ ಅಸ್ಮಿತೆಯ ಪ್ರಜ್ಞೆ ಹೆಚ್ಚಾಗುತ್ತದೆ. ದುರ್ಬಲ ವರ್ಗಗಳಲ್ಲಿ ಈ ಜಾತಿ ಅಸ್ಮಿತೆಯ ಪ್ರಜ್ಞೆಯಲ್ಲಿ ಸಂಕುಚಿತತೆ ಇದ್ದರೂ, ಅದರಲ್ಲಿ ಒಂದು ಪ್ರಜಾಪ್ರಭುತ್ವ ಅಂಶ ಇರುವುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಜಾತಿ ಗಣತಿಯನ್ನು ವಿರೋಧಿಸುವ ಮೂಲಕ ನಾವು ಜಾತಿ ಪ್ರಜ್ಞೆಯನ್ನು ತಡೆದು ನಿಲ್ಲಿಸಬಹುದು ಎಂದು ಭಾವಿಸುವುದು ತಪ್ಪು. ಜಾತಿ ವ್ಯವಸ್ಥೆಯ ವಿರುದ್ಧ ನಮ್ಮ ಹೋರಾಟದ ಮೂಲಕವೇ, ನಾವು ಜಾತಿ ಪ್ರಜ್ಞೆಯನ್ನು ನಿರಾಕರಿಸಲು ಸಾಧ್ಯ.

ಕೆಲವರು, ಜಾತಿಗಣತಿಯನ್ನು ಆಕ್ಷೇಪಿಸಲು, ಅದು ಮೀಸಲಾತಿಗಾಗಿ ಹೊಸ ಬೇಡಿಕೆಗಳಿಗೆ ಮತ್ತು ಅಸ್ತಿತ್ವದಲ್ಲಿರುವ ಮೀಸಲಾತಿಗಳ ಮರುಹಂಚಿಕೆಗೆ ಕಾರಣವಾಗಬಹುದು ಎಂದು ವಾದ ಹೂಡುತ್ತಾರೆ. ಈ ವಾದದಲ್ಲಿ ಸ್ವಲ್ಪ ಸತ್ಯಾಂಶವಿದೆ. ಆದಾಗ್ಯೂ, ಜಾತಿ ಗಣತಿ ಇಲ್ಲದಿದ್ದರೂ ಸಹಾ, ಅಂತಹ ಬೇಡಿಕೆಗಳನ್ನು ಎತ್ತಲಾಗುತ್ತದೆ ಎಂಬುದನ್ನು ಗಮನಿಸಬೇಕು. ಆಯೋಗಗಳು ಹೊಸ ಜಾತಿಗಳಿಗೆ ಮೀಸಲಾತಿಯನ್ನು ಶಿಫಾರಸು ಮಾಡುತ್ತಿವೆ. ರಾಜಕೀಯ ಪಕ್ಷಗಳು ಕೂಡ ಇಂತಹ ಮೀಸಲಾತಿಗಳ ಭರವಸೆ ನೀಡುತ್ತಿವೆ. ಸರ್ಕಾರಗಳು ಕೂಡ ಇಂತಹ ಮೀಸಲಾತಿಗಳನ್ನು ನೀಡುವ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿವೆ. ಜಾತಿ ಗಣತಿ ಇಲ್ಲದಿದ್ದರೂ ಇದೆಲ್ಲವೂ ನಡೆಯುತ್ತಲೇ ಬಂದಿವೆ.

ವಾಸ್ತವವಾಗಿ, ಜಾತಿ ಗಣತಿಯು ಕೆಲವು ಗುಂಪುಗಳ ಇಂತಹ ಬೇಡಿಕೆಗಳ ನೈಜತೆಯನ್ನು ನಿರ್ಧರಿಸಲು ಮತ್ತು ಇತರ ಕೆಲವು ಬೇಡಿಕೆಗಳನ್ನು ತಿರಸ್ಕರಿಸಲು ಸಹಾಯ ಮಾಡುತ್ತದೆ. ಅನೇಕ

ಪುಟ 14 ನೋಡಿ

ರೈತಾಪಿಯ ‘ಮಾಡು ಇಲ್ಲವೇ ಮಡಿ’ ಹೋರಾಟ



ಇಂದಿನ ರೈತ ಹೋರಾಟವು ಒಂದು ಸಾಮಾನ್ಯ ಹೋರಾಟವಲ್ಲ. ಇದು, ಸದ್ಯದ ಸಂದಿಗ್ಧ ಪರಿಸ್ಥಿತಿಯ ಮೂಲವನ್ನೇ ಅಲುಗಾಡಿಸುವ ಹೋರಾಟವಾಗಿದೆ. ಇದು, ಮಾಡು ಇಲ್ಲವೇ ಮಡಿ ಹೋರಾಟ. ರೈತರ ಈ ಹೋರಾಟವು ಈ ಸರ್ಕಾರವು ತಾನು ಜನರೊಂದಿಗೆ ನಿಲ್ಲುತ್ತೇನೋ ಅಥವಾ ದೊಡ್ಡ ಅಂತಾರಾಷ್ಟ್ರೀಯ ಉದ್ಯಮಗಳೊಂದಿಗೋ ಎಂಬುದನ್ನು ಸರ್ಕಾರವೇ ಬಹಿರಂಗವಾಗಿ ಘೋಷಿಸಬೇಕಾಗಿ ಬಂದಿರುವ ಇಕ್ಕಟ್ಟಿನಲ್ಲಿ ಇರಿಸಿದೆ. ಇಲ್ಲಿಯ ವರೆಗೆ ಸರ್ಕಾರವು ಮಾಡಿದ ಹಾಗೆ, ಮುಂದೆಯೂ ಅಂತಾರಾಷ್ಟ್ರೀಯ ದೊಡ್ಡ ಉದ್ಯಮಗಳೊಂದಿಗೆ ಬಹಿರಂಗವಾಗಿ ನಿಂತರೆ, ಅದು ದೇಶದಲ್ಲಿ ಪ್ರಜಾಪ್ರಭುತ್ವಕ್ಕೆ ಕೊಡುವ ಬಹು ದೊಡ್ಡ ಹೊಡೆತವಾಗುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್ **ಅನು: ಕೆ.ಎಂ. ನಾಗರಾಜ್**

ಬಂಡವಾಳಶಾಹಿಯು ಬೆಳೆದಂತೆಯೇ ಮಾರ್ಕ್ಸ್‌ವಾದಿ ಸಿದ್ಧಾಂತವೂ ಸಹ ಸಮಯದ ಬದಲಾವಣೆಯೊಂದಿಗೆ ವಿಕಾಸಗೊಳ್ಳುತ್ತದೆ. ಆದ್ದರಿಂದಲೇ ಅದೊಂದು ಜೀವಂತ ಸಿದ್ಧಾಂತವಾಗಿ ಉಳಿದಿದೆ. ಬಂಡವಾಳಶಾಹಿಯನ್ನು ಮೀರಿ ಹೋಗಲು ಕಾರಣವಾಗುವ ಕ್ರಾಂತಿಕಾರಿ ಪ್ರಕ್ರಿಯೆಯಲ್ಲಿ ರೈತ ಚಳವಳಿಯ ಪಾತ್ರಕ್ಕೆ ಸಂಬಂಧಿಸಿದಂತೆ, ಮಾರ್ಕ್ಸ್‌ವಾದಿ ಸಿದ್ಧಾಂತದಲ್ಲಿ ಗಮನಾರ್ಹ ಬೆಳವಣಿಗೆಗಳಾಗಿವೆ. ಅವುಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಜರ್ಮನಿಯ ರೈತಾಪಿಯು ಬಂಡವಾಳಶಾಹಿಯನ್ನು ಕಿತ್ತೊಗೆಯಲು ನಡೆಸಿದ ಕ್ರಾಂತಿಕಾರಿ ಹೋರಾಟದಲ್ಲಿ ಶ್ರಮಿಕ ವರ್ಗವು ರೈತಾಪಿ ವರ್ಗ ಮತ್ತು ಕೃಷಿ ಕಾರ್ಮಿಕರೊಂದಿಗೆ ಮೈತ್ರಿ ಮಾಡಿಕೊಳ್ಳಬೇಕಾಗಿ ಬಂತು ಎಂಬ ಅಂಶವನ್ನು ಫ್ರೆಡ್ರಿಕ್ ಎಂಗೆಲ್ಸ್, ‘ಜರ್ಮನಿಯ ರೈತ ಯುದ್ಧ’(1850) ಎಂಬ ತಮ್ಮ ಕೃತಿಯಲ್ಲಿ ಒತ್ತಿ ಹೇಳಿದ್ದರು. ಆದಾಗ್ಯೂ, ಕ್ರಾಂತಿಯಲ್ಲಿ ರೈತರ ಪಾತ್ರ ಕುರಿತು ಮಾರ್ಕ್ಸ್‌ವಾದಿ ಸಿದ್ಧಾಂತವು ಅನೇಕ ವರ್ಷಗಳ ಕಾಲ ಅಸ್ಪಷ್ಟವಾಗಿತ್ತು. “ಪರಿಷ್ಕರಣವಾದ”ವನ್ನು ಪ್ರಬಲವಾಗಿ ವಿರೋಧಿಸಿದವರೂ ಮತ್ತು ಎರಡನೇ ಅಂತಾರಾಷ್ಟ್ರೀಯದ ಪ್ರಧಾನ ಸಿದ್ಧಾಂತಿಯೂ ಹಾಗೂ ಕ್ರಾಂತಿಕಾರಿ ಮಾರ್ಕ್ಸ್‌ವಾದದ ಒಬ್ಬ ಪ್ರಬಲ ಸಮರ್ಥಕರೂ ಆಗಿದ್ದ ಕಾರ್ಲ್ ಕೌಟ್ಸ್ಕಿ, “ರೈತರು ಮತ್ತು ಭೂಮಾಲೀಕರ ನಡುವಿನ ಸಂಬಂಧಗಳ ಪ್ರಶ್ನೆಯಲ್ಲಿ ನಗರಪ್ರದೇಶದ ಕ್ರಾಂತಿಕಾರಿ ಚಳುವಳಿಯು ತಟಸ್ಥವಾಗಿರಬೇಕು” ಎಂದು ನಂಬಿದ್ದರು. ಕೌಟ್ಸ್ಕಿ ಅವರ ಈ ಸಮರ್ಥನೆಯಿಂದ ದುಃಖಿತರಾದ ಇಲಿಚ್(ಲೆನಿನ್), ಇದು ಬಹುಶಃ ಪಶ್ಚಿಮ ಯುರೋಪಿನ ಸಂದರ್ಭದಲ್ಲಿ ನಿಜವಿರಬಹುದೇನೋ. ಆದರೆ, ರಷ್ಯಾದ ಕ್ರಾಂತಿಯು ರೈತರ ಬೆಂಬಲದಿಂದ ಮಾತ್ರ ಜಯಶಾಲಿಯಾಗಬಲ್ಲದು ಎಂದು ಹೇಳುವ ಮೂಲಕ ತಮ್ಮ ಅಸಮಾಧಾನವನ್ನು ಹೊರಹಾಕಿದರು ಎಂಬುದಾಗಿ, ರಷ್ಯಾದ ಒಬ್ಬ ಕ್ರಾಂತಿಕಾರಿಯೂ ಮತ್ತು ಲೆನಿನ್ ಅವರ ಪತ್ನಿಯೂ ಆಗಿದ್ದ ನಾಡೆಜ್ಡಾ ಕೃಪ್ಸ್‌ಕಾಯ ಅವರು ಹೇಳಿದ್ದಾರೆ. (ಮೆಮೊರೀಸ್ ಆಫ್ ಲೆನಿನ್, ಪ್ಯಾಂಥರ್ ಹಿಸ್ಟರಿ ಪೇಪರ್ ಬ್ಯಾಕ್, 1970, ಪುಟ.110–111).

ಎಂಗೆಲ್ಸ್ ಅವರ ವಾದವನ್ನು ಸ್ವತಃ ಲೆನಿನ್ ಅಭಿವೃದ್ಧಿಪಡಿಸಿದರು ಮತ್ತು ಅದು ಮುಂದಿನ ಶತಮಾನದಲ್ಲಿ ಮಾರ್ಕ್ಸ್‌ವಾದಿ ಮೂಲ ಪ್ರಮೇಯದ ಸ್ಥಾನವನ್ನು ಪಡೆಯಿತು. ಲೆನಿನ್ ಅಭಿವೃದ್ಧಿಪಡಿಸಿದ ವಾದ ಹೀಗಿದೆ: ಬಂಡವಾಳಶಾಹಿ ಪದ್ಧತಿಯು ತಡವಾಗಿ ಬಂದ ದೇಶಗಳಲ್ಲಿ, ಶ್ರಮಿಕರು ಅದಾಗಲೇ ಒಡ್ಡಿದ ಸವಾಲಿಗೆ ಎದುರಾಗಿದ್ದ ಬೂರ್ಜ್ವಾಗಳು, ಭೂಮಾಲೀಕರೊಂದಿಗೆ ಕೈಜೋಡಿಸಿದರು. ಏಕೆಂದರೆ, ಊಳಿಗಮಾನ್ಯ ಆಸ್ತಿ ಸಂಬಂಧಗಳ ಮೇಲೆ ನಡೆಸುವ ಯಾವುದೇ ದಾಳಿಯು ಪುಟಿದೆದ್ದು ನಾಳೆ ತಮಗೂ ಸಂಚಕಾರ ತರುತ್ತದೆ – ಅಂದರೆ, ಬೂರ್ಜ್ವಾ ಆಸ್ತಿ–ಸಂಬಂಧಗಳ ಮೇಲೂ ಇದೇ ರೀತಿಯ ದಾಳಿ ಮರುಕಳಿಸುತ್ತದೆ – ಎಂಬ ಭಯದಿಂದ. ಆದ್ದರಿಂದ, 1789ರಲ್ಲಿ ಫ್ರಾನ್ಸಿನಲ್ಲಿ ಬೂರ್ಜ್ವಾ ಕ್ರಾಂತಿಯನ್ನು ಮುನ್ನಡೆಸಿದ ದಿನಗಳಲ್ಲಿ ಆಗಿದ್ದಂತೆ, ಊಳಿಗಮಾನ್ಯ ಎಸ್ಟೇಟ್‌ಗಳ ಒಡೆತನವನ್ನು ರೈತರ ನಡುವೆ ಮರು–ವಿತರಿಸುವ ಮೂಲಕ ಊಳಿಗಮಾನ್ಯ ಆಸ್ತಿ ಸಂಬಂಧಗಳಿಗೆ ಮಾರಣಾಂತಿಕ ಪೆಟ್ಟು ಕೊಡದೆ; ಮತ್ತು ಸಾಮಾಜಿಕ ಶಕ್ತಿಯ ಮೇಲೆ ಆಕ್ರಮಣ ನಡೆಸದೆ ಮುದುರಿಕೊಮಡಿತು. ಹಾಗಾಗಿ, ರೈತರ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳು ಈಡೇರಲಿಲ್ಲ. ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಮುನ್ನಡೆಸುವ ಶ್ರಮಿಕರಿಂದ ಮಾತ್ರ ರೈತರ ಈ ಆಕಾಂಕ್ಷೆಗಳನ್ನು ಈಡೇರಿಸಲು ಸಾಧ್ಯ, ಈ ಉದ್ದೇಶಕ್ಕಾಗಿ ಅದು ರೈತರೊಂದಿಗೆ ಮೈತ್ರಿ ಮಾಡಿಕೊಳ್ಳಬಹುದು.

ಕಾರ್ಮಿಕ ವರ್ಗದ ನಾಯಕತ್ವದಲ್ಲಿ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಪೂರ್ಣಗೊಳಿಸುವ ಕಾರ್ಮಿಕ–ರೈತ ಮೈತ್ರಿಯ ಪರಿಕಲ್ಪನೆಯನ್ನು ಲೆನಿನ್ ಮುಂದಿಟ್ಟರು. ಆನಂತರ, ಕಾರ್ಮಿಕ ವರ್ಗವು ಒಂದು ಸಮಾಜವಾದಿ ಕ್ರಾಂತಿಯತ್ತ ಸಾಗುತ್ತದೆ, ಹೀಗೆ ಸಾಗುತ್ತಿರುವಾಗ, ಕ್ರಾಂತಿಯ ಹಂತಕ್ಕೆ ಅನುಗುಣವಾಗಿ ಕಾರ್ಮಿಕ ವರ್ಗವು ರೈತಾಪಿಯೊಳಗಿನ ತನ್ನ ಮಿತ್ರರನ್ನು ಬದಲಾಯಿಸಿಕೊಳ್ಳುತ್ತದೆ. ಪ್ರಜಾಸತ್ತಾತ್ಮಕ ಕ್ರಾಂತಿಗಾಗಿ ಕಾರ್ಮಿಕ ವರ್ಗವು ಉದಾರವಾದಿ ಬೂರ್ಜ್ವಾಗಳೊಂದಿಗೆ ಮೈತ್ರಿ ಮಾಡಿಕೊಳ್ಳಬೇಕು ಎನ್ನುವ ಮೆನ್ಶೆವಿಕ್‌ಗಳ ವಾದವನ್ನು ಲೆನಿನ್ ವಿರೋಧಿಸಿದರು. ಉದಾರವಾದಿ ಬೂರ್ಜ್ವಾ ವರ್ಗವು ಊಳಿಗಮಾನ್ಯ ಪ್ರಭುಗಳೊಂದಿಗಿನ ಸಂಬಂಧವನ್ನು ಕಡಿದುಕೊಳ್ಳಬಯಸದ ಕಾರಣ, ಅದು ರೈತರಿಗೆ ದ್ರೋಹ ಬಗೆಯುವುದು ಶತಸಿದ್ಧ ಎಂದು ಲೆನಿನ್ ವಾದಿಸಿದರು. ಆದ್ದರಿಂದ, ಕಾರ್ಮಿಕ ವರ್ಗವು ಉದಾರವಾದಿ ಬೂರ್ಜ್ವಾ ವರ್ಗದೊಂದಿಗಿನ ಮೈತ್ರಿಯಿಂದ ದುರ್ಬಲಗೊಳ್ಳುವುದರ ಬದಲು ಮತ್ತು ಆ ಮೂಲಕ ಪ್ರಜಾಪ್ರಭುತ್ವ ಕ್ರಾಂತಿಗೆ ಅಡಚಣೆಯಾಗುವುದರ ಬದಲು, ಪ್ರಜಾಪ್ರಭುತ್ವ ಕ್ರಾಂತಿಯನ್ನು ಮುಂದುವರೆಸುವ ಸಲುವಾಗಿ ರೈತಾಪಿಯೊಂದಿಗೆ ಮೈತ್ರಿಯನ್ನು ರೂಪಿಸಿಕೊಳ್ಳಬೇಕು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಶ್ರಮಿಕ ವರ್ಗವು ರೈತಾಪಿಯೊಂದಿಗೆ ಮೈತ್ರಿ ಮಾಡಿಕೊಂಡು ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಪೂರ್ಣಗೊಳಿಸಬಹುದು. ಆದರೆ, ಶ್ರಮಿಕ ವರ್ಗ ಮತ್ತು ಉದಾರವಾದಿ ಬೂರ್ಜ್ವಾಗಳ ನಡುವಿನ ಮೈತ್ರಿಯು ಪ್ರಜಾಪ್ರಭುತ್ವ ಕ್ರಾಂತಿಗೆ ದ್ರೋಹವೆಸಗುವುದು ಖಚಿತ. ಹಾಗಾಗಿ, ರಷ್ಯಾದ ಬೋಲ್ಶೆವಿಕ್ ಕ್ರಾಂತಿಗೆ ಮೊದಲು “ಕಾರ್ಮಿಕರು ಮತ್ತು ರೈತರ ಪ್ರಜಾಸತ್ತಾತ್ಮಕ ಸರ್ವಾಧಿಕಾರ” ಎಂಬ ಬೋಲ್ಶೆವಿಕ್ ಕಾರ್ಯಕ್ರಮವು “ಶ್ರಮಜೀವಿಗಳ ಸರ್ವಾಧಿಕಾರ” ಕ್ಕೆ ಮಾರ್ಪಾಟಾಯಿತು.

ಲೆನಿನ್‌ರವರ ಈ ವ್ಯಾಖ್ಯಾನವು ಮಾರ್ಕ್ಸ್‌ವಾದದ ವಿಕಾಸದಲ್ಲಿ ಒಂದು ಗಮನಾರ್ಹ ಬೆಳವಣಿಗೆಯಾಗಿದ್ದು ಈ ತಿಳುವಳಿಕೆಯು ಮುಂದಿನ ಶತಮಾನದಲ್ಲಿ ಮೂರನೇ ಜಗತ್ತಿನಲ್ಲಿ ಬೆಳೆದು ಬಂದ ಕ್ರಾಂತಿಕಾರಿ ಚಳುವಳಿಗಳಿಗೆ ಅಗತ್ಯ ಬೋಧನೆಯನ್ನು ಒದಗಿಸಿತು. ಲೆನಿನ್ ಅವರ ಜೀವಿತ ಕಾಲದ ನಂತರ ಬಂಡವಾಳಶಾಹಿಯಲ್ಲಿ ಕಂಡು ಬಂದ ಬೆಳವಣಿಗೆಗಳು ಲೆನಿನ್ ಅವರ ವಿಶ್ಲೇಷಣೆಯ ಪ್ರಾಮುಖ್ಯತೆಯನ್ನು ಬಲಪಡಿಸಿವೆ ಮತ್ತು ಕಾರ್ಮಿಕ–ರೈತಾಪಿ ಮೈತ್ರಿಯ ಅಗತ್ಯವು ಲೆನಿನ್ ಹೇಳಿದ್ದಕ್ಕಿಂತಲೂ ಅಧಿಕ ಕಾರಣಗಳಿಂದಾಗಿ ಮಹತ್ವ ಪಡೆಯುತ್ತದೆ.

ಬಂಡವಾಳಶಾಹಿಯ ವಿಕಾಸದ ಸಂಬಂಧವಾಗಿ ಎರಡು ನಿರ್ದಿಷ್ಟ ಬೆಳವಣಿಗೆಗಳು ಇಲ್ಲಿ ಪ್ರಸ್ತುತವಾಗುತ್ತವೆ. ಮೊದಲನೆಯದು, ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ಪ್ರವರ್ಧಮಾನಕ್ಕೆ ಬಂದದ್ದು ಮತ್ತು ಅದರ ಆಧಿಪತ್ಯದಲ್ಲಿ ನವ–ಉದಾರವಾದಿ ನೀತಿಗಳ ಆಗಮನದೊಂದಿಗೆ, ದೇಶೀಯ ಏಕಸ್ವಾಮ್ಯ ಬಂಡವಾಳಗಾರರಿಗೆ ಮತ್ತು ಬಹು ರಾಷ್ಟ್ರೀಯ ಉದ್ದಿಮೆಗಳಿಗೆ ರೈತ ಕೃಷಿಯನ್ನು ಅತಿಕ್ರಮಿಸುವ ಮಾರ್ಗದಲ್ಲಿದ್ದ ಅಡಚಣೆಗಳನ್ನು ತೆರವುಗೊಳಿಸಿದ ಕ್ರಮ. ಸಂಕ್ಷಿಪ್ತವಾಗಿ ಹೇಳುವುದಾದರೆ, ರೈತಾಪಿಯು ಇಂದು ಭೂಮಾಲಿಕ ವರ್ಗದ ದಬ್ಬಾಳಿಕೆಯನ್ನು ಮಾತ್ರವಲ್ಲದೆ ಏಕಸ್ವಾಮ್ಯ ಬಂಡವಾಳದ ದಬ್ಬಾಳಿಕೆಯನ್ನೂ ಎದುರಿಸುತ್ತಿದೆ.

ಏಕಸ್ವಾಮ್ಯ ಬಂಡವಾಳವು ಭರ್ಜರಿ ಲಾಭ ಗಳಿಸುತ್ತದೆ. ಮುಕ್ತ ಸ್ಪರ್ಧೆಯ ಬಂಡವಾಳಶಾಹಿಯ ಅಡಿಯಲ್ಲಿ ಪ್ರಚಲಿತ ಲಾಭದ ದರಕ್ಕಿಂತ ಅತಿ ಹೆಚ್ಚು ಲಾಭಗಳಿಸುತ್ತದೆ. ಈ ಪಾಟಿಯ ಲಾಭವನ್ನು ಅದು ಕೇವಲ ಕಾರ್ಮಿಕರ ಶೋಷಣೆಯ ಮೂಲಕ (ಮಿಗುತಾಯ ಮೌಲ್ಯದ ದರವನ್ನು ಹೆಚ್ಚಿಸುವ ಮೂಲಕ) ಮಾತ್ರವಲ್ಲ, ಸಣ್ಣ ಪುಟ್ಟ ಬಂಡವಾಳಶಾಹಿಗಳು ಮತ್ತು ರೈತಾಪಿಯೂ ಸೇರಿದಂತೆ ಕಿರು ಉತ್ಪಾದಕರಿಗೆ ನಷ್ಟ ಉಂಟುಮಾಡುವ ಮೂಲಕ ಗಳಿಸುತ್ತದೆ. ಸರ್ಕಾರವು “ವ್ಯಾಪಾರದ ವರ್ಗ ನಿಯಮಗಳನ್ನು” ರೈತ ಕೃಷಿಗೆ ವಿರುದ್ಧವಾಗಿ ಮತ್ತು ಏಕಸ್ವಾಮ್ಯ ಬಂಡವಾಳದ ಪರವಾಗಿ ತಿರುಗಿಸಿದಾಗ ಅದರ ಲಾಭ ಹೆಚ್ಚುತ್ತದೆ. ಅಲ್ಲದೆ, ಪ್ರಭುತ್ವದ ಮಧ್ಯಸ್ಥಿಕೆಯ ಮೂಲಕವೂ ಅದು ಲಾಭ ಪಡೆಯುತ್ತದೆ. ಉದಾಹರಣೆಯಾಗಿ ಹೇಳುವುದಾದರೆ, ಬಜೆಟ್‌ನಲ್ಲಿ ರೈತ ಕೃಷಿಗೆ ಒದಗಿಸುತ್ತಿದ್ದ ವಿತ್ತೀಯ ಬೆಂಬಲದ ದಿಕ್ಕನ್ನು ಏಕಸ್ವಾಮ್ಯ ಬಂಡವಾಳಶಾಹಿಗಳತ್ತ ತಿರುಗಿಸುವುದು. ಏಕಸ್ವಾಮ್ಯವಾದಿಗಳಿಗೆ ಉತ್ತೇಜನಗಳು(ಸಬ್ಸಿಡಿಗಳು) ಮತ್ತು ತೆರಿಗೆ–ರಿಯಾಯಿತಿಗಳನ್ನು ಅತಿ ಹೆಚ್ಚಿನ ಮಟ್ಟದಲ್ಲಿ ಒದಗಿಸುತ್ತಿರುವ ಸಮಯದಲ್ಲೇ, ರೈತರ ಬೆಳೆಗಳಿಗೆ ಘೋಷಿಸುವ ಬೆಂಬಲ ಬೆಲೆ ಮತ್ತು ಖರೀದಿ ಬೆಲೆಗಳ ವಿಷಯದಲ್ಲಿ ಬಿಗಿ ನಿಲುವು ತೆಗೆದುಕೊಳ್ಳುವ ಕ್ರಮವೂ ಸಹ ಏಕಸ್ವಾಮ್ಯವಾದಿಗಳಿಗೆ ಲಾಭ ಮಾಡಿಕೊಡುವ ಕ್ರಮವೇ.

ಆದರೆ, ರೈತ ಕೃಷಿಯ ಮೇಲಿನ ಅತಿಕ್ರಮಣವು ಹರಿವಿನ ರೂಪವನ್ನು (flow form) ಮಾತ್ರ ತೆಗೆದುಕೊಳ್ಳುವುದಿಲ್ಲ, ಶೇಖರಣೆಯ ರೂಪವನ್ನೂ(stock form) ಪಡೆಯುತ್ತದೆ. ಅಂದರೆ, ರೈತರಿಂದ ಆದಾಯಗಳು ಏಕಸ್ವಾಮ್ಯ ಬಂಡವಾಳದತ್ತ ಮರುಹಂಚಿಕೆಯಾಗುತ್ತವೆ (ಹರಿವಿನ ರೂಪ) ಮತ್ತು ರೈತರ ಆಸ್ತಿ–ಪಾಸ್ತಿಗಳು (ಶೇಖರಣೆಯ ರೂಪ) ಏಕಸ್ವಾಮ್ಯ ಬಂಡವಾಳದ ವಶವಾಗುತ್ತವೆ. ವಾಸ್ತವವಾಗಿ ಈ ಎರಡು ರೀತಿಯ ಅತಿಕ್ರಮಣಗಳು ಪರಸ್ಪರ ಹೆಣೆದುಕೊಂಡಿರುತ್ತವೆ. ಅವುಗಳ ಒಟ್ಟು ಪರಿಣಾಮವೆಂದರೆ, ರೈತ ಕೃಷಿಯ ನಾಶ ಮತ್ತು ವಿನಾಶಕ್ಕೊಳಗಾದ ರೈತರು ಉದ್ಯೋಗಗಳನ್ನು ಅರಸಿ ನಗರಗಳಿಗೆ ಹೋಗುವ ವಲಸೆ.

ಬಂಡವಾಳಶಾಹಿಯ ವಿಕಾಸದೊಂದಿಗೆ ಮುನ್ನೆಲೆಗೆ ಬಂದಿರುವ ಎರಡನೆಯ ಬೆಳವಣಿಗೆ ಎಂದರೆ, ನವ–ಉದಾರವಾದದ ಒಂದು ಗುಣಲಕ್ಷಣವಾದ ಅನಿರ್ಬಂಧಿತ ವ್ಯಾಪಾರದ ಜೊತೆಯಲ್ಲೇ ಬರುವ ತಾಂತ್ರಿಕ ಆವಿಷ್ಕಾರಗಳನ್ನು ಪೈಪೋಟಿಯ ಮೇಲೆ ಬಳಸುತ್ತಿರುವುದರಿಂದಾಗಿ ಉದ್ಯೋಗ ಬೆಳವಣಿಗೆಯ ದರವು ನಿಧಾನಗೊಂಡಿದೆ. ನವ–ಉದಾರವಾದಿ ಆಳ್ವಿಕೆಯಲ್ಲಿ ಜಿಡಿಪಿಯು ವೇಗವಾಗಿ ಬೆಳೆಯುತ್ತಿದ್ದಾಗಲೂ ಸಹ, ಶ್ರಮ ಉತ್ಪಾದಕತೆಯ ದರವು ಎಷ್ಟು ಮಟ್ಟಿಗೆ ಹೆಚ್ಚಾಗುತ್ತದೆ ಎಂದರೆ, ಉದ್ಯೋಗ ಬೆಳವಣಿಗೆಯು ತೀರಾ ಅಂದರೆ ತೀರಾ ಮಂದಗತಿಗೆ ಇಳಿಯುತ್ತದೆ. ಜಿಡಿಪಿ ಬೆಳವಣಿಗೆಯು ವೇಗಗೊಳ್ಳದಿದ್ದ ಪಕ್ಷದಲ್ಲಿ, ಉದ್ಯೋಗ ಬೆಳವಣಿಗೆಯು ನೆಲ ಕಚ್ಚುತ್ತದೆ.

ಈ ವಿದ್ಯಮಾನವು ಏನನ್ನು ಸೂಚಿಸುತ್ತದೆ ಎಂದರೆ, ನಗರಗಳಿಗೆ ರೈತರ ಯಾತನಾಮಯ ವಲಸೆಯು ಹೆಚ್ಚಾದಂತೆ, ಕಾರ್ಮಿಕರ ಮೀಸಲು ಪಡೆಯ ಗಾತ್ರ ಮಾತ್ರ ಹೆಚ್ಚುತ್ತದೆ. ಈ ವಿದ್ಯಮಾನವು ಯೂನಿಯನ್‌ಗಳ ಮೂಲಕ ತಮ್ಮ ಸ್ಥಿತಿ–ಗತಿಗಳಲ್ಲಿ ಉನ್ನತಿ ಪಡೆಯಲೆತ್ನಿಸುವ ಕಾರ್ಮಿಕರ ಸಣ್ಣ ವಿಭಾಗದ ಚೌಕಾಶಿಯ ಸಾಮರ್ಥ್ಯವನ್ನೂ ಸಹ ದುರ್ಬಲಗೊಳಿಸುತ್ತದೆ. ಕಾರ್ಮಿಕರ ಈ ಮೀಸಲು ಪಡೆಯು ನಿರ್ದಿಷ್ಟ ವ್ಯಕ್ತಿಗಳ ನಿರುದ್ಯೋಗದ ರೂಪವನ್ನು ಪಡೆಯುವುದಿಲ್ಲ, ಬದಲಿಗೆ ನಿರುದ್ಯೋಗದ ಹಂಚಿಕೆಯ ರೂಪವನ್ನು ಪಡೆಯುತ್ತದೆ. ಹೇಗೆಂದರೆ, ಒಂದು ನಿರ್ದಿಷ್ಟ ಪ್ರಮಾಣದ ಕೆಲಸವನ್ನು ಹೆಚ್ಚು ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳ ನಡುವೆ ಹಂಚಲಾಗುತ್ತದೆ. ಹಾಗಾಗಿ, ರೈತ ಕೃಷಿಯನ್ನು ’ ಹಿಂಡುವುದರ ಫಲಿತಾಂಶವು ಸಮಸ್ತ ದುಡಿಯುವ ಜನತೆಯ ಸ್ಥಿತಿ–ಗತಿಗಳನ್ನು ಸಂಪೂರ್ಣವಾಗಿ ಹದಗೆಡಿಸುತ್ತದೆ.

ದುಡಿಯುವ ಜನರಿಗೆ ಎದುರಾಗುವ ಈ ಪರಿಸ್ಥಿತಿಯು ಏಕಸ್ವಾಮ್ಯ ಬಂಡವಾಳಶಾಹಿಯ ಸಮಕಾಲೀನ ಹಂತವನ್ನು ಮೀರುವ ಹೋರಾಟದಲ್ಲಿ ರೈತ–ಕಾರ್ಮಿಕ ಮೈತ್ರಿಯ ಅಗತ್ಯವನ್ನು ಇನ್ನಷ್ಟು ಪುಷ್ಟೀಕರಿಸುತ್ತದೆ. ಬಹಳ ಮುಖ್ಯವಾಗಿ, ಏಕಸ್ವಾಮ್ಯ ಬಂಡವಾಳಶಾಹಿಯ ಈ ಹಂತವನ್ನು ಮೀರುವುದೆಂದರೆ, ಹಿಂದಿನ ಯಾವುದೊ ಕಾಲದ ಪೈಪೋಟಿ ಬಂಡವಾಳಶಾಹಿಯ ಯುಗಕ್ಕೆ ಮರಳುವುದು ಎಂದರ್ಥವಲ್ಲ. ಆದ್ದರಿಂದ, ಈ ರೈತ–ಕಾರ್ಮಿಕ ಮೈತ್ರಿಯು ಬಂಡವಾಳಶಾಹಿಯನ್ನು ಮೀರಿ ಹೋಗುವ ಪ್ರಕ್ರಿಯೆಗೆ ಸಮಾನವೆಂದೇ ಹೇಳಬಹುದು.

ಈ ಅರ್ಥದಲ್ಲಿ, ಭಾರತದಲ್ಲಿ ಪ್ರಸ್ತುತ ನಡೆಯುತ್ತಿರುವ ರೈತರ ಹೋರಾಟವು ನಿರ್ಣಾಯಕ ಮಹತ್ವ ಉಳ್ಳದ್ದಾಗಿದೆ. ರೈತಾಪಿಯು ವಿರೋಧಿಸುತ್ತಿರುವ ಮೂರೂ ಕಾನೂನುಗಳೂ, ರೈತ ಕೃಷಿಯನ್ನು ಏಕಸ್ವಾಮ್ಯ ಬಂಡವಾಳದ ಅತಿಕ್ರಮಣಕ್ಕಾಗಿ ತೆರೆದಿಡಲು ಉದ್ದೇಶಿಸಿವೆ. ಈ ಮೂರೂ ಕೃಷಿ ಕಾನೂನುಗಳನ್ನು ಶಾಸನಬದ್ಧಗೊಳಿಸುವ ಮೊದಲು ಮೋದಿ ಸರ್ಕಾರವು ಕಾರ್ಮಿಕರ ಸಂಘಟನೆಗಳನ್ನು ದುರ್ಬಲಗೊಳಿಸುವ ಮತ್ತು ಕಾರ್ಮಿಕರ ಶೋಷಣೆಯ ಮಟ್ಟವನ್ನು ಹೆಚ್ಚಿಸಲು ಕಾರಣವಾಗುವ ಕಾರ್ಮಿಕ ವಿರೋಧಿ ಶಾಸನವನ್ನು ಜಾರಿಗೆ ತಂದಿತ್ತು. ಆದ್ದರಿಂದ, ಇಂದಿನ ಜಗತ್ತಿನ ರೈತ–ಕಾರ್ಮಿಕ ಮೈತ್ರಿಯು, ರೈತರ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳ ಈಡೇರಿಕೆಗಾಗಿ ಕಾರ್ಮಿಕ ವರ್ಗದ ನಾಯಕತ್ವದಲ್ಲಿ ಭೂಮಾಲಕ ಪದ್ಧತಿಯ ವಿರುದ್ಧ ಹೋರಾಡಲು ಮಾತ್ರವಲ್ಲ, ಬಂಡವಾಳಶಾಹಿಯು ತಲುಪಿರುವ ಪ್ರಸಕ್ತ ಹಂತದಲ್ಲಿ ದುಡಿಯುವ ವರ್ಗ ಮತ್ತು ರೈತರ ಭವಿಷ್ಯಗಳು ಬಿಡಿಸಲಾಗದ ರೀತಿಯಲ್ಲಿ ಪರಸ್ಪರ ಹೊಸೆದು ಕೊಂಡಿರುವುದರಿಂದ ಮತ್ತು ರೈತರು ಮತ್ತು ಕಾರ್ಮಿಕರು ಇಬ್ಬರೂ ಅಂತರರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ಅದರ ಘಟಕವಾದ ದೇಶೀಯ ಏಕಸ್ವಾಮ್ಯ ಬಂಡವಾಳಶಾಹಿಗಳ ಆಕ್ರಮಣಕ್ಕೆ ಬಲಿಯಾಗಿರುವುದರಿಂದ ಅವುಗಳ ವಿರುದ್ಧ ಹೋರಾಡಲು ರೈತ–ಕಾರ್ಮಿಕ ಮೈತ್ರಿಯು ಅನಿವಾರ್ಯವಾಗಿದೆ.

ಇಂದಿನ ರೈತ ಹೋರಾಟವು ಒಂದು ಸಾಮಾನ್ಯ ಹೋರಾಟವಲ್ಲ. ಇದು “ಕೊಡುಕೊಳುವ”(ಪರಸ್ಪರ ರಿಯಾಯಿತಿಯ) ಮೂಲಕ ಪರಿಹರಿಸಿಕೊಳ್ಳಬಹುದಾದ ಇದೋ ಅಥವಾ ಅದೋ ಆರ್ಥಿಕ ಬೇಡಿಕೆಯ ಹೋರಾಟವಲ್ಲ. ಇದು, ಸದ್ಯದ ಸಂದಿಗ್ಧ ಪರಿಸ್ಥಿತಿಯ ಮೂಲವನ್ನೇ ಅಲುಗಾಡಿಸುವ ಹೋರಾಟವಾಗಿದೆ. ಇದು, ಮಾಡು ಇಲ್ಲವೇ ಮಡಿ ಹೋರಾಟ. ರೈತರ ಈ ಹೋರಾಟವು ಸರ್ಕಾರವನ್ನು ಇಕ್ಕಟ್ಟಿನಲ್ಲಿ ಇರಿಸುತ್ತದೆ, ಈ ಸರ್ಕಾರವು ಜನರೊಂದಿಗೆ ನಿಲ್ಲುತ್ತದೆಯೋ ಅಥವಾ ದೊಡ್ಡ ಅಂತಾರಾಷ್ಟ್ರೀಯ ಉದ್ಯಮಗಳೊಂದಿಗೆ ನಿಲ್ಲುತ್ತದೆಯೋ ಎಂಬುದನ್ನು ಬಹಿರಂಗವಾಗಿ ಘೋಷಿಸಬೇಕಾಗಿ ಬಂದಿರುವ ಇಕ್ಕಟ್ಟಿನಲ್ಲಿ ಇರಿಸಿದೆ. ಇಲ್ಲಿಯ ವರೆಗೆ ಸರ್ಕಾರವು ಮಾಡಿದ ಹಾಗೆ, ಮುಂದೆಯೂ ಅಂತಾರಾಷ್ಟ್ರೀಯ ದೊಡ್ಡ ಉದ್ಯಮಗಳೊಂದಿಗೆ ಬಹಿರಂಗವಾಗಿ ನಿಂತರೆ, ಅದು ದೇಶದಲ್ಲಿ ಪ್ರಜಾಪ್ರಭುತ್ವಕ್ಕೆ ಕೊಡುವ ಬಹು ದೊಡ್ಡ ಹೊಡೆತವಾಗುತ್ತದೆ.

ಪುಟ 11 ರಿಂದ

ಮಲಬಾರ್ ಬಂಡಾಯ-1921

ಹತ್ತಿಕ್ಕಲಾಯಿತು. ಅಲಿ ಮುಸಲಿಯಾರ್ ಮತ್ತು ವರಿಯಂಕುನ್ನತ್ ಕುಂಜಹಮ್ಮದ್ ಹಾಜಿ ಸೇರಿದಂತೆ ಎಲ್ಲ ಖಿಲಾಫತ್ ನಾಯಕರನ್ನು ಗಲ್ಲಿಗೇರಿಸಲಾಯಿತು. ಹಲವಾರು ಬಂಡುಕೋರರನ್ನು ಅಂಡಮಾನ್ ದ್ವೀಪಗಳಿಗೆ ಗಡೀಪಾರು ಮಾಡಲಾಯಿತು. ವಿವಿಧ ಪೊಲೀಸ್ ಕ್ರೌರ್ಯಾಚರಣೆಗಳಲ್ಲಿ ಸಾವನ್ನಪ್ಪಿದ ಜನರ ಸಂಖ್ಯೆಯನ್ನು ಅಂದಾಜಿಸಲಾಗಿಲ್ಲ, ಮತ್ತು ಎಲ್ಲಾ ಸ್ಥಳೀಯ ದಾಖಲೆಗಳು ಬ್ರಿಟಿಷ್ ಅಧಿಕೃತ ವರದಿಗಳು ಈ ಪ್ರದೇಶದಲ್ಲಿ ಪೊಲೀಸ್ ಮತ್ತು ಮಿಲಿಟರಿ ಕ್ರಮದ ಪರಿಣಾಮವನ್ನು ಇಳಿಸಿ ತೋರಿಸಿವೆ ಎಂಬುದಕ್ಕೆ ಸಾಕ್ಷಿಯಿದೆ. ಒಂದು ಭೀಕರ ಘಟನೆಯಲ್ಲಿ, ಕರಿಂಪನಾಳ್ ಹಳ್ಳಿಯ ಸುಮಾರು 90 ಜನರನ್ನು ರೈಲು ವ್ಯಾಗನ್‌ಗೆ ತಳ್ಳಲಾಯಿತು ಮತ್ತು ಅವರನ್ನು ಕೋಯಿಂಬತ್ತೂರು ಸಮೀಪದ ಪೊದನೂರಿಗೆ ಕರೆದೊಯ್ಯಲಾಯಿತು. ಬಂಡಿಯನ್ನು ತೆರೆದಾಗ ಬಹುತೇಕ ಎಲ್ಲರೂ ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ ಎಂದು ಕಂಡುಬಂದಿತು. ಉಳಿದವರು ಶೀಘ್ರದಲ್ಲೇ ಸಾವಪ್ಪಿದರು. ನವೆಂಬರ್ 2021 ರ ವೇಳೆಗೆ ಬಂಡಾಯವು ಹೊಸಕಿಹಾಕಲ್ಪಟ್ಟಿತು.

ಬಂಡಾಯ ಕುರಿತು ವಾಗ್ವಾದ:

ಬಂಡಾಯ ಪ್ರದೇಶಗಳ ಮಾಹಿತಿಯನ್ನು ಸಂಪೂರ್ಣವಾಗಿ ನಿರ್ಬಂಧಿಸಿದ ಅವಧಿಯಲ್ಲಿ, ಹೊರಗಿನವರು ಅಧಿಕೃತ ಮೂಲಗಳು ಮತ್ತು ಪ್ರದೇಶದಿಂದ ಪಲಾಯನ ಮಾಡುವ ಜನರಿಂದ ಬರುವ ವದಂತಿಗಳನ್ನೇ ಅವಲಂಬಿಸಬೇಕಾಗಿತ್ತು. ಬ್ರಿಟಿಷ್ ಆಡಳಿತದ ಅಧಿಕಾರಿಗಳಾದ ಇ ಎಫ್ ಥಾಮಸ್ ಮತ್ತು ಟೊಟೆನ್ಹಾಮ್ ಬಂಡಾಯಕ್ಕೆ ಕೋಮುವಾದಿ ಬಣ್ಣವನ್ನು ನೀಡುವಂತೆ ಮಾಡಿದರು, ಅದನ್ನು ಬ್ರಿಟಿಷರು ಮತ್ತು ಹಿಂದೂಗಳ ವಿರುದ್ಧ ಮುಸ್ಲಿಂ ಧಾರ್ಮಿಕ ದಂಗೆಯಾಗಿ, ಪ್ರಸ್ತುತಪಡಿಸಿದರು. ಹಿಂಸಾಚಾರ ಮತ್ತು ಭೂಮಾಲೀಕರ ಮನೆಗಳ ಲೂಟಿಯ ಘಟನೆಗಳನ್ನು, ವಿಶೇಷವಾಗಿ ದಂಗೆಯ ಅಂತ್ಯದ ಸಮಯದಲ್ಲಿ ಅವರ ವಾದಗಳಿಗೆ ಸಾಕ್ಷಿಯಾಗಿ ಪ್ರಸ್ತುತಪಡಿಸಲಾಯಿತು. ಬಂಡಾಯದ ಕೇಂದ್ರಗಳಲ್ಲಿ ಒಂದಾದ ಮಂಜೇರಿ ಮೂಲದ ಕೆ ಮಾಧವನ್ ನಾಯರ್ ನೇತೃತ್ವದ ಕಾಂಗ್ರೆಸ್ ನಾಯಕರು ಬಂಡಾಯವನ್ನು ರಾಷ್ಟ್ರೀಯವಾದಿ ಎಂದು ಪರಿಗಣಿಸಿದರು, ಆದರೆ ಅವರು ಕಾಂಗ್ರೆಸ್‌ನಲ್ಲಿ ಅಲ್ಪಸಂಖ್ಯಾತರಾಗಿದ್ದರು ಏಕೆಂದರೆ ಅವರಲ್ಲಿ ಹೆಚ್ಚಿನವರು ಬಂಡಾಯವನ್ನು ಹಿಂದುಗಳ ವಿರುದ್ಧವಾಗಿ ಪರಿಗಣಿಸಿದರು. 1934 ರ ಸಮಯದಲ್ಲಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಸದಸ್ಯರಾಗಿದ್ದ ಸೌಮ್ಯೇಂದ್ರನಾಥ ಟಾಗೋರ್ ಅವರು ಬಂಡಾಯವನ್ನು ರೈತ ಬಂಡಾಯವೆಂದು ಪರಿಗಣಿಸಿದವರಲ್ಲಿ ಮೊದಲಿಗರು.

1946 ರ ಸಮಯದಲ್ಲಿ, ದಂಗೆಯ 25 ನೇ ವಾರ್ಷಿಕೋತ್ಸವದಂದು, ಕಮ್ಯುನಿಸ್ಟ್ ಪಕ್ಷವು ಇಎಂಎಸ್ ನಂಬೂದ್ರಿಪಾದ್ ಅವರು ರಚಿಸಿದ ಒಂದು ದಸ್ತಾವೇಜನ್ನು ಹೊರತಂದಿತು, ಇದನ್ನು 'ಆಹ್ವಾನ ಮತ್ತು ಎಚ್ಚರಿಕೆ' ಎಂದು ಹೆಸರಿಸಲಾಗಿತ್ತು. ಈ ದಸ್ತಾವೇಜು ಬಂಡಾಯ ನಡೆದ ಐತಿಹಾಸಿಕ ಸನ್ನಿವೇಶಗಳನ್ನು ವಿಶ್ಲೇಷಿಸಿತು, ಇದರಲ್ಲಿ ಏರನಾಡಿನ ಮಾಪ್ಪಿಳ ರೈತರು ಭೂಮಾಲೀಕರು ಮತ್ತು ಬ್ರಿಟಿಷ್ ವಸಾಹತುಶಾಹಿಗಳಿಂದ ದಮನಕ್ಕೊಳಗಾದವರು, ಅವರಿಗೆ ಮತ್ತು ದಬ್ಬಾಳಿಕೆಗಾರರ ವಿರುದ್ಧ ದಂಗೆ ಏಳುವುದನ್ನು ಬಿಟ್ಟು ಬೇರೆ ದಾರಿಯಿರಲಿಲ್ಲ. ಖಿಲಾಫತ್ ಮತ್ತು ರಾಷ್ಟ್ರೀಯ ಚಳುವಳಿಯು ನೀಡಿದ ಪ್ರಚೋದನೆಯು ಅವರಿಗೆ ಬಂಡಾಯವನ್ನು ಸಂಘಟಿಸಲು ಅಗತ್ಯವಾದ ಸಂಪನ್ಮೂಲಗಳನ್ನು ಒದಗಿಸಿತು. ಆದಾಗ್ಯೂ, ಖಿಲಾಫತ್ ನಾಯಕರ ಬಂಧನ ಮತ್ತು ಮರಣದಂಡನೆಯೊಂದಿಗೆ, ಚಳುವಳಿ ಚದುರಿಹೋಗಲು ಪ್ರಾರಂಭಿಸಿತು, ಅಗತ್ಯ ಕಣ್ಣೋಟ ಮತ್ತು ಸಂಪನ್ಮೂಲಗಳಿದ್ದ ನಾಯಕರ ಕೊರತೆಯಿಂದಾಗಿ ಬಂಡಾಯಗಾರರ ನಡುವೆ ನುಸುಳಿದ ಅರಾಜಕತಾವಾದಿ ಕೋಮುವಾದಿಗಳು ಹಿಂದುಗಳ ವಿರುದ್ಧ ದಂಗೆಯನ್ನು ತಿರುಗಿಸುವಲ್ಲಿ ಯಶಸ್ವಿಯಾದರು. ಹೀಗಾಗಿ ಭೂಮಾಲೀಕರು ಮತ್ತು ಬ್ರಿಟಿಷ್ ರಾಜ್ಯಭಾರದ ವಿರುದ್ಧ ನಡೆದ ಒಂದು ದೊಡ್ಡ ಬಂಡಾಯವು ಕೊನೆಗೆ ಕೋಮು ಹಿಂಸಾಚಾರಕ್ಕೆ ಇಳಿಯಿತು. ದಸ್ತಾವೇಜು ಈ ಬಂಡಾಯವನ್ನು ರೈತ ಹೋರಾಟಗಳನ್ನು ನಡೆಸುವುದು ಹೇಗೆ ಎಂಬುದಕ್ಕೆ ಒಂದು ಪ್ರಕರಣದ ಅಧ್ಯಯನ(ಕೇಸ್ ಸ್ಟಡಿ) ಎಂದು ಹೇಳಿತು. ಅಲ್ಲದೆ ಇಂತಹ ಹೋರಾಟವನ್ನು ಯಾವುದೇ ರೀತಿಯ ನಿಯಂತ್ರಣ ಮತ್ತು ದಬ್ಬಾಳಿಕೆಯಿಂದ ಮಾತ್ರವಲ್ಲ, ವಿಭಜಕ ಪ್ರಯತ್ನಗಳಿಂದಲೂ ಮುಕ್ತವಾಗಿಡಲು ರಾಜಕೀಯವಾಗಿ ಸುಸಂಗತವಾದ ಸಂಘಟನೆ ಮತ್ತು ನಾಯಕತ್ವದ ಅವಶ್ಯಕತೆ ಇದೆಂಬುದನ್ನು ಇದು ತೋರಿಸುತ್ತದೆ ಎಂದೂ ಹೇಳಿತು.

ಇಂದಿನ ವಿವಾದ:

ಮಲಬಾರ್ ದಂಗೆಯ ನಂತರದಲ್ಲಿ ಕಾನ್ರಾಡ್ ವುಡ್, ರಾಬರ್ಟ್ ಎಲ್ ಹಾರ್ಡ್‌ಗ್ರೇವ್ ಮತ್ತು ಕೆ ಎನ್ ಪಣಿಕ್ಕರ್ ಅವರಂತಹ ವಿದ್ವಾಂಸರಿಂದ ನಡೆದ ಸಂಶೋಧನೆಯು ಮಲಬಾರ್ ದಂಗೆಯ ಕುರಿತು ಕಮ್ಯುನಿಸ್ಟ್ ಪಕ್ಷವು ತೆಗೆದುಕೊಂಡ ನಿಲುವನ್ನು ಸಮರ್ಥಿಸಿದೆ. ಆದಾಗ್ಯೂ, ಸ್ಟೀಫನ್ ಡೇಲ್ ನಂತಹ ಕೆಲವು ವಿದ್ವಾಂಸರು ಬಂಡಾಯವನ್ನು ಪ್ರಚೋದಿಸುವಲ್ಲಿ ಮಾಪ್ಪಿಳ ಮುಸ್ಲಿಂ ಪ್ರಜ್ಞೆ ಪಾತ್ರ ವಹಿಸಿತು ಎಂದು ಒತ್ತಿ ಹೇಳಿದ್ದಾರೆ. ಇಸ್ಲಾಮ್‌ವಾದಿ ನಿಲುವಿಗೆ ಸಹಾನುಭೂತಿ ಹೊಂದಿರುವ ಕೆಲವು ವಿದ್ವಾಂಸರು ಕೂಡ ಬಂಡಾಯವನ್ನು ಹುಟ್ಟುಹಾಕುವ ರಾಜಕೀಯ ಪ್ರಜ್ಞೆಯನ್ನು ರೂಪಿಸಿದ 'ಮುಸ್ಲಿಂ ಮನಃಸ್ಥಿತಿಯ' ಬಗ್ಗೆ ಮಾತನಾಡಿದ್ದಾರೆ. ಆರೆಸ್ಸೆಸ್ ಅಂತಹ ವಾದಗಳನ್ನು ತಮ್ಮ ಇಸ್ಲಾಮಿಕ್ ವಿರೋಧಿ ಪ್ರಚಾರವನ್ನು ಹೆಚ್ಚಿಸಲು ಒಂದು ಅವಕಾಶವಾಗಿ ಬಳಸಿಕೊಳ್ಳುತ್ತಿದೆ. ಈ ಮೂಲಕ ಈ ಬಂಡಾಯ ಭಾರತದಲ್ಲಿ ಇಸ್ಲಾಮಿಕ್ ಪ್ರಭುತ್ವವನ್ನು ಸ್ಥಾಪಿಸುವ ಪ್ರಯತ್ನ ಎಂಬ ತಮ್ಮ ಹಳೆಯ ವಾದಕ್ಕೆ ಮತ್ತೆ ಜೀವ ತುಂಬುತ್ತಿದ್ದಾರೆ. ಮಲಬಾರ್ ಬಂಡಾಯವನ್ನು ಅವರು 'ಹಿಂದೂ ಧರ್ಮ ಅಪಾಯದಲ್ಲಿದೆ' ಎಂಬ ಕೂಗನ್ನು ಹಬ್ಬಿಸಲು ಮತ್ತು ಗುಜರಾತ್ ಮತ್ತು ಮಹಾರಾಷ್ಟ್ರದಲ್ಲಿ ಹಿಂದೂ ಸಂರಕ್ಷಣಾ ಸಮಿತಿಗಳನ್ನು ರಚಿಸಲು ಒಂದು ನೆಪವಾಗಿ ಬಳಸಿದರು ಎನ್ನುವುದನ್ನು ಮರೆಯಬಾರದು. ಸ್ವತಃ ಆರ್‌ಎಸ್‌ಎಸ್ ಇಂತಹ ಒಂದು ಪ್ರಚೋದನೆಯ ಉತ್ಪನ್ನವಾಗಿದೆ. ಬಂಡಾಯದ ಸಮಯದಲ್ಲಿ ಮುಗಿಸಿಬಿಟ್ಟ ಮತ್ತು ಮರಣದಂಡನೆಗೆ ಗುರಿಯಾದ ಮಲಬಾರ್ ಬಂಡಾಯಗಾರರ ಹೆಸರುಗಳನ್ನು ಅಳಿಸಿಹಾಕುವ ಐಸಿಎಚ್‌ಆರ್ ನ ಪ್ರಯತ್ನ ಬ್ರಿಟಿಷ್ ದಬ್ಬಾಳಿಕೆಯ ವಿರುದ್ಧದ ಹೋರಾಟದಲ್ಲಿ ಬಲಿದಾನ ನೀಡಿದವರ ಹೆಸರುಗಳನ್ನು ಅಳಿಸಿಹಾಕಲು ನಡೆಸುತ್ತಿರುವ ಒಂದು ಹೀನ ಪ್ರಯತ್ನವಾಗಿದೆ.

ಐಸಿಎಚ್‌ಆರ್ ನ ಈ ನಡೆಯನ್ನು ವೈಜ್ಞಾನಿಕ ಇತಿಹಾಸಲೇಖನಶಾಸ್ತ್ರದ ಮೇಲೆ ಆರ್‌ಎಸ್‌ಎಸ್ ಆಕ್ರಮಣದ ಮುಂದುವರಿಕೆಯಾಗಿ ನೋಡಬೇಕು. ಆರ್‌ಎಸ್‌ಎಸ್ ತನ್ನ ಇತಿಹಾಸವನ್ನು ಹುಸಿಸುಳ್ಳುಗಳು ಮತ್ತು ಅರ್ಧ ಸತ್ಯಗಳ ಮೇಲೆ ಕಟ್ಟಿದ್ದು, ಅದನ್ನು ಯಾವಾಗಲೂ ಕಲ್ಪಿತ, ಕಾಲ್ಪನಿಕ ಮತ್ತು ಕಪಟದಿಂದ ಅಲಂಕರಿಸಿದೆ, ಇದನ್ನು ಅವರು ತಮ್ಮ 'ಸಾಂಸ್ಕೃತಿಕ ರಾಷ್ಟ್ರೀಯತೆ' ಎಂದು ಕರೆಯುತ್ತಾರೆ. ಅವರು ಈ ಮೋಸದ ಇತಿಹಾಸವನ್ನು ನಮ್ಮದು ಒಂದು ಹಿಂದೂರಾಷ್ಟ್ರ ಎಂಬ ರಾಷ್ಟ್ರದ ಬಗ್ಗೆ ತಮ್ಮದೇ ಆದ ಪರಿಕಲ್ಪನೆಗಳನ್ನು ಹುಟ್ಟುಹಾಕಲು ಮತ್ತು ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡಲು ಹಾಗೂ ಆರ್‌ಎಸ್‌ಎಸ್ ವಿರೋಧಿಗಳನ್ನು ರಾಷ್ಟ್ರವಿರೋಧಿಗಳು ಎಂದು ಟೀಕಿಸಲು ಬಳಸುತ್ತಿದ್ದಾರೆ. ಪ್ರಸ್ತುತ ಐಸಿಎಚ್‌ಆರ್ ನಂತಹ ಸಂಸ್ಥೆಗಳನ್ನು ಆರ್‌ಎಸ್‌ಎಸ್ ಮುಸ್ಲಿಂ ವಿರೋಧಿ ಪ್ರಚಾರಕ್ಕೆ ಮೇವು ಒದಗಿಸುವಂತೆ ಮಾರ್ಪಡಿಸಲಾಗಿದೆ. ಅಲಿ ಮುಸಲಿಯಾರ್ ಮತ್ತು ವರಿಯಂಕುನ್ನತ್ ಕುಂಜಹಮ್ಮದ್ ಹಾಜಿಯಂತಹ ಸ್ವಾತಂತ್ರ್ಯ ಹೋರಾಟಗಾರರನ್ನು ಹುತಾತ್ಮರ ಪಟ್ಟಿಯಿಂದ ತೆಗೆದುಹಾಕುವ ಮೂಲಕ, ಅದು ಆರ್‌ಎಸ್‌ಎಸ್‌ಗೆ ಈ ಬಂಡಾಯಗಾರರನ್ನು ಜಿಹಾದಿಗಳನ್ನಾಗಿ ಮಾಡಲು ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧದ ಪ್ರಬಲ ಚಳುವಳಿಗಳಲ್ಲಿ ಒಂದನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿಗಳು 'ಜಂಗಲ್ ಮಾಪ್ಪಿಳ್ಳ' ಎಂದು ಕರೆದ ಒಂದು ಕ್ರಿಮಿನಲ್ ಸಮುದಾಯ ನಡೆಸಿರುವ ವ್ಯಭಿಚಾರದ, ಅಧಃಪತನದ ದುಷ್ಕೃತ್ಯ ಎಂದು ನಿಂದಿಸಲು ಅವಕಾಶವನ್ನು ಒದಗಿಸುತ್ತಿದೆ.

ವೈಜ್ಞಾನಿಕ ತನಿಖೆಯ ಉದ್ದೇಶವು ಸತ್ಯವನ್ನು ಗ್ರಹಿಸುವುದು, ಸುಳ್ಳು ಮತ್ತು ವಿರೂಪಗಳ ಮೋಡದಿಂದ ಸತ್ಯವನ್ನು ಅನಾವರಣಗೊಳಿಸುವುದು. ಭಾರತೀಯ ಜನರು ಯಾವಾಗಲೂ ಬಹು-ಪ್ರದೇಶ, ಬಹುಸಂಸ್ಕೃತಿ ಮತ್ತು ಬಹು-ಧರ್ಮೀಯರು ಮತ್ತು ತಮ್ಮ ರಾಷ್ಟ್ರದ ಪರಿಕಲ್ಪನೆಯನ್ನು ವಿವಿಧತೆಯಲ್ಲಿ ಏಕತೆಯ ಅಡಿಪಾಯದ ಮೇಲೆ ರೂಪಿಸಿಕೊಂಡಿದ್ದಾರೆ. ಮಲಬಾರ್ ಬಂಡಾಯವು ನಡೆದದ್ದು ಸ್ಪಷ್ಟವಾದ ರಾಜಕೀಯ ದೃಷ್ಟಿಕೋನ ಮತ್ತು ಸಂಘಟನಾತ್ಮಕ ರೂಪಗಳ ಆಧಾರದ ಮೇಲೆ ಸಂಘಟಿತ ರೈತ ಹೋರಾಟಗಳು ಆಗಷ್ಟೇ ಮೂಡಿ ಬರುತ್ತಿದ್ದ ಮತ್ತು ಅಖಿಲ ಭಾರತ ಕಿಸಾನ್ ಸಭಾದಂತಹ ಪ್ರಮುಖ ರೈತ ಸಂಘಟನೆಗಳು ಇನ್ನೂ ಹುಟ್ಟಿರದಿದ್ದ ಕಾಲಘಟ್ಟದಲ್ಲಿ. ಆದ್ದರಿಂದ ಬಂಡಾಯಗಾರರು ತಮ್ಮ ಲಭ್ಯವಿದ್ದ ಸಂಪನ್ಮೂಲಗಳು ಮತ್ತು ತಮ್ಮ ಸಂಪ್ರದಾಯಗಳ ನೆಲೆಯಲ್ಲೇ ತಮ್ಮ ಭಾವನೆಗಳನ್ನು ಅಭಿವ್ಯಕ್ತಗೊಳಿಸಲು ಸಾಧ್ಯವಿತ್ತು. ಈ ಸಂಪ್ರದಾಯಗಳಲ್ಲಿ ಧರ್ಮ, ಆಧ್ಯಾತ್ಮಿಕತೆ, ಜಾನಪದ ವೀರರ ಪರಿಕಲ್ಪನೆಗಳು ಮತ್ತು ಪುರಾಣಗಳೂ ಸೇರಿರಬಹುದು. ಬಂಡಾಯಗಾರರ ಕರೆಯಾದ ಖಿಲಾಫತ್, ಖಲೀಫಾದ ಅರೆ-ಧಾರ್ಮಿಕ ಅಧಿಕಾರವನ್ನು ಪುನಃಸ್ಥಾಪಿಸುವ ಉದ್ದೇಶ ಹೊಂದಿದ್ದರೂ, ಅದರ ಬುನಾದಿ ಇದ್ದದ್ದು ಆಗ ಅಸ್ತಿತ್ವದಲ್ಲಿದ್ದ ರಾಜಕೀಯ ಪರಿಸ್ಥಿತಿಗಳಲ್ಲಿ ಎಂಬುದನ್ನು ನೆನಪಿನಲ್ಲಿಡಬೇಕು. ಅನೇಕ ಐತಿಹಾಸಿಕ ಅಧ್ಯಯನಗಳು ಹೋರಾಟಗಳು ರೂಪುಗೊಳ್ಳುವಲ್ಲಿ ಇಂತಹ ಸ್ವರೂಪಗಳ ಮಹತ್ವವನ್ನು ಪ್ರದರ್ಶಿಸಿವೆ. ಆದರೆ ಇದು ಅಂತಹ ಹೋರಾಟಗಳನ್ನು ಮಾಡಲು ಕೊಡುಗೆ ನೀಡಿದ ನೈಜ, ವಸ್ತುನಿಷ್ಠ ಪರಿಸ್ಥಿತಿಗಳನ್ನು ಗಮನಿಸುವುದರಿಂದ ನಮ್ಮನ್ನು ದಾರಿ ತಪ್ಪಿಸಬಾರದು ಮತ್ತು ಸ್ವತಂತ್ರ ಭಾರತಕ್ಕಾಗಿ ರಾಷ್ಟ್ರೀಯ ಹೋರಾಟದ ವಾಸ್ತವತೆಯನ್ನು ಕಟ್ಟುವಲ್ಲಿ ಅವುಗಳ ಮಹತ್ವವನ್ನು ಒತ್ತಿ ಹೇಳದಂತೆ ನಮ್ಮನ್ನು ತಡೆಯಬಾರದು.

ಮಲಬಾರ್ ಬಂಡಾಯದ ಈ ನಮ್ಮ ವಿಶ್ಲೇಷಣೆಯು ಈ ಹೋರಾಟವನ್ನು ರಾಷ್ಟ್ರೀಯ ಚಳವಳಿಯ ಕಕ್ಷೆಯೊಳಗೆ ದೃಢವಾಗಿ ಇರಿಸುತ್ತದೆ. ತಮ್ಮ ಪ್ರಾಣವನ್ನು ಅರ್ಪಿಸಿದ ಆ ಜನರು ಖಂಡಿತವಾಗಿ ಬ್ರಿಟಿಷ್ ದಬ್ಬಾಳಿಕೆಯಿಂದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹುತಾತ್ಮರು, ಮತ್ತು ಅವರನ್ನು ಹಾಗೆಂದೇ ನೆನಪಿಸಿಕೊಳ್ಳಬೇಕು. ಆದಾಗ್ಯೂ, ಇದು, ಹೋರಾಟಕ್ಕೆ ಕಾರಣವಾಗುವ ಪರಿಸ್ಥಿತಿಗಳು ಅದರ ಅವನತಿ ಮತ್ತು ವಿನಾಶಕ್ಕೆ ಕಾರಣವಾದ ಅಂಶಗಳನ್ನೂ ಒಳಗೊಂಡಿರುತ್ತವೆ ಎಂದು 1946 ರಲ್ಲಿ ನೀಡಲಾದ ಎಚ್ಚರಿಕೆಯನ್ನು ಕಡೆಗಣಿಸುವಂತೆ ನಮ್ಮನ್ನು ತಡೆಯಬಾರದು. ಇದನ್ನು ಇಂದಿಗೂ ರಾಜಕೀಯ ಚಳುವಳಿ ನೆನಪಿಟ್ಟುಕೊಳ್ಳಬೇಕಾಗಿದೆ.

ಜಾತಿ ಜನಗಣತಿಗೆ ಮೋದಿ ಸರಕಾರದ ನಿರಾಕರಣೆ

ಪುಟ 12 ರಿಂದ

ಸಂದರ್ಭಗಳಲ್ಲಿ ನ್ಯಾಯಾಲಯಗಳು ಸರ್ಕಾರಗಳ ನಿರ್ಧಾರಗಳನ್ನು ತಿರಸ್ಕರಿಸುತ್ತಿದ್ದು ಅವುಗಳನ್ನು ಪರಿಶೀಲಿಸಬಹುದಾದ ದತ್ತಾಂಶದ ಆಧಾರದಲ್ಲಿ ತೆಗೆದುಕೊಳ್ಳಲಾಗಿಲ್ಲ ಎಂದು ಹೇಳುತ್ತಿವೆ. ಜಾತಿ ಗಣತಿಯನ್ನು ನಡೆಸಿದರೆ, ನ್ಯಾಯಾಲಯಗಳು ತಾಂತ್ರಿಕ ಆಧಾರದ ಮೇಲೆ ಪ್ರಕರಣಗಳನ್ನು ಬರ್ಖಾಸ್ತು ಮಾಡಲು ಸಾಧ್ಯವಿಲ್ಲ. ಇದಲ್ಲದೆ, ಜಾತಿ ಗಣತಿಯು ಜಾತಿ ಮತ್ತು ಸಾಮಾಜಿಕ-ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿಯ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಆಳುವ ವರ್ಗಗಳ ಇದುವರೆಗಿನ ನೀತಿಗಳ ಮತ್ತು ಮೀಸಲಾತಿಗಳ ಮೌಲ್ಯಮಾಪನ ಮಾಡಲು ಸಹಾಯ ಮಾಡುತ್ತದೆ. ಎಸ್‌ಸಿ, ಎಸ್‌ಟಿ ಮತ್ತು ಕೆಲವು ಒಬಿಸಿ ಜಾತಿ ಸಮುದಾಯಗಳಿಗೆ ಇನ್ನೂ, ಸಂಪನ್ಮೂಲಗಳುಮತ್ತು ಅವಕಾಶಗಳನ್ನು ಲಭ್ಯತೆಯನ್ನು ನಿರಾಕರಿಸಲಾಗಿರುವ ವಾಸ್ತವತೆಯು ಜಾತಿ ಗಣತಿಯ ಮೂಲಕ ಹೊರಬರುತ್ತದೆ. ಆಳುವ ವರ್ಗಗಳ ದಿವಾಳಿಕೋರ ನೀತಿಗಳು ಮತ್ತು ಸಾಮಾಜಿಕ ನ್ಯಾಯವನ್ನು ಈಡೇರಿಸುವಲ್ಲಿ ಅವರ ವೈಫಲ್ಯ ಬಯಲಿಗೆ ಬರುತ್ತದೆ.

ಆದಾಗ್ಯೂ, ಕೆಲವು ರಾಜಕೀಯ ಪಕ್ಷಗಳು ಮತ್ತು ವ್ಯಕ್ತಿಗಳು ಜಾತಿ ಗಣತಿಯನ್ನು ಸಾಮಾಜಿಕ ನ್ಯಾಯದ ಸಾಕ್ಷಾತ್ಕಾರ ಮಾಡಿಸುವ ಒಂದು ಮಾಂತ್ರಿಕ ಗುಳಿಗೆ ಮತ್ತು ದುರ್ಬಲ ವರ್ಗಗಳು ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಒಂದು ಪರಿಹಾರ ಎಂದು ಬಿಂಬಿಸುತ್ತಿದ್ದಾರೆ ಎಂಬ ಬಗ್ಗೆ ನಾವು ಜಾಗರೂಕರಾಗಿರಬೇಕು. ಎಸ್‌ಸಿ ಮತ್ತು ಎಸ್‌ಟಿಗಳ ಜಾತಿ/ಜನಾಂಗೀಯ ಮಾಹಿತಿ ಲಭ್ಯವಿದೆ, ಆದರೂ, ಸ್ವಾತಂತ್ರ್ಯದ ಏಳು ದಶಕಗಳ ನಂತರವೂ ಸಾಮಾಜಿಕ ನ್ಯಾಯವನ್ನು ಪಡೆಯುವಲ್ಲಿ ಅವರ ಅನುಭವ ಶೋಚನೀಯವಾಗಿದೆ. ಇದು ಸಾಮಾಜಿಕ ನ್ಯಾಯಕ್ಕೆ ಧಕ್ಕೆ ತರುವ ನೀತಿಗಳತ್ತ ನಮ್ಮ ಗಮನ ಸೆಳೆಯಬೇಕು.

ನವ ಉದಾರವಾದಿ ನೀತಿಗಳ ಅನುಷ್ಠಾನದ ನಂತರ, ವಿಶೇಷವಾಗಿ ಮೋದಿ ನೇತೃತ್ವದ ಬಿಜೆಪಿ ಅಧಿಕಾರಕ್ಕೆ ಬಂದ ನಂತರವಂತೂ ಖಾಸಗೀಕರಣ, ನಗದೀಕರಣ, ಸಬ್ಸಿಡಿಗಳು ಮತ್ತು ಕಲ್ಯಾಣ ಯೋಜನೆಗಳಲ್ಲಿ ಭೂ ಸುಧಾರಣೆ ಶಾಸನವನ್ನು ದುರ್ಬಲಗೊಳಿಸುವುದು, ಬಡ ಮತ್ತು ಮಧ್ಯಮ ರೈತರನ್ನು ದಿವಾಳಿತನಕ್ಕೆ ತಳ್ಳುವ ಹೊಸ ಕೃಷಿ ಕಾನೂನುಗಳನ್ನು ತರುತ್ತಿರುವುದು ಮತ್ತಿತರ ನೀತಿಗಳು ಮೀಸಲಾತಿಯ ಉಪಯುಕ್ತತೆಯನ್ನು ತೀವ್ರವಾಗಿ ಕಡಿಮೆ ಮಾಡಿವೆ ಮತ್ತು ಕಲ್ಯಾಣ ಯೋಜನೆಗಳ ಮಹತ್ವವನ್ನು ಮೊಟಕುಗೊಳಿಸಿವೆ. ಇಂತಹ ನೀತಿಗಳ ವಿರುದ್ಧ ಹೋರಾಟ ಮಾಡದೆ, ಜಾತಿ ಗಣತಿ ನಡೆಸಿದರೂ, ಒಬಿಸಿಗಳ ಬದುಕುಗಳಲ್ಲಿ ಒಂದು ದೊಡ್ಡ ಬದಲಾವಣೆಯಾಗುತ್ತದೆ ಎಂಬ ಭ್ರಮೆಯಲ್ಲಿ ನಾವು ಇರಬಾರದು.

ಅದೇ ಸಮಯದಲ್ಲಿ, ಜಾತಿ ಗಣತಿಯಿಂದ ಯಾವುದೇ ಪ್ರಯೋಜನವಿಲ್ಲ ಎಂದು ನಾವು ಭಾವಿಸಬಾರದು. ವಿವಿಧ ಜಾತಿಗಳ ಸ್ಥಿತಿಗಳ ಬಗ್ಗೆ ಅಧಿಕೃತ ಮತ್ತು ವೈಜ್ಞಾನಿಕ ಮಾಹಿತಿಯ ಲಭ್ಯತೆಯು ವಾಸ್ತವ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಮತ್ತು ಸಾಮಾಜಿಕ ನ್ಯಾಯದ ಸಾಕ್ಷಾತ್ಕಾರಕ್ಕಾಗಿ ಪರ್ಯಾಯ ನೀತಿಗಳನ್ನು ಪ್ರಸ್ತಾಪಿಸಲು ಸಹಾಯ ಮಾಡುತ್ತದೆ. ಜಾತಿ ಜನಗಣತಿಯಿಂದ ನಾವು ಪಡೆಯುವ ಮಾಹಿತಿಯು ದುರ್ಬಲ ವರ್ಗಗಳು ಜಾತಿ ಅಸ್ಮಿತೆಯ ಪ್ರಜ್ಞೆಯ ಮಿತಿಯನ್ನು ಮತ್ತು ವರ್ಗ ಪ್ರಜ್ಞೆಯನ್ನು ಅಭಿವೃದ್ಧಿಪಡಿಸುವ ಅಗತ್ಯವನ್ನು ಅರಿತುಕೊಳ್ಳಲು ಸಹಾಯ ಮಾಡುತ್ತದೆ. ಈ ಕಾರಣಕ್ಕಾಗಿಯೇ ನಾವು ಜಾತಿ ಗಣತಿಯನ್ನು ಬಯಸುತ್ತೇವೆ, ಅದರ ಮೂಲಕ ಯಾವುದೇ ಪವಾಡಗಳು ಸಂಭವಿಸುತ್ತವೆ ಎಂದು ನಾವು ನಿರೀಕ್ಷಿಸದಿದ್ದರೂ ಸಹಾ, ಜಾತಿ ಗಣತಿಯಿಂದ ಪಡೆಯಬಹುದಾದ ನೈಜ ದತ್ತಾಂಶವನ್ನು ಸಾಮಾಜಿಕ ನ್ಯಾಯಕ್ಕಾಗಿ ನಮ್ಮ ಹೋರಾಟದಲ್ಲಿ ಅಸ್ತ್ರವಾಗಿ ಬಳಸಬಹುದು.

ಇಂದಿಗೂ ಸ್ವತ್ತುಗಳು ಮತ್ತು ಸಂಪತ್ತು ಪ್ರಬಲರ ಮತ್ತು ಮೇಲ್ಜಾತಿಗಳ ಕೈಗಳಲ್ಲಿಯೇ ಕೇಂದ್ರೀಕೃತವಾಗಿದೆ. ಎಸ್ಸಿ, ಎಸ್ಟಿ ಮತ್ತು ಒಬಿಸಿಗಳಲ್ಲಿ ಹೆಚ್ಚಿನವರು ಇನ್ನೂ ಬಡವರಾಗಿ ಉಳಿದಿದ್ದಾರೆ ಮತ್ತು ಕಾರ್ಮಿಕರಾಗಿ ಬದುಕುತ್ತಿದ್ದಾರೆ. ಜಾತಿ ದಬ್ಬಾಳಿಕೆ ಇನ್ನೂ ವ್ಯಾಪಕವಾಗಿ ಚಾಲ್ತಿಯಲ್ಲಿದೆ. ಕೆಲವರೇ ಭೂಮಿಯನ್ನು ಹೊಂದಿರುವ ಸನ್ನಿವೇಶವನ್ನು ಮುರಿಯದೆ ಮತ್ತು ಎಲ್ಲರಿಗೂ ಉದ್ಯೋಗವನ್ನು ಖಾತ್ರಿಪಡಿಸಿಕೊಳ್ಳದೆ ನಾವು ಸಾಮಾಜಿಕ ನ್ಯಾಯವನ್ನು ಸಾಧಿಸಲು ಸಾಧ್ಯವಿಲ್ಲ.





ಮಾಜಿ ಉದ್ಯೋಗಿಯಿಂದ ಫೇಸ್ ಬುಕ್ ಭೀಕರ ಮುಖದ ಗುಟ್ಟು ರಟ್ಟು

ಫೇಸ್ ಬುಕ್ ಈ ವಾರ ಎರಡು ಕಾರಣಗಳಿಗೆ ಸುದ್ದಿಯಲ್ಲಿತ್ತು. ಎರಡೂ ಈ ಕಂಪನಿ ಮತ್ತು ಅದರ 'ಸೇವೆ'ಗಳ ಕುರಿತು ಭಯ, ಆತಂಕ ಹುಟ್ಟಿಸುವ ಕಹಿಸುದ್ದಿಗಳೇ. ಅಕ್ಟೋಬರ್ 5 ರಂದು ಸಂಜೆಯಿಂದ ಸುಮಾರು 5–6 ಗಂಟೆಗಳ ಕಾಲ ಫೇಸ್ ಬುಕ್, ವಾಟ್ಸಪ್ ಮತ್ತು ಇನ್ ಸ್ಟಾಗ್ರಾಂ ಗಳ ಸರ್ವರುಗಳು 'ಡೌನ್' ಆಗಿ ಜಗತ್ತಿನಾದ್ಯಂತ ಆ ಸೇವೆಗಳು ಮತ್ತು ಸಂಬಂಧಿತ ಸೇವೆಗಳು ಲಭ್ಯವಿಲ್ಲದೆ 'ಹಾಹಾಕಾರ' ಹಬ್ಬಿತ್ತು! ಏಕೆಂದರೆ ಈಗ ಈ ಸೇವೆಗಳು ವೈಯಕ್ತಿಕ ಜೀವನದ ಮಾತ್ರವಲ್ಲ, ಹಲವರ ವ್ಯವಹಾರದ ಜೀವನೋಪಾಯದ (ಸರಕು/ಸೇವೆಗಳ ಮಾರಾಟ, ಅದಕ್ಕೆ ಸಂಬಂಧ ಪಟ್ಟ ಸಂದೇಶ/ಮಾಹಿತಿ ವಿನಿಮಯ) 'ಆವಶ್ಯಕ' ಭಾಗವಾಗಿ ಬಿಟ್ಟಿದೆ. ಒಂದು ಕಂಪನಿಯ ಕೆಲವು ಸೇವೆಗಳು ನಮ್ಮ ಜೀವನವನ್ನು ಎಷ್ಟು ಅಲ್ಲೋಲಕಲ್ಲೋಲ ಮಾಡಬಲ್ಲವು ಎಂಬುದು ತೀವ್ರ ಅರಿವಿಗೆ ಬಂತು. ಹಿಂದೆಂದೂ ಈ ಸೇವೆಗಳು ಇಷ್ಟು ದೀರ್ಘವಾಗಿ 'ಡೌನ್' ಆಗಿರಲಿಲ್ಲ.

ಇನ್ನೊಂದು ಅದರ ಒಂದೆರಡು ದಿನಗಳ ಹಿಂದೆ ಫೇಸ್ ಬುಕ್ ನ ಮಾಜಿ ಉದ್ಯೋಗಿ ಫ್ರಾನ್ಸಸ್ ಹೌಗೆನ್ ಆ ಕಂಪನಿಯ ಹತ್ತಾರು ಸಾವಿರ ಪುಟಗಳ ದಾಖಲೆಗಳನ್ನು ಪ್ರಕಟಿಸಿ 'ಗುಟ್ಟು–ರಟ್ಟಿನ ಸೀಟಿ' (ವಿಸಲ್ ಬ್ಲೋವರ್) ಊದಿದರು. ಫೇಸ್ ಬುಕ್ ತನ್ನ ಲಾಭಕ್ಕಾಗಿ ಸಾಮಾಜಿಕ ಒಳಿತಿಗೆ ತಿಲಾಂಜಲಿ ಕೊಡುವುದು ಮಾತ್ರವಲ್ಲ, ಸಾಮಾಜಿಕ ಕೆಡುಕಿಗೆ ಪ್ರಜ್ಞಾಪೂರ್ವಕವಾಗಿ ಕುಮ್ಮಕ್ಕು ಕೊಡಲು ಹೇಸುವುದಿಲ್ಲವೆಂಬುದಕ್ಕೆ ಈ ದಾಖಲೆಗಳು ಗಟ್ಟಿಯಾದ ಪುರಾವೆ ಕೊಟ್ಟಿವೆ. ಗ್ರಾಹಕರಿಗೆ ಪೋಸ್ಟ್ ಕೊಡುವ ಫೇಸ್ ಬುಕ್ ನ 'ಗಣಿತ ವಿಧಾನ' (ಅಲ್ಗೊರಿಥಮ್) ಗಳು ತನ್ನ ವೇದಿಕೆಯಲ್ಲಿ ಗ್ರಾಹಕರು 'ಸದಾ ನಿರತ'ರಾಗಿರುವಂತೆ ಮಾಡಲು, ದ್ವೇಷಪ್ರಚಾರ ಮತ್ತು ಸುಳ್ಳು–ಸುದ್ದಿಗಳನ್ನು ಪ್ರೋತ್ಸಾಹಿಸಿ ಸಮಾಜದಲ್ಲಿ ಅಪಾಯಕಾರಿ ಧ್ರುವೀಕರಣಗಳನ್ನು ತರುತ್ತವೆ. ಫ್ರಾನ್ಸಸ್ ಕೊಟ್ಟಿರುವ ದಾಖಲೆಗಳ ಆಧಾರದ ಮೇಲೆ 'ವಾಲ್ ಸ್ಟ್ರೀಟ್ ಜರ್ನಲ್' ಫೇಸ್ ಬುಕ್ ನ ಭೀಕರ ಅಸಲಿ ಮುಖವನ್ನು ಬಯಲಿಗೆಳೆದಿದೆ. ಫ್ರಾನ್ಸಸ್ ಇತರ 'ಗುಟ್ಟು–ರಟ್ಟಿನ ಸೀಟಿ' ಊದಿದವರಂತೆ ಅಜ್ಞಾತರಾಗಿರದೆ ಬಹಿರಂಗವಾಗಿ ಈ ಕುರಿತು ಮಾತನಾಡಿದ್ದಾರೆ. ಅವರು ಸಿಬಿಎಸ್ ಟಿವಿಯ '60 ಮಿನಿಟ್ಸ್' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ್ದಾರೆ. ಸೆಕ್ಯುರಿಟಿ ಎಕ್ಸ್ ಚೇಂಜಸ್ ಕಮಿಶನ್ (SEC) ಮುಂದೆ ಫೇಸ್ ಬುಕ್ ವಿರುದ್ಧ 'ಗುಟ್ಟು–ರಟ್ಟಿನ ಸೀಟಿ' ಊದುವ 8 ದೂರುಗಳನ್ನು ದಾಖಲಿಸಿದ್ದಾರೆ. ಯು.ಎಸ್ ಕಾಂಗ್ರೆಸ್ (ಪಾರ್ಲಿಮೆಂಟಿನ ಕೆಳಸದನ) ಸದನ ಸಮಿತಿಗೆ ಸಾಕ್ಷ್ಯ ನೀಡಿದ್ದಾರೆ. ಇವೆರಡು ಕಹಿಸುದ್ದಿಗಳಿಗೆ ಸಂಬಂಧವಿತ್ತೆ ಎಂಬುದು ಇನ್ನೂ ತಿಳಿದಿಲ್ಲ.

ಇದರಲ್ಲಿ 'ದೊಡ್ಡ ಸಂಗತಿ' ಏನಿದೆ? ಇವೆಲ್ಲ ಗೊತ್ತಿದ್ದದ್ದೇ ತಾನೇ? 'ಕ್ಯಾಂಬ್ರಿಜ್ ಅನಲಿಟಿಕಾ' ಫೇಸ್ ಬುಕ್ ನೆರವಿನೊಂದಿಗೆ ಯುಕೆ ಯ ಪಾರ್ಲಿಮೆಂಟರಿ ಚುನಾವಣೆಗಳು, ಬ್ರೆಕ್ಸಿಟ್ ಜನಮತಸಂಗ್ರಹ, ಭಾರತದ ಚುನಾವಣೆಗಳಲ್ಲಿ ಭಾರೀ ದುಡ್ಡು ಕೊಟ್ಟ ದೊಡ್ಡ ಪಕ್ಷದ ಪ್ರಚಾರ ಸಂದೇಶಗಳನ್ನು 'ಪ್ರೋಮೋಟ್' ಮಾಡುವ ಮೂಲಕ ಸಹಾಯ ಮಾಡಿತ್ತು ಎಂಬ ಆಪಾದನೆ ಯಾರಿಗೆ ಗೊತ್ತಿಲ್ಲ? ಮುಜಫ್ಫರ್ ನಗರ ಮತ್ತು ದೆಹಲಿ ಭೀಕರ ಕೋಮುದಂಗೆಗಳಲ್ಲಿ, ಸಂಘಪರಿವಾರದ ಕೋಮು ದ್ವೇಷ ಪ್ರಚಾರಕ್ಕೆ ಕುಮ್ಮಕ್ಕು ಕೊಟ್ಟಿದ್ದು ಎಲ್ಲರಿಗೂ ಗೊತ್ತು. ಯು.ಎಸ್ ನ ಕ್ಯಾಪಿಟಲ್ ಹಿಲ್ ಮೇಲೆ ದಾಳಿಯ ಯೋಜಕರು ಫೇಸ್ ಬುಕ್ ಬಳಸಿ ದಾಳಿಯನ್ನು ಸಂಘಟಿಸಿದ್ದೂ ಗುಟ್ಟಲ್ಲ. ಮೋದಿ, ಟ್ರಂಪ್ ಸೇರಿದಂತೆ ಹಲವು ನಾಯಕರ ಭಾರೀ ದಶಲಕ್ಷಾಂತರ, ಕೋಟ್ಯಾಂತರ 'ಜನಪ್ರಿಯತೆ' ಸಹ ಕೃತಕ ಸೃಷ್ಟಿ ಎಂಬುದೂ ಬಹಿರಂಗ ಗುಟ್ಟು. ಫ್ರಾನ್ಸಸ್ ಕೊಟ್ಟಿರುವ ದಾಖಲೆಗಳು ಯಾವ ಹೊಸದನ್ನು ಹೇಳುತ್ತವೆ?

ಮೊದಲನೆಯದಾಗಿ, ಈ ವರೆಗೆ ಇವೆಲ್ಲ ಆಪಾದನೆಗಳು ಅಥವಾ ಫೇಸ್ ಬುಕ್ ನ ನ್ಯೂನತೆಗಳು, ತಪ್ಪುಗಳು, ಪ್ರಮಾದಗಳು, ಸಾಂದರ್ಭಿಕ ಪುರಾವೆಗಳ ಮೇಲೆ ಆಧರಿಸಿದವು. ಫ್ರಾನ್ಸಸ್ ಕೊಟ್ಟಿರುವ ದಾಖಲೆಗಳು ಇವು ಪ್ರಮಾದಗಳಲ್ಲ, ಕಂಪನಿಯ ಪ್ರಜ್ಞಾಪೂರ್ವಕ ನೀತಿಯ ಪರಿಣಾಮಗಳು ಎಂಬುದನ್ನು ಪುರಾವೆ ಸಮೇತ ಹೇಳುತ್ತವೆ. ಅದು ಉಚಿತವಾಗಿ ಕೊಡುವ ಸ್ನೇಹಿತರ ನಡುವೆ ಮಾತುಕತೆ/ಸಂದೇಶ, ಸುದ್ದಿಯ ವೇದಿಕೆ ಅಥವಾ ಮನೋರಂಜನೆ ಫೇಸ್ ಬುಕ್ ನ ಉದ್ದೇಶವೂ ಅಲ್ಲ, ವ್ಯವಹಾರವೂ ಅಲ್ಲ. ಗ್ರಾಹಕರ ಬೇಕು ಬೇಡಗಳು, ವೆಬ್ ವರ್ತನೆ, ಇತರ ಗ್ರಾಹಕರ ಜತೆ ಸಂಬಂಧಗಳ, ಅವರ ಆಳವಾದ ಪರಿಚಯ ಮಾಡಿಕೊಂಡು ಅವರನ್ನು ಫೇಸ್ ಬುಕ್ ನ ಮೇಲೆ 'ಸದಾ ನಿರತ'ರಾಗಿ ಅವರಿಗೆ ಬೇಕಾದ ಸರಕು/ಸೇವೆಗಳ ಜಾಹೀರಾತು ಕೊಡುವ ಮತ್ತು ಅದರ ಮಾರಾಟ ಖಾತ್ರಿಗೊಳಿಸುವುದು ಅದರ ವ್ಯವಹಾರದ ಗುಟ್ಟು. ಅದರ ಆದಾಯದ ಶೇ.95 ಬರುವುದು ಜಾಹೀರಾತುಗಳಿಂದ ಮತ್ತು ಅದಕ್ಕಾಗಿ ತನ್ನ ಗ್ರಾಹಕರನ್ನು ಸರಕು/ಸೇವೆಗಳ ತಯಾರಕರಿಗೆ ಮಾರಾಟ ಮಾಡುವುದರಿಂದ.

ಗ್ರಾಹಕರು ವೇದಿಕೆಯ ಮೇಲೆ 'ಸದಾ ನಿರತ'ರಾಗಿರಲು ಅಥವಾ 'ಹಿಡಿದಿಟ್ಟುಕೊಳ್ಳಲು' ಅಥವಾ ಅದಕ್ಕೆ ಧಾವಿಸಿ ಬರಲು ಆಗಾಗ 'ವೈರಲ್' ಆಗುವ ಪೋಸ್ಟ್ ಗಳು ಅದಕ್ಕೆ ಬೇಕು. ಅತಿರಂಜಿತ ನಂಬಲಸಾಧ್ಯ ಸುಳ್ಳು ಸುದ್ದಿಗಳು, ವಿಚ್ಛಿದ್ರಕಾರಕ ಪೋಸ್ಟ್ ಗಳು ಅತ್ಯಂತ ಹೆಚ್ಚು 'ವೈರಲ್' ಆಗುತ್ತವೆ. ಯಾಕೆ ಹೀಗೆ ಎಂಬುದು ಬೇರೆಯೇ ಚರ್ಚೆ. ಆದರೆ ಅದು ಕಟು ವಾಸ್ತವ. 'ನಾಯಿ ಮನುಷ್ಯನನ್ನು ಕಚ್ಚಿತು' ಎಂಬ ಸುದ್ದಿಗಿಂತ 'ಮನುಷ್ಯ ನಾಯಿಯನ್ನು ಕಚ್ಚಿದ' ಎಂಬ 'ಸುದ್ದಿ' ಎಲ್ಲರ ಗಮನ ಸೆಳೆಯುತ್ತದೆ. ಇಂತಹ 'ಅಪಾಯಕಾರಿ' ಅಥವಾ 'ಆತಂಕಕಾರಿ' ಪೋಸ್ಟ್ ಗಳನ್ನು ಹುಡುಕಲು ಫೇಸ್ ಬುಕ್ ವಿಶೇಷ 'ಗಣಿತ ವಿಧಾನ' (ಅಲ್ಗೊರಿಥಮ್) ಗಳನ್ನು ಪ್ರಜ್ಞಾಪೂರ್ವಕವಾಗಿ ಅಭಿವೃದ್ಧಿ ಪಡಿಸುತ್ತದೆ. ಈ ವಿಧಾನಗಳ ಉದ್ದೇಶವೇ 'ಆತಂಕಕಾರಿ' ಪೋಸ್ಟ್ ಗಳನ್ನು ಹುಡುಕಿ ಅವನ್ನು ವ್ಯಾಪಕವಾಗಿ ಪೋಸ್ಟ್ ಮಾಡಿ ಅವುಗಳನ್ನು ಗ್ರಾಹಕರು ಶೇರ್ ಮಾಡುವಂತೆ ಮತ್ತು 'ವೈರಲ್' ಮಾಡುವುದು ಮತ್ತು ಆ ಮೂಲಕ ಗ್ರಾಹಕರನ್ನು ಹಿಡಿದಿಟ್ಟುಕೊಳ್ಳುವುದು. ಹಾಗಾಗಿ ಇದು ಕಣ್ತಪ್ಪಿನಿಂದಾಗುವ ಪ್ರಮಾದವಲ್ಲ. ಇದರ ಪರಿಣಾಮವೇನೆಂದು ಗೊತ್ತಿದ್ದು ಮಾಡುವ ಯೋಜಿತ ಕೃತ್ಯವೆನ್ನುವುದಕ್ಕೆ ಫ್ರಾನ್ಸಸ್ ಕೊಟ್ಟಿರುವ ದಾಖಲೆಗಳು ಧಂಡಿಯಾಗಿ ಪುರಾವೆ ಕೊಟ್ಟಿವೆ.

'ಹಿಂದೆ ಆತಂಕಕಾರಿ ಪೋಸ್ಟ್ ಗಳು ವೈರಲ್ ಆಗಿ ಭಾರೀ ಟೀಕೆ ಬಂದಾಗ ಇಂತಹ ಪೋಸ್ಟ್ ಗಳನ್ನು ಗುರುತಿಸಿ ತೆಗೆದು ಹಾಕಲು, ಅದರ ಸೃಷ್ಟಿಕರ್ತರನ್ನು ನಿಷೇಧಿಸಲು ಸಿಬ್ಬಂದಿ ನೇಮಿಸಿದ್ದೇವೆಂಬ ಹೇಳಿಕೆಗಳು ಬೊಗಳೆ, ಕಣ್ಣೊರೆಸುವ ತಂತ್ರವೆಂಬುದು ಸಹ ಪುರಾವೆ ಸಹಿತ ಸಾಬೀತಾಗಿವೆ. ಅದರಲ್ಲೂ ಇಂಗ್ಲೀಷ್ ಬಿಟ್ಟು ಬೇರೆ (4 ಮತ್ತು 5 ನೇ ಸ್ಥಾನದಲ್ಲಿರುವ ಹಿಂದಿ, ಇಂಗ್ಲಿಷ್ ಸೇರಿದಂತೆ) ಪ್ರಮುಖ ಭಾಷೆಗಳಲ್ಲಿ ಇಂತಹ ಸಾಕಷ್ಟು ಸಿಬ್ಬಂದಿಯನ್ನು 'ನಾಟಕ'ಕ್ಕಾಗಿಯೂ ನೇಮಿಸದಿರುವ ಅಲಕ್ಷ ಸಹ ಈ ಭಾಷೆಗಳಲ್ಲಿ ಆತಂಕಕಾರಿ ಪೋಸ್ಟ್ ಗಳು ವೈರಲ್ ಆಗಲು ಕಾರಣವಾಗಿವೆ.

ಫೇಸ್ ಬುಕ್ ವೇದಿಕೆಯಲ್ಲಿ ಎಲ್ಲ ಆತಂಕ ಸೃಷ್ಟಿಸುವುದು ವಿಶೇಷ 'ಗಣಿತ ವಿಧಾನ' (ಅಲ್ಗೊರಿಥಮ್) ಗಳು ಮಾತ್ರವಲ್ಲ. ಅಧಿಕಾರಸ್ಥ ಅಥವಾ ಅತಿ ಹೆಚ್ಚು ದುಡ್ಡು ಕೊಡುವ' ಅತಿ ಗಣ್ಯ ವ್ಯಕ್ತಿಗಳಿಗೆ (ಉದಾ: ಸಂಘ ಪರಿವಾರದ ನಾಯಕರು) ಫೇಸ್ ಬುಕ್ ನಿಯಮಾವಳಿಗಳನ್ನು ಉಲ್ಲಂಘಿಸಿದ'ರ' ನಿಷೇಧಕ್ಕೊಳಗಾಗುವುದರಿಂದ 'ರಿಯಾಯಿತಿ' ಕೊಡುವ ವ್ಯವಸ್ಥೆ ಸಹ ಇದಕ್ಕೆ ಕಾರಣವಾಗುತ್ತದೆ. ಇದಕ್ಕೆ ಧಂಡಿಯಾದ ಪುರಾವೆಗಳು ಫ್ರಾನ್ಸಸ್ ಬಹಿರಂಗ ಪಡಿಸಿರುವ ದಾಖಲೆಗಳಲ್ಲಿವೆ. 'ಝೀರೊ ಫಿಗರ್' ಹುಚ್ಚಿಗೆ ಪ್ರೋತ್ಸಾಹ ನೀಡಿದ್ದರಿಂದ ಯುವಜನರಲ್ಲಿ ಆಗಿರುವ ವಿವಿಧ ಆರೋಗ್ಯ ಸಮಸ್ಯೆಗಳು, ಅದನ್ನು ಸಾಧಿಸುವಲ್ಲಿ ವೈಫಲ್ಯದಿಂದ ಆತ್ಮಹತ್ಯಾ ಪ್ರವೃತ್ತಿ ಸೇರಿದಂತೆ ಉಂಟಾಗುವ ಮಾನಸಿಕ ಸಮಸ್ಯೆಗಳ ಬಗ್ಗೆ ಅಧ್ಯಯನ ನಡೆಸಿದ ಫೇಸ್ ಬುಕ್ ಆ ವರದಿಯನ್ನು ನಿರ್ಲಕ್ಷ ಮಾಡಿ 'ಝೀರೊ ಫಿಗರ್' ಹುಚ್ಚಿಗೆ ಪ್ರೋತ್ಸಾಹವನ್ನು ಆರಾಮಾಗಿ ಮುಂದುವರೆಸುತ್ತದೆ ಎಂದು ಪ್ರಕಟವಾಗಿರುವ ದಾಖಲೆಗಳು ಹೇಳುತ್ತವೆ.

ಹಾಗಾದರೆ ಇದಕ್ಕೆ ಏನು ಮಾಡಬಹುದು? ಯು.ಎಸ್ ಕಾಂಗ್ರೆಸ್ ಸದನ ಸಮಿತಿಗೆ ಸಾಕ್ಷ್ಯ ಕೊಡುತ್ತಾ ಇದಕ್ಕೆ ಫ್ರಾನ್ಸಸ್ ಉತ್ತರಿಸಿದ್ದಾರೆ. ಯು.ಎಸ್ ಕಮ್ಯುನಿಕೇಶನ್ಸ್ ಅಂಡ್ ಡೀಸೆನ್ಸಿ ಆಕ್ಟ್ ನ 230 ಸೆಕ್ಶನ್ ನಲ್ಲಿ (ನಮ್ಮಲ್ಲಿ ಕಮ್ಯುನಿಕೇಶನ್ಸ್ ಆಕ್ಟ್ ನ ಸೆಕ್ಸನ್ 79) ಫೇಸ್ ಬುಕ್ ನಂತಹ 'ಮಧ್ಯಂತರ ವೇದಿಕೆ' (ತಾವೇ ಯಾವುದೇ ಮಾಹಿತಿ, ಪೋಸ್ಟ್ ಸೃಷ್ಟಿ ಮಾಡದೆ ಬರಿಯ ಗ್ರಾಹಕರ ಪೋಸ್ಟ್ ಗಳಿಗೆ ವೇದಿಕೆಯಾಗಿರುವ) ಗಳಿಗೆ ಪೋಸ್ಟ್ ಗಳಿಂದ ಯಾವುದೇ ಬಾಧ್ಯತೆಯಿಂದ ಮುಕ್ತ ಮಾಡಿರುವುದನ್ನು ತೆಗೆಯಬೇಕು. ಅವುಗಳಿಗೂ ನಿರ್ದಿಷ್ಟ ಬಾಧ್ಯತೆಯಿರಬೇಕು. ಆಗ ವಿಶೇಷ "ಗಣಿತ ವಿಧಾನ' (ಅಲ್ಗೊರಿಥಮ್) ಗಳನ್ನು ಬಳಸಿ ಆತಂಕಕಾರಿ ಪೋಸ್ಟ್ ಗಳನ್ನು ಈ ವೇದಿಕೆಗಳು ಬಿಟ್ಟು ಬಿಡಬೇಕಾಗುತ್ತದೆ. ಏಕೆಂದರೆ ನಿಜವಾಗಿಯೂ ಅಪಪಾಯಕಾರಿ ಆಗಿರುವುದು ಬಿಡಿ ಪೋಸ್ಟ್ ಗಳಲ್ಲ, ಇಂತಹ ಪೋಸ್ಟ್ ಗಳನ್ನು ಗುರುತಿಸಿ ವೈರಲ್ ಮಾಡುವ ವಿಶೇಷ "ಗಣಿತ ವಿಧಾನ' (ಅಲ್ಗೊರಿಥಮ್) ಗಳು ಎಂದಿದ್ದಾರೆ ಫ್ರಾನ್ಸಸ್.

ಸರಕಾರಗಳು, ನಿಬಂಧಕ ಸಂಸ್ಥೆಗಳು ಅಲಕ್ಷ ಮಾಡಲಾಗದ ಬಲವಾದ ಪುರಾವೆಗಳಿರುವುದರಿಂದ, ವ್ಯಾಪಕ ಜನಾಭಿಪ್ರಾಯ ರೂಪುಗೊಳ್ಳುವ ಸಾಧ್ಯತೆಯಿರುವುದರಿಂದ ಫೇಸ್ ಬುಕ್ 'ಕ್ಯಾಂಬ್ರಿಕ್ ಅನಾಲಿಟಿಕಾ' ಹಗರಣದಿಂದ ನುಣುಚಿಕೊಂಡಂತೆ ಈಗ ಸಾಧ್ಯವಾಗಲಿಕ್ಕಿಲ್ಲ. ಆದರೆ ಭಾರೀ ಆರ್ಥಿಕ ರಾಜಕೀಯ ಭಾರವಿರುವ 5 ಟ್ರಿಲಿಯನ್ ಡಾಲರ್ ಕಂಪನಿಯನ್ನು ಕಟ್ಟಿ ಹಾಕುವುದು ಅಷ್ಟು ಸುಲಭವಲ್ಲ ಕೂಡಾ. ಏನಾಗುತ್ತದೆ ಎಂದು ಕಾದು ನೋಡಬೇಕು.

(ಕೊಲಂಬಿಯದ ಎಡಶಕ್ತಿಗಳ 'ಚಾರಿತ್ರಿಕ ಒಪ್ಪಂದ' – ಪುಟ 10 ರಲ್ಲಿ) ●

JANASHAKTHI KANNADA VARA PATRIKE October 11-17, 2021 Price: Rs. 10/- Date of Publication: 8 October 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ಯುಪಿ ರೈತರ ಹತ್ಯೆ ಕರ್ನಾಟಕದಲ್ಲಿ ವ್ಯಾಪಕ ಪ್ರತಿಭಟನೆ





ಮಂಗಳೂರು


ಬೆಂಗಳೂರು



ಮೈಸೂರು



ಹಾಸನ


ಬೀದರ್


ದೊಡ್ಡಬಳ್ಳಾಪುರ



ಕುರುಗೋಡು



ಶ್ರೀನಿವಾಸಪುರ


ಮಂಡ್ಯ



ತುಮಕೂರು



ರಾಯಚೂರು

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**